# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 01 (343) / 2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಕಾರ್ಯವನ್ನು ಉತ್ತಮ ರೀತಿಯಲ್ಲಿ ಮತ್ತು ವೈಜ್ಞಾನಿಕವಾಗಿ ನಿರ್ವಹಣೆ ಮಾಡಲು ಪಾಲಿಕೆಯು ಹಲವು ಕ್ರಮಗಳನ್ನು ಕೈಗೊಂಡಿದ್ದು, ಈ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅನುವಾಗುವಂತೆ 50 ಮಂದಿ ಪರಿಸರ ಅಭಿಯಂತರರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ ಬಗ್ಗೆ ಸರ್ಕಾರಕ್ಕೆ ಕಛೇರಿ ಸಂಖ್ಯೆ:ಬಿ12(6ಎ)ಪಿಆರ್/391/2012-13, ದಿನಾಂಕ:18-10-2012 ರಂತೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ: ನಅಇ 768 ಎಂಎನ್‌ವೈ 2012, ದಿನಾಂಕ:19-10-2012ರ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ನಿರ್ವಹಣೆಯನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಅನುವಾಗುವಂತೆ ಮತ್ತು ಪ್ರಸಕ್ತ ಕಸ ವಿಲೇವಾರಿಯಲ್ಲಿ ಉದ್ಭವವಾಗಿರುವ ಸಮಸ್ಯೆಗಳ ಹಿನ್ನಲೆಯಲ್ಲಿ 50 ಪರಿಸರ ಅಭಿಯಂತರರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಷರತ್ತಿಗೊಳಪಟ್ಟು ನೇಮಕ ಮಾಡಿಕೊಳ್ಳಲು ಅನುಮೋದನೆಯನ್ನು ನೀಡಿರುತ್ತದೆ.

1. ಪರಿಸರ ಅಭಿಯಂತರರುಗಳನ್ನು ಮಾನವ ಸಂಪನ್ಮೂಲ ಸಂಸ್ಥೆ **(Manpower Agency)** ಯಿಂದ ಹೊರಗುತ್ತಿಗೆ ಆಧಾರದ ಮೂಲಕ ಒಂದು ವರ್ಷದ ಅವಧಿಗೆ ಮಾತ್ರ ನೇಮಿಸಿಕೊಳ್ಳತಕ್ಕದ್ದು.
2. ಈ ಅಭಿಯಂತರರುಗಳನ್ನು ಸದರಿ ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದಲೇ ನೇಮಕ ಮಾಡಿಕೊಳ್ಳತಕ್ಕದ್ದು.
3. ಈ ಅಭ್ಯರ್ಥಿಗಳು ಯಾವುದೇ ಕಾರಣಕ್ಕೂ ಬಿ.ಬಿ.ಎಂ.ಪಿ. ಯಲ್ಲಿ ಖಾಯಂ ಆಗಿ ಮುಂದುವರೆಯುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.
4. ಈ ಹುದ್ದೆಗಳಿಗೆ ತಗಲುವ ವೆಚ್ಚವನ್ನು ಬಿ.ಬಿ.ಎಂ.ಪಿ. ಸಂಪನ್ಮೂಲಗಳಿಂದಲೇ ಭರಿಸತಕ್ಕದ್ದು, ಯಾವುದೇ ಕಾರಣದಿಂದಲೂ ಸರ್ಕಾರದ ಅನುದಾನವನ್ನು ನೀಡಲಾಗುವುದಿಲ್ಲ.

ಇದರಂತೆ, ಮಾನವ ಸಂಪನ್ಮೂಲ ಸಂಸ್ಥೆಯಿಂದ ಹೊರಗುತ್ತಿಗೆ ಆಧಾರದ ಮೇಲೆ 50 ಮಂದಿ ಪರಿಸರ ಅಭಿಯಂತರರುಗಳನ್ನು ನೇಮಿಸಿಕೊಳ್ಳುವ ಸಂಬಂಧ ಸಂಖ್ಯೆ:ಬಿ12(6ಎ)ಪಿಆರ್/391/2012-13, ದಿನಾಂಕ: 25-10-2012ರ ರೀತ್ಯಾ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಒಬ್ಬರು ಮಾತ್ರ ಭಾಗವಹಿಸಿರುವ ಹಿನ್ನಲೆಯಲ್ಲಿ ಸಂಖ್ಯೆ:ಬಿ12(6ಎ)ಪಿಆರ್/391/2012-13, ದಿನಾಂಕ:09-11-2012ರ ರೀತ್ಯಾ ಮರು ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಈ ಕೆಳಕಂಡ ಮಾನವ ಸಂಪನ್ಮೂಲ ಸಂಸ್ಥೆಗಳು ಭಾಗವಹಿಸಿರುತ್ತಾರೆ.

1. **M/s. Wisdom Security Services**
2. **Transvision software and data solutions Pvt. Ltd.**

ಸದರಿ ಟೆಂಡರಿನ ತಾಂತ್ರಿಕ ಬಿಡ್‌ನ್ನು ದಿನಾಂಕ:24-11-2012 ರಂದು ತೆರೆದು, ಟೆಂಡರ್ ನಿಯಮಾವಳಿಗಳಂತೆ ಮೌಲ್ಯಮಾಪನವನ್ನು ಮಾಡಲಾಗಿ, **M/s. Wisdom Security Services** ಸಂಸ್ಥೆಯವರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ.

**Transvision software and data solutions Pvt. Ltd.** ಸಂಸ್ಥೆಯವರು ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ನೊಂದಣಿಯಾಗಿರುವುದಿಲ್ಲವಾದ್ದರಿಂದ ತಾಂತ್ರಿಕವಾಗಿ ಅರ್ಹರಾಗಿರುವುದಿಲ್ಲ.

.......................2

ದಿನಾಂಕ:29-11-2012 ರಂದು ಆರ್ಥಿಕ ಬಿಡ್‌ನ್ನು ತೆರೆಯಲಾಗಿದ್ದು, **M/s. Wisdom Security Services** ಸಂಸ್ಥೆಯವರು ಸಲ್ಲಿಸಿರುವ ವಿವರಗಳು ಈ ಕೆಳಕಂಡಂತೆ ಇರುತ್ತದೆ. (ಸೇವಾ ಶುಲ್ಕವನ್ನು ಹೊರತುಪಡಿಸಿ).

| Description of Posts | Qualification | Approved amount per person per month (in Rs.) | No. of Days | Rate | Basic | DA | Conveyance | Gross | P.F. | E.S.I | Service Charges | Total |
|---|---|---|---|---|---|---|---|---|---|---|---|---|
| Environmental Engineer | B.E/M.Tech (Environment)/B.E (Civil) with Minimum 2 elected subjected in Environmental Engineering | 15000-00 | Per month | 15,000-00 | 8,000-00 | 4,000-00 | 3,000-00 | 15,000-00 | 1,636-00 | 713-00 | 1,500-00 | 18,846-00 |

**Plus Service Tax as applicable will be charged on Total Billing.**

ಇದರಂತೆ, ಒಬ್ಬ ಪರಿಸರ ಅಭಿಯಂತರರಿಗೆ ಮಾಸಿಕವಾಗಿ ರೂ.18,846-00 ಪಾವತಿಸಬೇಕಾಗಿದ್ದು, ಒಟ್ಟು 50 ಮಂದಿ ಪರಿಸರ ಅಭಿಯಂತರರುಗಳಿಗೆ ಪ್ರತಿ ಮಾಹೆ ರೂ.9,42,300-00 ಗಳನ್ನು ಪಾವತಿಸಬೇಕಾಗಿರುತ್ತದೆ. ಇದರಂತೆ, 18,846-00 * 50 * 12 (ಒಂದು ವರ್ಷಕ್ಕೆ) = ರೂ.1,13,07,600-00 ಪಾವತಿಸಬೇಕಾಗಿರುತ್ತದೆ (ಸೇವಾ ಶುಲ್ಕವನ್ನು ಹೊರತುಪಡಿಸಿ).

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹನಗರ ಪಾಲಿಕೆಯ ಘನತ್ಯಾಜ್ಯ ವಸ್ತುಗಳ ನಿರ್ವಹಣೆಯ ಕೆಲಸಕಾರ್ಯಗಳ ಹಿತದೃಷ್ಟಿಯಿಂದ **M/s. Wisdom Security Services** ಸಂಸ್ಥೆಯಿಂದ ಹೊರ ಗುತ್ತಿಗೆ ಆಧಾರದ ಮೇಲೆ 50 ಮಂದಿ ಪರಿಸರ ಅಭಿಯಂತರರುಗಳನ್ನು ಒಂದು ವರ್ಷದ ಅವಧಿಗೆ ನೇಮಿಸಿಕೊಳ್ಳಲು ಸಂಬಂಧ ಕಾರ್ಯಾದೇಶ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:04-12-2012ರ ಟಿಪ್ಪಣಿ ಹಾಗೂ ದಿನಾಂಕ:22-12-2012 ರಂದು ಸಮಿತಿಯು ಅವಲೋಕಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ನೀಡಿರುವ ಮಾಹಿತಿಯನ್ನು ಪರಿಶೀಲಿಸಿದ್ದು, ಸಮಂಜಸವಾಗಿರುವುದರಿಂದ ಆಯುಕ್ತರ ದಿನಾಂಕ:04-12-2012ರ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:07-01-2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 11-01-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-01-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಪ್ರಸ್ತಾವನೆಯನ್ನು ಕೈ ಬಿಡುವುದೆಂದು ಸಭೆಯು ಸೂಚಿಸಿತು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ.

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 02 (413) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ ಎ. ಪಿಚ್ಚಮುತ್ತು, ಇವರು ಸೇವೆಯಲ್ಲಿದ್ದಾಗ, ದಿನಾಂಕ:12-06-2012 ರಂತೆ ಮನವಿ ಸಲ್ಲಿಸಿ ಪಾಲಿಕೆಯ ಕಾನೂನು ವಿಭಾಗದಲ್ಲಿ ತಾವು ಉಪ ಕಾನೂನು ಅಧಿಕಾರಿ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ಪಾಲಿಕೆಯಲ್ಲಿ ಸುಮಾರು 35 ವರ್ಷಗಳಿಂದ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದು, ದಿನಾಂಕ:31-08-2012ರಂದು ವಯೋಮಿತಿಗನುಗುಣವಾಗಿ ನಿವೃತ್ತಿ ಹೊಂದಲಿರುವುದರಿಂದ, ಸರ್ಕಾರದ ಆದೇಶದಂತೆ ನಿವೃತ್ತ ಅಧಿಕಾರಿಗಳನ್ನು 5 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ನಿಯೋಜಿಸಿಕೊಳ್ಳಲು ಅವಕಾಶವಿರುವ ಹಿನ್ನಲೆಯಲ್ಲಿ, ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಕೋರಿರುತ್ತಾರೆ.

ಈ ಸಂಬಂಧವಾಗಿ, ಕಾನೂನು ಕೋಶದ ಮುಖ್ಯಸ್ಥರು ದಿನಾಂಕ:13.06.2012 ರಂತೆ ನೀಡಿರುವ ಅಭಿಪ್ರಾಯ ವರದಿಯಲ್ಲಿ ಪ್ರಸ್ತುತ ಪಾಲಿಕೆಯ ಕಾನೂನು ವಿಭಾಗದಲ್ಲಿ ಹಿರಿಯ ಅಧಿಕಾರಿಗಳು ವಯೋನಿವೃತ್ತಿ ಹೊಂದಿರುವುದರಿಂದ, ಕಾನೂನು ವಿಭಾಗದಲ್ಲಿ ಅನುಭವವಿರುವ ಹಿರಿಯ ಅಧಿಕಾರಿಗಳ ಕೊರತೆ ಇರುವ ಹಿನ್ನಲೆಯಲ್ಲಿ ಹಾಗೂ ನಿವೃತ್ತ ಅಧಿಕಾರಿಗಳನ್ನು 5 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿ ಕೊಳ್ಳಲು ಸರ್ಕಾರದ ಆದೇಶದಂತೆ ಅವಕಾಶವಿರುವುದರಿಂದ, ಪಾಲಿಕೆಯ ಕಾನೂನು ವಿಭಾಗದ ಹಿತದೃಷ್ಟಿಯಿಂದ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ನಿವೃತ್ತಿಯ ನಂತರ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಲುಕೊಳ್ಳಲು ಹಾಗೂ ದಿನಾಂಕ:03.10.2012ರ ವರದಿಯಲ್ಲಿ ನಿಯಮಾನುಸಾರ ಪರಿಶೀಲಿಸಬಹುದಾಗಿದೆಯೆಂದು ಅಭಿಪ್ರಾಯ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ ಎ. ಪಿಚ್ಚಮುತ್ತು, ನಿವೃತ್ತ ಉಪ ಕಾನೂನು ಅಧಿಕಾರಿ, ಇವರನ್ನು 1977ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮಾವಳಿಗಳ ನಿಯಮ 20(ಎ)ರನ್ವಯ ಪಾಲಿಕೆಯ ಭೂಸ್ವಾಧೀನ ಶಾಖೆ, ಆಸ್ತಿ ಶಾಖೆ ಮತ್ತು ಜಾಹೀರಾತು ಶಾಖೆಗೆ ಸಂಬಂಧಿಸಿದಂತೆ ಎಲ್ಲಾ ನ್ಯಾಯಾಲಯ ಪ್ರಕರಣಗಳಲ್ಲಿ ಕಾನೂನು ಸಲಹೆ, ಕಂಡಿಕೆವಾರು ಉತ್ತರಗಳನ್ನು ತಯಾರಿಸುವ ಹಾಗೂ ಇತ್ಯಾದಿ ಕೆಲಸಗಳನ್ನು ನಿರ್ವಹಿಸಲು, ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಸರ್ಕಾರದ ಅನುಮೋದನೆ ಕೋರಲು ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 17-01-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-02-2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಕೆಳಕಂಡ ಮಾರ್ಪಾಡುಗಳೊಂದಿಗೆ ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:25-02-2013ರ ನಿರ್ಣಯ.

1. ಸದರಿಯವರಿಗೆ ಸಂಚಿತ ವೇತನವನ್ನು ಕೆ.ಸಿ.ಎಸ್.ಆರ್. ನಿಯಮ 313 ಬಿ(1)ರ ರೀತ್ಯಾ ಪಾವತಿಸತಕ್ಕದ್ದು.

2. ಸರ್ಕಾರದ ನಿಯಮಗಳ ಅನುಸಾರ ನಿವೃತ್ತ ಅಧಿಕಾರಿಗಳ ವಯೋಮಿತಿ ಅನುಸಾರವಾಗಿ ಮರು ನೇಮಕಾತಿ ಮಾಡಿಕೊಳ್ಳತಕ್ಕದ್ದು.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

.........................2

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 03 (414)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಉಪ ಆಯುಕ್ತರು (ಕಂದಾಯ) ರವರು ದಿನಾಂಕ:08-01-2013 ರಂದು ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ಇಲಾಖೆಯಲ್ಲಿನ ಅನೇಕ ನುರಿತ ಕಂದಾಯ ಅಧಿಕಾರಿಗಳು, ಸಹಾಯಕ ಕಂದಾಯ ಅಧಿಕಾರಿಗಳು, ಜನವರಿ-2012 ರಿಂದ ನವೆಂಬರ್-2012ರವರೆವಿಗೆ ಅತ್ಯಂತ ಹಿರಿಯ 6 ಮಂದಿ ಕಂದಾಯ ಅಧಿಕಾರಿಗಳು ಹಾಗೂ ನಾಲ್ಕು ಮಂದಿ ಸಹಾಯಕ ಕಂದಾಯ ಅಧಿಕಾರಿಗಳು ವಯೋನಿವೃತ್ತಿ ಹೊಂದಿರುತ್ತಾರೆ.

ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ 7 ನಗರಸಭೆಗಳು ಮತ್ತು 1 ಪುರಸಭೆಯ ಪ್ರದೇಶಗಳು ಸೇರಿಕೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಯಾಗಿದ್ದು, 5 ಹೊಸ ವಲಯಗಳನ್ನು ಸೃಜಿಸಲಾಗಿರುತ್ತದೆ. ಈ 5 ಹೊಸ ವಲಯ ವ್ಯಾಪ್ತಿಯಲ್ಲಿ ಬಹುತೇಕ ರೆವಿನ್ಯೂ ಬಡಾವಣೆಗಳಿದ್ದು, ಅನೇಕ ಬೃಹತ್ ವಾಣಿಜ್ಯ ಕಟ್ಟಡಗಳು ನಿರ್ಮಾಣವಾಗಿರುತ್ತದೆ. ಈ ಹೊಸ ವಲಯಗಳಲ್ಲಿ ಅನೇಕ ಕಟ್ಟಡಗಳನ್ನು ತೆರಿಗೆ ವ್ಯಾಪ್ತಿಗೆ ತರುವ ಕೆಲಸ ಹಾಗೂ ಎಸ್.ಎ.ಎಸ್. ಅರ್ಜಿಗಳನ್ನು ಪರಿಶೀಲಿಸುವ ಕೆಲಸ ನಿರ್ವಹಿಸಬೇಕಾಗಿರುತ್ತದೆ. 2008-09ನೇ ಸಾಲಿನಲ್ಲಿ ಜಾರಿಗೆ ತರಲಾದ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯ 5 ವರ್ಷದ ಬ್ಲಾಕ್ ಅವಧಿ 2012-13ಕ್ಕೆ ಮುಕ್ತಾಯಗೊಳ್ಳುತ್ತಿದ್ದು, 2013-14ನೇ ಸಾಲಿನಿಂದ ಎಸ್.ಎ.ಎಸ್ ಪದ್ಧತಿಯಲ್ಲಿನ ತೆರಿಗೆ ದರಗಳನ್ನು ಪರಿಷ್ಕರಿಸಿ ಹೊಸ ದರದಂತೆ ನಿಯಮಾವಳಿಗಳನ್ನು ರೂಪಿಸಿ ಪಾಲಿಕೆಯ ಸಭೆ ಮತ್ತು ಸರ್ಕಾರದಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ.

ಕಂದಾಯ ಇಲಾಖೆಯ ಕೆಲಸ ಕಾರ್ಯಗಳ ಬಗ್ಗೆ ಮುಖ್ಯವಾಗಿ ಆಸ್ತಿ ತೆರಿಗೆ ನಿಗಧಿ ಹಾಗೂ ವಸೂಲಾತಿ ಕ್ರಮಗಳ ಬಗ್ಗೆ 2010-11 ಮತ್ತು 2011-12ರ ಅವಧಿಯಲ್ಲಿ ಕೈಗೊಳ್ಳಲಾದ ಆಡಿಟ್ (ಎ.ಜಿ.ಆಡಿಟ್) ವರದಿಗಳಲ್ಲಿ ಮಾಡಲಾಗಿರುವ ಆಕ್ಷೇಪಣೆಗಳಿಗೆ ಸೂಕ್ತ ಉತ್ತರಗಳನ್ನು ಕಳುಹಿಸಬೇಕಾಗಿರುತ್ತದೆ. ಆಡಿಟ್ ವರದಿಗಳಲ್ಲಿ ಸೂಚಿಸಲಾಗಿರುವ ಅಂಶಗಳನ್ನು ಪರಿಶೀಲಿಸಿ, ಸೂಕ್ತ ತಿದ್ದುಪಡಿಗಳನ್ನು ಪಾಲಿಕೆಯ ಲೆಕ್ಕ ಪತ್ರಗಳಲ್ಲಿ ಅಳವಡಿಸಬೇಕಾಗಿರುತ್ತದೆ. ಈ ಕಾರ್ಯಗಳನ್ನು ಹಾಲಿ ಇರುವ ಸಹಾಯಕ ಕಂದಾಯ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಅವರಿಗೆ ಈ ಬಗ್ಗೆ ಸೂಕ್ತ ಮಾರ್ಗದರ್ಶನವನ್ನು ಅನುಭವ ಹೊಂದಿರುವ ಅಧಿಕಾರಿಗಳಿಂದ ನೀಡಬೇಕಾಗಿರುತ್ತದೆ.

ಈಗಾಗಲೇ ಹಲವಾರು ಪ್ರಕರಣಗಳಲ್ಲಿ ಸುಧಾರಣಾ ವೆಚ್ಚವನ್ನು ಕಂತುಗಳ ಮೂಲಕ ಪಾವತಿಸಲು ಆಸ್ತಿಯ ಮಾಲೀಕರುಗಳಿಗೆ ಅನುಮತಿ ನೀಡಲಾಗಿದ್ದು, ಈ ಪ್ರಕರಣಗಳಲ್ಲಿ ಬಾಕಿ ಸುಧಾರಣಾ ವೆಚ್ಚ ವಸೂಲಿ ಮಾಡಬೇಕಾಗಿರುತ್ತದೆ.

ಈ ಮೇಲಿನ ಎಲ್ಲಾ ಕೆಲಸಗಳನ್ನು ನಿರ್ವಹಣೆ ಮಾಡಲು ಹಾಗೂ ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು ಕೇವಲ ಉಪ ಆಯುಕ್ತರು (ಕಂದಾಯ) ರವರೊಬ್ಬರಿಂದ ಸಾಧ್ಯವಾಗುವುದಿಲ್ಲ ಹಾಗೂ ವಲಯ ಅಪರ/ಜಂಟಿ ಆಯುಕ್ತರು/ಉಪ ಆಯುಕ್ತರುಗಳಿಗೆ ವಲಯ ಕಛೇರಿಗಳಲ್ಲಿ ಬೇರೆ ಬೇರೆ ಕೆಲಸಗಳಿದ್ದು, ಕಂದಾಯ ಇಲಾಖೆಯ ಕೆಲಸಗಳನ್ನು ಸಮರ್ಪಕವಾಗಿ ಉಸ್ತುವಾರಿ ಮಾಡಲು ಸಾಧ್ಯವಾಗುತ್ತಿಲ್ಲ. ಅಲ್ಲದೇ, ಈಗಾಗಲೇ ಮಾನ್ಯ ಆಯುಕ್ತರು ರವರ ಆದೇಶದಂತೆ ವಿವಿಧ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳಿಂದ ವಾಣಿಜ್ಯ ಕಟ್ಟಡಗಳ ಅಳತೆ ಹಾಗೂ ಉಪಯೋಗದ ವಿವರಗಳನ್ನು ಪರಿಶೀಲಿಸಲು ಕ್ರಮ ಜರುಗಿಸಬೇಕಾಗಿದ್ದು, ಸದರಿ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಹಾಗೂ ಸಹಾಯಕ ಕಂದಾಯ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಲು ಕಂದಾಯ ಇಲಾಖೆಯಲ್ಲಿ ಉತ್ತಮ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವ ಶ್ರೀ. ಎಂ.ಮುನಿವೆಂಕಟಪ್ಪ, ನಿವೃತ್ತ ಕಂದಾಯ ಅಧಿಕಾರಿ, ಶ್ರೀ.ಕೆ.ಕೆ.ಈರಣ್ಣ, ನಿವೃತ್ತ ಕಂದಾಯ ಅಧಿಕಾರಿ ಮತ್ತು ಶ್ರೀ ಮುನಿಯಪ್ಪ, ನಿವೃತ್ತ ಕಂದಾಯ

ಅಧಿಕಾರಿ ಈ ಮೂರು ಮಂದಿ ನಿವೃತ್ತ ಕಂದಾಯ ಅಧಿಕಾರಿಗಳನ್ನು ತಾತ್ಕಾಲಿಕವಾಗಿ ಆರು ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಾಹೆಯಾನ ರೂ.15,000/- ಗಳ ಸಂಚಿತ ವೇತನದ ಮೇಲೆ ಉಪ ಆಯುಕ್ತರು (ಕಂದಾಯ) ರವರಿಗೆ ಸಹಾಯಕರಾಗಿ ಹಾಗೂ ಅವರ ಮಾರ್ಗದರ್ಶನದಲ್ಲಿ ಕೆಲಸ ನಿರ್ವಹಿಸಲು ನೇಮಿಸಿಕೊಳ್ಳಲು ಉಪ ಆಯುಕ್ತರು (ಕಂದಾಯ) ರವರು ದಿನಾಂಕ:08-01-2013ರಂತೆ ನೀಡಿರುವ ವರದಿಯನ್ವಯ, ಸದರಿ ಮೂರು ಮಂದಿ ನಿವೃತ್ತ ಕಂದಾಯ ಅಧಿಕಾರಿಗಳನ್ನು ದಿನಾಂಕ:18-01-2013ರ ಆದೇಶದಂತೆ ಉಪ ಆಯುಕ್ತರು (ಕಂದಾಯ) ರವರ ಸಹಾಯಕರಾಗಿ ಅವರ ಮಾರ್ಗದರ್ಶನದಲ್ಲಿ ತಾತ್ಕಾಲಿಕವಾಗಿ 6 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಾಹೆಯನ ರೂ.15,000/- ಗಳ ಸಂಚಿತ ವೇತನದ ಮೇಲೆ ನೇಮಿಸಿಕೊಳ್ಳಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ.ಎಂ.ಮುನಿವೆಂಕಟಪ್ಪ, ನಿವೃತ್ತ ಕಂದಾಯ ಅಧಿಕಾರಿ, ಶ್ರೀ.ಕೆ.ಕೆ.ಈರಣ್ಣ, ನಿವೃತ್ತ ಕಂದಾಯ ಅಧಿಕಾರಿ ಮತ್ತು ಶ್ರೀ ಮುನಿಯಪ್ಪ, ನಿವೃತ್ತ ಕಂದಾಯ ಅಧಿಕಾರಿ ಇವರುಗಳನ್ನು ಉಪ ಆಯುಕ್ತರು (ಕಂದಾಯ) ರವರ ಸಹಾಯಕರಾಗಿ ಅವರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸಲು ತಾತ್ಕಾಲಿಕವಾಗಿ 6 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಾಹೆಯಾನ ರೂ.15,000/- (ರೂ.ಹದಿನೈದು ಸಾವಿರ ಮಾತ್ರ) ಗಳ ಸಂಚಿತ ವೇತನದ ಮೇಲೆ ದಿನಾಂಕ:18-01-2013ರ ಆದೇಶದಂತೆ ನೇಮಿಸಿಕೊಂಡಿರುವುದಕ್ಕೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 12-02-2013 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-02-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 06 (417)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಈ ಕೆಳಕಂಡ ಭೂಭರ್ತಿ ಪ್ರದೇಶಗಳಲ್ಲಿ ಹಾಲಿ ಶೇಖರಣೆಯಾಗಿರುವ ಹಳೆಯ ಘನತ್ಯಾಜ್ಯವನ್ನು ಸಂಸ್ಕರಿಸಲು ಮತ್ತು ವಿಲೇವಾರಿ ಮಾಡುವ ಕಾಮಗಾರಿಯನ್ನು ತುರ್ತಾಗಿ ಮತ್ತು ಅತೀ ಜರೂರಾಗಿ ಕೈಗೆತ್ತಿಕೊಳ್ಳಬೇಕೆಂದು ನಿರ್ದೇಶಿಸಲಾಗಿರುತ್ತದೆ ಹಾಗೂ ಸರ್ಕಾರದ ದಿನಾಂಕ:27-11-2012 ಮತ್ತು ದಿ:07-12-2012 ರ ಪತ್ರಗಳಲ್ಲಿ ಈ ಕಾಮಗಾರಿಗೆ ಆಸಕ್ತಿ ವ್ಯಕ್ತಪಡಿಸುವಿಕೆಯ **(Expression of Interest)** ಮಾಹಿತಿ ಕೋರಲಾಗಿದೆ.

**ಭೂಭರ್ತಿ ಪ್ರದೇಶಗಳು**

ಮಂಡೂರು ಉತ್ತರ, ಮಂಡೂರು ದಕ್ಷಿಣ, ಚೀಮಸಂದ್ರ, ಮಾವಳ್ಳಿಪುರ, ಅಂಜನಾಪುರ, ಎಸ್.ಬಿಂಗೀಪುರ.

ಸದರಿ ಘನತ್ಯಾಜ್ಯ ವಿಲೇವಾರಿ ಘಟಕಗಳಲ್ಲಿ ಸುಮಾರು 1 ರಿಂದ 10 ಲಕ್ಷ ಮೆಟ್ರಿಕ್ ಟನ್ ಘನತ್ಯಾಜ್ಯವು ಲಭ್ಯವಿರುವುದಾಗಿ ಲೆಕ್ಕಾಚಾರ ಮಾಡಲಾಗಿದ್ದು, ಇದನ್ನು **MSW** ನಿಯಮಾವಳಿ 2000 ರಂತೆ ಸಂಸ್ಕರಿಸಲು ಸೂಕ್ತ ತಂತ್ರಜ್ಞಾನಗಳನ್ನು ಪ್ರಸ್ತಾಪಿಸಲು ಆಸಕ್ತಿ ವ್ಯಕ್ತಪಡಿಸುವಿಕೆಯನ್ನು **(Expression of Interest)** ಆಹ್ವಾನಿಸಲು ದಿನಾಂಕ: 18-10-2012 ರಂದು ಪೂಜ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಆಯುಕ್ತರ ಉಪಸ್ಥಿತಿಯಲ್ಲಿ ತೀರ್ಮಾನಿಸಲಾಗಿರುತ್ತದೆ. ಈ ತಂತ್ರಜ್ಞಾನವನ್ನು ಪರಿಶೀಲಿಸಲು ತಾಂತ್ರಿಕ ಸಲಹಾ ಸಮಿತಿಯನ್ನು ರಚಿಸಲಾಗಿದ್ದು, ವಿವಿಧ ಸಂಸ್ಥೆಯವರು ಪ್ರಸ್ತಾಪಿಸಿರುವ ತಂತ್ರಜ್ಞಾನವು ಈ ಕೆಳಕಂಡಂತಿರುತ್ತದೆ.

(1) ಬಯೋಮೈನಿಂಗ್.
(2) ಕಾಂಪೋಸ್ಟಿಂಗ್. ವರ್ಮಿ ಕಾಂಪೋಸ್ಟ್
(3) ಬಯೋಮೆತನೈಜೇಷನ್
(4) ಪೈರಾಲೈಸಿಸ್ ಮತ್ತು
(5) ವೇಸ್ಟ್ ಟು ಎನರ್ಜಿ

ತಾಂತ್ರಿಕ ಸಲಹಾ ಸಮಿತಿಯು ಹಲವಾರು ಸಭೆಗಳನ್ನು ಜರುಗಿಸಲಾಗಿದ್ದು, **Bio-mining Technology** ಮುಖಾಂತರ ಭೂಭರ್ತಿ ಪ್ರದೇಶಗಳಲ್ಲಿ ಸಂಗ್ರಹಿಸಲ್ಪಟ್ಟ ಸುಮಾರು 22.45 ಲಕ್ಷ ಮೆಟ್ರಿಕ್ ಟನ್ ಘನತ್ಯಾಜ್ಯ ವಸ್ತುಗಳನ್ನು **MSW Rules 2000** ಅನ್ವಯವಾಗುವಂತೆ ಸಂಸ್ಕರಿಸಲು ನಿರ್ಣಯ ನೀಡಿರುತ್ತದೆ. ಈ ಕಾಮಗಾರಿಯನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕಾಗಿರುವುದರಿಂದ ಸದರಿ ಕಾಮಗಾರಿಗೆ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲು ಕ್ರಮ ಕೈಗೊಳ್ಳಲಾಗಿದ್ದು, ಈ ಕಾಮಗಾರಿಯ ಟೆಂಡರ್ ಪ್ರಕಟಣೆಯನ್ನು ಪ್ರಮುಖ ದಿನಪತ್ರಿಕೆಗಳಲ್ಲಿ ದಿನಾಂಕ: 09-01-2013 ರಂದು ಪ್ರಕಟವಾಗಿರುತ್ತದೆ.

ಆರು ಭೂಭರ್ತಿ ಪ್ರದೇಶಗಳಲ್ಲಿ ಹಾಲಿ ಶೇಖರಣೆಯಾಗಿರುವ ಘನತ್ಯಾಜ್ಯವು ಸುಮಾರು 22,45,000 ಟನ್‌ಗಳಾಗಿದ್ದು, ಇದಕ್ಕೆ ಸೂಕ್ತ ತಾಂತ್ರಿಕ ಸರ್ವೆಗಳನ್ನು ಮಾಡಲಾಗಿದೆ. ಈ ಕಾಮಗಾರಿಯ ಪ್ರತಿ ಟನ್‌ಗೆ ಸಂಸ್ಕರಿಸಲು, ಘಟಕ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆ, ಸಾಗಾಣಿಕೆ ಮತ್ತು ವಿಲೇವಾರಿ ಮಾಡಲು ಮಾರುಕಟ್ಟೆ ದರಗಳಂತೆ ರೂ.380/- ಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದ್ದು, ಅದರಂತೆ ಈ ಕಾಮಗಾರಿಯ ಒಟ್ಟು ಅಂದಾಜು ಮೊತ್ತ, ವಿವರಗಳು ಕೆಳಕಂಡಂತಿವೆ;

| Qnty. | Rate | Amount |
|---|---|---|
| 1) 22,45,000 MT | 2) 380/- (MR) | 3) Rs.85,31,00,000 |

ಸದರಿ ಕಾಮಗಾರಿಯನ್ನು DBOO (Design Build Own and Operate) ಸ್ವರೂಪದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಮೂರು ಸಂಸ್ಥೆಯವರು ತಮ್ಮ ಟೆಂಡರ್‌ನ್ನು ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಹಾಕಿರುತ್ತಾರೆ. ಈ ಕಾಮಗಾರಿಯ ಟೆಂಡರ್‌ನ್ನು ಪರಿಶೀಲಿಸಲು **Tender evaluation Committee** ರಚಿಸಲಾಗಿರುತ್ತದೆ.

ಭೂಭರ್ತಿ ಪ್ರದೇಶಗಳನ್ನು ಆಸಕ್ತಿ ವ್ಯಕ್ತಪಡಿಸಿದ ಬಿಡ್ದುದಾರರಿಗೆ ದಿನಾಂಕ:16-01-2013 ರಂದು ತೋರಿಸಲಾಗಿರುತ್ತದೆ. ಸದರಿ ಕಾಮಗಾರಿಯ **(Calendar of Events)** ವಿವಿಧ ಕಾಮಗಾರಿಗಳ ದಿನಾಂಕಗಳನ್ನು ಗುರುತಿಸಿ ಗೌರವಾನ್ವಿತ ಉಚ್ಛ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ದಿನಾಂಕ:18-01-2013 ರಂದು ಪ್ರೀ ಬಿಡ್ ಸಭೆಯನ್ನು ನಡೆಸಲಾಗಿರುತ್ತದೆ. ಈ ಕಾಮಗಾರಿಯ ಟೆಂಡರ್‌ನ್ನು ಪರಿಶೀಲಿಸಲು **Tender evaluation Committee** ರಚಿಸಲಾಗಿದ್ದು, ದಿನಾಂಕ: 31-01-2013 ಮತ್ತು 04-02-2013 ರಂದು ಸಮಿತಿಯು ಟೆಂಡರ್‌ನ ದಾಖಲಾತಿಗಳನ್ನು ಪರಿಶೀಲಿಸಿ, **Technical bid** ನ್ನು ಅನುಮೋದಿಸಲಾಗಿದೆ. ಸಮಿತಿಯು ಸದರಿ ಕಾಮಗಾರಿಯ ಟೆಂಡರ್‌ಗೆ ಸಂಬಂಧಿಸಿದಂತೆ ಆರ್ಥಿಕ ಬಿಡ್‌ನ್ನು ತೆರೆಯಲು ಅನುಮೋದನೆ ನೀಡಿರುತ್ತದೆ.

ಅದರಂತೆ, ದಿನಾಂಕ: 08-02-2013 ರಂದು ಹಾಜರಿದ್ದ ಬಿಡ್ದುದಾರರ ಸಮ್ಮುಖದಲ್ಲಿ ಕಾಮಗಾರಿಯ ಆರ್ಥಿಕ ಬಿಡ್ಡ್ ಅನ್ನು ತೆರೆಯಲಾಗಿದ್ದು, ಗುತ್ತಿಗೆ ಸಂಸ್ಥೆಯವರು ನಮೂದಿಸಿರುವ ದರಗಳಂತೆ ಲೆಕ್ಕಾಚಾರ ಮಾಡಿದಾಗ ಸಾರಾಂಶವು ಈ ಕೆಳಗಿನಂತೆ ಇರುತ್ತದೆ.

<u>ತುಲನಾತ್ಮಕ ಪಟ್ಟಿ</u>

| Sl. No. | Land fill | AS PER ESTIMATE | | | M/S.SHAM EARTH MOVERS AND CONSTRUCTION COMPANY | | M/S.RAMKY ENVIRO ENGINEERS LIMITED | |
|---|---|---|---|---|---|---|---|---|
| | | QNTY IN LAKH TONNES | RATE IN RS. | AMOUNT IN RS. | RATE IN RS. | AMOUNT IN RS. | RATE IN RS. | AMOUNT IN RS. |
| 1 | MANDUR NORTH | 6.00 | 380 | 22,80,00,000 | 366 | 21,96,00,000 | 540 | 32,40,00,000 |
| 2 | MANDUR SOUTH | 4.00 | 380 | 15,20,00,000 | 375 | 15,00,00,000 | 600 | 24,00,00,000 |
| 3 | CHIMASANDARA | 3.00 | 380 | 11,40,00,000 | 375 | 11,25,00,000 | 600 | 18,00,00,000 |
| 4 | MAVALLIPURA | 7.00 | 380 | 26,60,00,000 | 313 | 21,91,00,000 | 540 | 37,80,00,000 |
| 5 | S. BINGIPURA | 1.45 | 380 | 5,51,00,000 | 410 | 5,94,50,000 | 657 | 9,52,65,000 |
| 6 | ANJANAPURA | 1.00 | 380 | 3,80,00,000 | 425 | 4,25,00,000 | 657 | 6,57,00,000 |
| 7 | KANNAHALLI (DELETED) | - | - | - | - | - | - | - |
| | TOTAL | 22.45 | | 85,31,00,000 | | 80,31,50,000 | | 128,29,65,000 |
| TENDER % | | | | | | (-) 4,99,50,000 5.86% below | | (+) 42,98,65,000 50.38% above |

ಮೇಲೆ ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಿದಾಗ **M/S. SHAM EARTH MOVERS AND CONSTRUCTION COMPANY, NEW MANGALORE** ರವರು ಸಲ್ಲಿಸಿರುವ ದರಗಳಂತೆ ಇವರ ಟೆಂಡರ್‌ನ ಒಟ್ಟು ಮೊತ್ತವು ರೂ.80,31,50,000/- ಗಳಾಗಿದ್ದು, ಇವರ ದರಗಳು ಮತ್ತೊಬ್ಬ ಸಂಸ್ಥೆಯವರಾದ **M/S. RAMKY ENVIRO ENGINEER LIMITED** ರವರು ನಮೂದಿಸಿರುವ ಒಟ್ಟು ಮೊತ್ತ ರೂ.128,29,65,000/- ಗಳಿಗಿಂತ ಕಡಿಮೆಯಾಗಿರುತ್ತದೆ. **M/S. SHAM EARTH MOVERS AND CONSTRUCTION COMPANY, NEW MANGALORE** ರವರ ಟೆಂಡರು ಕಡಿಮೆ ದರಗಳದಾಗಿದ್ದು, ಇವರ ಟೆಂಡರ್‌ನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

**M/S. SHAM EARTH MOVERS AND CONSTRUCTION COMPANY, NEW MANGALORE** ರವರ ಟೆಂಡರ್‌ನ ಮೊತ್ತ ರೂ.80,31,50,000/- ಗಳಾಗಿದ್ದು, ಇದನ್ನು ಅಂದಾಜಿನ ದರಗಳಂತೆ ಒಟ್ಟು ಮೊತ್ತ ರೂ.85,31,00,000/- ಕ್ಕೆ ಹೋಲಿಸಿದಾಗ ಇದು ಶೇ.5.85 ರಷ್ಟು ಕಡಿಮೆಯಾಗಿರುತ್ತದೆ. ಬಿಡ್ಡದಾರರೊಂದಿಗೆ ಸಂಧಾನವನ್ನು ಮಾಡಲಾಗಿದ್ದು, ಸಂಧಾನದ ನಂತರ ಮೊತ್ತವು ರೂ.80,21,02,000/- ಗಳಾಗಿರುತ್ತದೆ. ಇದನ್ನು ಅಂದಾಜಿನ ಮೊತ್ತ ರೂ.85,31,00,000/- ಗಳಿಗೆ ಹೋಲಿಸಿದಾಗ ಇದು ಶೇ.5.97% ಕಡಿಮೆ ಇರುತ್ತದೆ. ವಿವರಗಳು ಈ ಕೆಳಗಿನಂತೆ ಇರುತ್ತವೆ.

## ತುಲನಾತ್ಮಕ ಪಟ್ಟಿ

| Sl. No. | Land fill | AS PER ESTIMATE | | | M/S.SHAM EARTH MOVERS AND CONSTRUCTION COMPANY | | AS PER NEGOTIATED RATES | |
|---|---|---|---|---|---|---|---|---|
| | | QNTY IN LAKH TONNES | RATE IN RS. | AMOUNT IN RS. | RATE IN RS. | AMOUNT IN RS. | RATE IN RS. | AMOUNT IN RS. |
| 1 | MANDUR NORTH | 6.00 | 380 | 22,80,00,000 | 366 | 21,96,00,000 | 365.27 | 21,91,62,000 |
| 2 | MANDUR SOUTH | 4.00 | 380 | 15,20,00,000 | 375 | 15,00,00,000 | 374.25 | 14,97,00,000 |
| 3 | CHIMASANDARA | 3.00 | 380 | 11,40,00,000 | 375 | 11,25,00,000 | 374.25 | 11,22,75,000 |
| 4 | MAVALLIPURA | 7.00 | 380 | 26,60,00,000 | 313 | 21,91,00,000 | 313.00 | 21,91,00,000 |
| 5 | S. BINGIPURA | 1.45 | 380 | 5,51,00,000 | 410 | 5,94,50,000 | 410.00 | 5,94,50,000 |
| 6 | ANJANAPURA | 1.00 | 380 | 3,80,00,000 | 425 | 4,25,00,000 | 424.15 | 4,24,15,000 |
| 7 | KANNAHALLI | - | - | - | - | - | - | - |
| | TOTAL | 22.45 | | 85,31,00,000 | | 80,31,50,000 | | 80,21,02,000 |
| TENDER % | | | | | | (-) 4,99,50,000<br>5.86% BELOW | | (-) 5,09,98,000<br>5.97% BELOW |

ಅದರಂತೆ ಸದರಿ ಕಾಮಗಾರಿಗೆ ಸ್ವೀಕೃತವಾಗಿರುವ ಹಾಗೂ ಬಿಡ್ಡುದಾರರಾದ **M/S. SHAM EARTH MOVERS AND CONSTRUCTION COMPANY, NEW MANGALORE** ರವರ ಕಡಿಮೆ ದರಗಳನ್ನು ನಮೂದಿಸಿರುವ ಸಂಧಾನಿತ ಟೆಂಡರ್‌ನ ಮೊತ್ತ ರೂ.80,21,02,000 (ಶೇ.5.97 ರಷ್ಟು ಕಡಿಮೆ) ಕ್ಕೆ ಅನುಮೋದನೆ ನೀಡಲು ತೀರ್ಮಾನಕ್ಕಾಗಿ ಸಲ್ಲಿಸಿದೆ.

ಸದರಿ ಕಾಮಗಾರಿಗೆ ಸ್ವೀಕೃತವಾಗಿರುವ ಟೆಂಡರ್‌ನ ಬಿಡ್ ಪರಿಶೀಲಿಸಲು ದಿನಾಂಕ:20-02-2013 ರಂದು ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಅಪರ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) ಮತ್ತು ಮುಖ್ಯ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಸದಸ್ಯರುಗಳು ಒಳಗೊಂಡಂತೆ ಸಭೆ ಜರುಗಿಸಲಾಗಿದ್ದು, ಕಡಿಮೆ ದರಗಳನ್ನು ನಮೂದಿಸಿರುವ ಬಿಡ್ಡುದಾರರಾದ **M/S. SHAM EARTH MOVERS AND CONSTRUCTION COMPANY, NEW MANGALORE** ರವರ ಟೆಂಡರ್ ನಿಯಮಾನುಸಾರವಿರುತ್ತದೆಂದು ಅಭಿಪ್ರಾಯ ಪಡಲಾಗಿದೆ.

ಘನ ಉಚ್ಚ ನ್ಯಾಯಾಲಯವು ರಿಟ್ ಪೆಟಿಷನ್ ಸಂಖ್ಯೆ: 24739-49/2012 ರಲ್ಲಿ ಭೂಭರ್ತಿ ಪ್ರದೇಶಗಳಲ್ಲಿ ಸಂಗ್ರಹಿಸಲ್ಪಟ್ಟಿರುವ ಘನತ್ಯಾಜ್ಯ ವಸ್ತುಗಳನ್ನು ಶೀಘ್ರವಾಗಿ ಸಂಸ್ಕರಿಸಲು ನಿರ್ದೇಶಿಸಿರುವಂತೆ ಕ್ರಮ ಕೈಗೊಳ್ಳಬೇಕಾಗಿರುವುದರಿಂದ, ಸರ್ಕಾರದ ತೀರ್ಮಾನವನ್ನು ನಿರೀಕ್ಷಿಸಿ, **Letter of Award** ನೀಡುವ ಬಗ್ಗೆ ಅನುಮೋದನೆ ಹಾಗೂ ಸದರಿ ಕಾಮಗಾರಿಯ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಕೈಗೊಂಡ ಪೂರ್ವಭಾವಿ

.......................4

ಕ್ರಮವನ್ನು ಸ್ಥಿರೀಕರಿಸಲು ಕೋರುತ್ತಾ ಟೆಂಡರ್ ಅನುಮೋದನೆ ಮತ್ತು ಆಡಳಿತಾತ್ಮಕ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-02-2013 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:26-02-2013 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:26-02-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:26-02-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 07 (350)/2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ದಿನಾಂಕ:20-11-2004 ರಂದು ಕರಾರು ಮುಖಾಂತರ ಮೆ॥ ವಾಂಟೇಜ್ ಅಡ್ವರ್‌ಟೈಸಿಂಗ್ ಸಂಸ್ಥೆಯವರಿಗೆ ಏಳು ಸಂಖ್ಯೆಯ ಪಾದಚಾರಿ ಮೇಲುಸೇತುವೆಗಳನ್ನು ಬಿ.ಓ.ಟಿ. ಆಧಾರದ ಮೇಲೆ ಐದು ವರ್ಷಗಳ ಕಾಲಾವಧಿಗೆ ಜಾಹೀರಾತು ಹಕ್ಕುಗಳ ಎದುರು ವಹಿಸಿಕೊಡಲಾಗಿತ್ತು. ಪ್ರತಿಯೊಂದು ಮೇಲುಸೇತುವೆಗೆ ರೂ.10,000/- ಗಳ ಮಾಸಿಕ ಲೈಸನ್ಸ್ ಶುಲ್ಕವನ್ನು ಹಾಗೂ ಚಾಲ್ತಿಯಲ್ಲಿರುವ ಜಾಹೀರಾತು ತೆರಿಗೆಯನ್ನು ಪಾವತಿಸಲು ನಿಗಧಿಪಡಿಸಲಾಗಿತ್ತು. ಐದು ವರ್ಷಗಳ ಕರಾರಿನ ಅವಧಿಯನ್ನು ಸರ್ಕಾರದ ಅನುಮೋದನೆ ಪಡೆದು ಮುಂದಿನ 25 ವರ್ಷಗಳ ಕಾಲಾವಧಿಗೆ ವಿಸ್ತರಿಸಲು ಕರಾರು ಪತ್ರದ ಷರತ್ತು (5) ರಲ್ಲಿ ಅವಕಾಶವಿರುತ್ತದೆ. ಕರಾರು ಪತ್ರದಲ್ಲಿ ಈ ಕೆಳಕಂಡ ಏಳು ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆಗಳನ್ನು ನಿರ್ಮಿಸುವಂತೆ ಕರಾರು ಮಾಡಿಕೊಳ್ಳಲಾಗಿತ್ತು.

1. ಲಾಲ್‌ಬಾಗ್ ರಸ್ತೆ, ಮುಖ್ಯದ್ವಾರದ ಹತ್ತಿರ
2. ಜಯನಗರ 30ನೇ ಅಡ್ಡರಸ್ತೆ, ಬಸ್ ನಿಲ್ದಾಣ ಹತ್ತಿರ
3. ಕನ್ನಿಂಗ್‌ಹ್ಯಾಂ ರಸ್ತೆ, ಎಂ.ಎಸ್.ಐ.ಎಲ್. ಹತ್ತಿರ
4. ಕೆ.ಹೆಚ್.ರಸ್ತೆ, ಬಿ.ಎಂ.ಟಿ.ಸಿ. ಕಛೇರಿ ಹತ್ತಿರ
5. ಹಳೇ ವಿಮಾನ ನಿಲ್ದಾಣ ರಸ್ತೆ ಕೆಂಪ್ ಪೋರ್ಟ್ ಹತ್ತಿರ
6. ರೆಸಿಡೆನ್ಸಿ ರಸ್ತೆ, ಬಿಷಪ್ ಕಾಟನ್ ಶಾಲೆ ಹತ್ತಿರ
7. ಆರ್.ವಿ.ರಸ್ತೆ, ವಿಜಯ ಕಾಲೇಜ್ ಹತ್ತಿರ

ದಿನಾಂಕ:04-11-2009 ರಂದು ಪ್ರಧಾನ ಅಭಿಯಂತರರು ಪತ್ರ ಸಂಖ್ಯೆ:ಮುಅ(ಮಾ)ಪಿಆರ್/19/09-10, ದಿನಾಂಕ:04-11-2009 ರಂದು ಈ ಕೆಳಕಂಡ 6 ಸ್ಥಳಗಳಲ್ಲಿ ಮೇಲುಸೇತುವೆ ಪಾದಚಾರಿಗಳ ಮುಕ್ತಾಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ.

| ಕ್ರ. ಸಂ. | ಸ್ಥಳ | ಮುಕ್ತಾಯ ದಿನಾಂಕ | ವಾರ್ಷಿಕ ಲೈಸನ್ಸ್ ಶುಲ್ಕ ಮತ್ತು ತೆರಿಗೆ |
|---|---|---|---|
| 1 | ಜಯನಗರ 4ನೇ ಬ್ಲಾಕ್ | 01-09-2005 | -- |
| 2 | ರೆಸಿಡೆನ್ಸಿ ರಸ್ತೆ, ವಿಜಯ ಬ್ಯಾಂಕ್ ಹತ್ತಿರ | 01-01-2006 | ರೂ.3,23,562/- |
| 3 | ಹಳೇ ವಿಮಾನ ನಿಲ್ದಾಣ ರಸ್ತೆ, ಕೋಡಿಹಳ್ಳಿ | 01-01-2006 | ರೂ.3,18,918/- |
| 4 | ಕೇಂದ್ರಿಯ ವಿದ್ಯಾಲಯ, ಸಿ.ವಿ.ರಾಮನ್ ರಸ್ತೆ | 01-08-2006 | ರೂ.3,18,918/- |
| 5 | ಇಂದಿರಾನಗರ 100 ಅಡಿ ರಸ್ತೆ | 28-08-2006 | ರೂ.3,05,760/- |
| 6 | ಶೇಷಾದ್ರಿ ರಸ್ತೆ, ಮಹಾರಾಣಿ ಕಾಲೇಜ್ ಹತ್ತಿರ | 04-11-2006 | ರೂ.3,59,166/- |

ಮೆ॥ ಸ್ಕೈಲೈನ್ ಅಡ್ವರ್‌ಟೈಸಿಂಗ್ ಪ್ರೈ. ಲಿ. ಸಂಸ್ಥೆಯವರಿಗೆ ದಿನಾಂಕ:20-08-2006 ರಂದು ಟೆಂಡರ್ ಕರಾರಿನಂತೆ ಇಸ್ಕಾನ್ ದೇವಸ್ಥಾನ ಹತ್ತಿರ ಪಾದಚಾರಿ ಮೇಲುಸೇತುವೆಯನ್ನು ಬಿ.ಓ.ಟಿ. ಆಧಾರದ ಮೇರೆಗೆ 25 ವರ್ಷಗಳ ಕಾಲಾವಧಿಗೆ ಜಾಹೀರಾತು ಹಕ್ಕುಗಳ ಎದುರು ವಹಿಸಿಕೊಡಲಾಗಿದೆ. ಟೆಂಡರ್ ಕರಾರಿನ ಅವಧಿಯಲ್ಲಿ ಲೈಸನ್ಸ್ ಶುಲ್ಕವನ್ನು ವಿನಾಯಿತಿಸಲಾಗಿದೆ. ದಿನಾಂಕ:20-08-2007ರಂದು ಸದರಿ ಪಾದಚಾರಿ ಮೇಲುಸೇತುವೆಯನ್ನು ಪೂರ್ಣಗೊಳಿಸಿರುತ್ತಾರೆ. ಕಾರ್ಯಪಾಲಕ ಅಭಿಯಂತರರು (ರಸ್ತೆ ಅಗಲೀಕರಣ) ರವರು ದಿನಾಂಕ:04-02-2009 ರಂದು ಸಂಸ್ಥೆಯವರಿಗೆ ಪತ್ರವನ್ನು ನೀಡಿ ಇಸ್ಕಾನ್ ದೇವಸ್ಥಾನದ ಹತ್ತಿರ ಮೆಟ್ರೋ

.......................2

ಕಾಮಗಾರಿಯ ಪ್ರಯುಕ್ತ ಕೆ.ಆರ್.ಪುರಂ ಮೇಲುಸೇತುವೆ ಹತ್ತಿರ ಹಳೇ ಮದ್ರಾಸ್ ರಸ್ತೆಯಲ್ಲಿ ಸ್ಥಳಾಂತರಿಸಲು ಸೂಚಿಸಿರುತ್ತಾರೆ. ಅದರಂತೆ, ಸಂಸ್ಥೆಯವರು 20-02-2009 ರಂದು ಇಸ್ಕಾನ್ ದೇವಸ್ಥಾನದ ಹತ್ತಿರ ಇರುವ ಪಾದಚಾರಿ ಮೇಲುಸೇತುವೆಯನ್ನು ಜಾಹೀರಾತುಗಳನ್ನು ಪ್ರದರ್ಶಿಸದೇ ಸ್ಥಗಿತಗೊಳಿಸಿರುತ್ತಾರೆ. ದಿನಾಂಕ: 02-06-2009 ರಂದು ಇಸ್ಕಾನ್ ದೇವಸ್ಥಾನದಿಂದ ಕೆ.ಆರ್.ಪುರಂ ಹತ್ತಿರ ಪಾದಚಾರಿ ಮೇಲುಸೇತುವೆಯನ್ನು ಸ್ಥಳಾಂತರಿಸಲು ಕಾರ್ಯಪಾಲಕ ಅಭಿಯಂತರರು (ರಸ್ತೆ ಅಗಲೀಕರಣ-3) ರವರು ಸೂಚಿಸಿರುತ್ತಾರೆ. ಸದರಿ ಪಾದಚಾರಿ ಮೇಲುಸೇತುವೆಯ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಜಂಟಿ ಆಯುಕ್ತರು (ಜಾಹೀರಾತು) ರವರು ಪತ್ರ ಸಂಖ್ಯೆ:ಜಆ(ಜಾ)ಪಿಆರ್/34/04-05 ದಿನಾಂಕ: 11-01-2010 ರಂದು ಜಯನಗರ ಬಸ್ ನಿಲ್ದಾಣ ಹತ್ತಿರ ನಿರ್ಮಾಣಗೊಂಡಿರುವ ಪಾದಚಾರಿ ಮೇಲುಸೇತುವೆಯನ್ನು ಸೋಫಿಯಾ ಸ್ಕೂಲ್ ಹತ್ತಿರ ಸ್ಥಳಾಂತರಿಸಲು ಅನುಮೋದಿತ ನಕ್ಷೆಗಳನ್ನು ಮೆ॥ ವಾಂಟೇಜ್ ಅಡ್ವರ್‌ಟೈಸಿಂಗ್ ಸಂಸ್ಥೆಯವರಿಗೆ ರವಾನಿಸಿ ಪಾದಚಾರಿ ಮೇಲುಸೇತುವೆಯನ್ನು ಸ್ಥಳಾಂತರಿಸಲು ಸೂಚಿಸಿರುತ್ತಾರೆ.

ಜಂಟಿ ಆಯುಕ್ತರು (ಅಭಿವೃದ್ಧಿ) ರವರು ಪತ್ರ ಸಂಖ್ಯೆ:ಸಆ(ಜಾ)ಪಿಆರ್/34/04-05 ದಿನಾಂಕ: 15-09-2006 ರಂದು ಕರಾರಿನ ಸ್ಥಳವಾದ ಕನ್ನಿಂಗ್‌ಹ್ಯಾಂ ರಸ್ತೆಯ ಪಾದಚಾರಿ ಮೇಲುಸೇತುವೆಯನ್ನು ಕ್ರೈಸ್ಟ್ ಕಾಲೇಜ್ ಹತ್ತಿರ ಸ್ಥಳಾಂತರಿಸಲು ಮೆ॥ ವಾಂಟೇಜ್ ಸಂಸ್ಥೆಯವರಿಗೆ ಸೂಚಿಸಿರುತ್ತಾರೆ. ಕಾರ್ಯಪಾಲಕ ಅಭಿಯಂತರರು (ರಸ್ತೆ ಅಗಲೀಕರಣ) ರವರು ತಮ್ಮ ಪತ್ರ ಸಂಖ್ಯೆ:ಕಾಪಾಅ/ರಅ/ಪಿಆರ್/34/09-10 ದಿನಾಂಕ: 24-07-2009 ರಂದು ಪತ್ರ ಬರೆದು ಹೊಸೂರು ರಸ್ತೆ ಲಾಲ್‌ಬಾಗ್ ಮುಖ್ಯ ದ್ವಾರದಿಂದ ಯ್ಯಾಂಕಿ ಫ್ಯಾಕ್ಟರಿವರೆಗೆ 45.00 ಮೀ. ಅಗಲಕ್ಕೆ **RMP-2015** ರಂತೆ ಅಗಲೀಕರಣ ಉದ್ದೇಶಿಸಿದೆ ಎಂದು ತಿಳಿಸುತ್ತಾ, ಪಾದಚಾರಿ ಮೇಲುಸೇತುವೆಯ ನಕ್ಷೆಗಳನ್ನು ಸಲ್ಲಿಸಲು ಹಾಗೂ ಕಾಮಗಾರಿಯನ್ನು ರಸ್ತೆ ಅಗಲೀಕರಣ ಪೂರ್ಣಗೊಂಡ ನಂತರ ಪಾದಚಾರಿ ಮೇಲು ಸೇತುವೆಯನ್ನು ಪ್ರಾರಂಭಿಸಲು ಸೂಚಿಸಿರುತ್ತಾರೆ. ಬಾಕಿ ಇರುವ ಏಳನೇ ಸ್ಥಳವನ್ನು ಮಾನ್ಯ ಅಪರ ಪೊಲೀಸ್ ಆಯುಕ್ತರು (ಸಂಚಾರ) ರವರ ಪತ್ರ ಸಂಖ್ಯೆ: 230/ಸಿಬಿ/2010 ದಿನಾಂಕ:23-06-2010 ರಂತೆ ಮಾನ್ಯ ಆಯುಕ್ತರ ದಿನಾಂಕ:26-07-2010ರ ಟಿಪ್ಪಣಿ ಆದೇಶದಂತೆ ಅನುಮತಿ ಪತ್ರ ದಿನಾಂಕ:03-08-2010 ರಂತೆ ಪಾದಚಾರಿ ಮೇಲುಸೇತುವೆಯನ್ನು ಡೆಲ್ ಸಂಸ್ಥೆ ಎದುರು ಆಂತರಿಕ ವರ್ತುಲ ರಸ್ತೆಯಲ್ಲಿ ನಿರ್ಮಿಸಲು ಸೂಚಿಸಿದೆ.

ದಿನಾಂಕ:30-11-2010 ಮತ್ತು 01-12-2010 ರಂದು ಸೋಫಿಯಾ ಸ್ಕೂಲ್ ಹತ್ತಿರ ನಿರ್ಮಾಣವಾಗುತ್ತಿರುವ ಪಾದಚಾರಿ ಮೇಲುಸೇತುವೆ ದೃಢತೆ ಬಗ್ಗೆ ಡಿ.ಎನ್.ಎ. ಪತ್ರಿಕೆಯಲ್ಲಿ ವರದಿ ಪ್ರಕಟಣೆಗೊಂಡಿರುತ್ತದೆ. ಈ ವಿಷಯದ ಬಗ್ಗೆ ದಿನಾಂಕ:02-12-2010 ರಂದು ಪಾಲಿಕೆಯ ಆಯುಕ್ತರವರ ತಾಂತ್ರಿಕ ಸಲಹೆಗಾರರು ಹಾಗೂ ಪಾದಚಾರಿ ಮೇಲುಸೇತುವೆ ಉಸ್ತುವಾರಿ ವಹಿಸಿಕೊಂಡಿರುವ ಪ್ರೊ॥ ಬಿ.ಕೆ.ರಘುಪ್ರಸಾದ್‌ರವರೊಂದಿಗೆ ಸ್ಥಳ ಪರಿವೀಕ್ಷಣೆ ಮಾಡಲಾಗಿದೆ.

ಪ್ರೊ॥ಬಿ.ಕೆ.ರಘುಪ್ರಸಾದ್‌ರವರು ಪಾದಚಾರಿ ಮೇಲುಸೇತುವೆ ದೃಢತ್ವದ ಬಗ್ಗೆ ಮರು ಖಚಿತಪಡಿಸಿಕೊಳ್ಳಲು ಲೋಡ್ ಟೆಸ್ಟ್ ಮಾಡಲಾಗುವುದೆಂದು ಮತ್ತು ಅವಶ್ಯಕತೆ ತಕ್ಕಂತೆ ಬಲಪಡಿಸಲಾಗುವುದೆಂದು ತಿಳಿಸಿರುತ್ತಾರೆ. ಪರಿವೀಕ್ಷಣಾ ಸಮಯದಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿತ್ತು.

1. ಶಾಲಾ ಮಕ್ಕಳ ಹಿತದೃಷ್ಟಿಯಿಂದ 6 ಅಡಿ ಎತ್ತರದ 16 ಗೇಜ್ ಎಂ.ಎಸ್. ಗ್ರಿಲ್‌ನ್ನು ಮೆಟ್ಟಿಲು ಮತ್ತು ಪಾದಚಾರಿ ಮಾರ್ಗದ ಎರಡು ಬದಿಗಳಲ್ಲಿ ಅಳವಡಿಸಲು.
2. ಮೆಟ್ಟಿಲು ಮತ್ತು ಪಾದಚಾರಿ ಮಾರ್ಗದ ಎಲಾ ಸಂಧು (Gaps) ಗಳನ್ನು ಮುಚ್ಚಲು.
3. ಗಾಲ್ಫ್ ಕ್ಲಬ್‌ನ ಗೇಟಿನ ಹತ್ತಿರ ಒಂದು ಹೆಚ್ಚುವರಿ ಮೆಟ್ಟಿಲು ಅಳವಡಿಸಲು.
4. ಮಳೆ ಮತ್ತು ಬಿಸಿಲಿನಿಂದ ಸುರಕ್ಷಿಸಲು ಮೆಟ್ಟಿಲು ಮೇಲೆ ಚಾವಣಿ ಅಳವಡಿಸಲು.

5. ಕನಿಷ್ಟ ಮೂರು ಲಿಫ್ಟ್‌ಗಳನ್ನು ಅಳವಡಿಸಲು ಸಂಸ್ಥೆಯವರನ್ನು ಒತ್ತಾಯಿಸಲು.
6. ಪಾಲಿಕೆಯ ಅಭಿಯಂತರರಾದ ಶ್ರೀ. ಲೋಕೇಶ್‌ರವರಿಂದ ವಿನ್ಯಾಸಗಳನ್ನು ಪರಿಶೀಲಿಸಲು.

ಪಾಲಿಕೆಯ ವ್ಯಾಪ್ತಿಯಲ್ಲಿ ಈಗಾಗಲೇ ವಹಿಸಿಕೊಟ್ಟಿರುವ ಪಾದಚಾರಿ ಮೇಲುಸೇತುವೆಗಳು ನಿರ್ಮಾಣವಾಗಿರುವ ಸ್ಥಳದ ವಿವರಗಳು ಈ ಕೆಳಕಂಡಂತೆ ಇವೆ.

| ಕ್ರ ಸಂ. | ಈಗಾಲೇ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುವ ರಸ್ತೆಗಳ ಹೆಸರು | ಬದಲಾವಣೆ ಮಾಡಿರುವ ರಸ್ತೆಗಳ ಹೆಸರು | ನಿರ್ಮಾಣ ಮಾಡಿರುವ ರಸ್ತೆಗಳ ಹೆಸರು | ಷರಾ |
|---|---|---|---|---|
| 1 | ಲಾಲ್‌ಬಾಗ್ ರಸ್ತೆ ಪಶ್ಚಿಮ ಗೇಟ್ ಹತ್ತಿರ | ಇಂದಿರಾನಗರ 100 ಅಡಿ ರಸ್ತೆ (ಮೇಲುಸೇತುವೆ ಮೊದಲು) | ಇಂದಿರಾನಗರ 100 ಅಡಿ ರಸ್ತೆ (ಮೇಲುಸೇತುವೆ ಮೊದಲು) | ಕಾಮಗಾರಿ ಪೂರ್ಣಗೊಂಡಿದೆ |
| 2 | ಜಯನಗರ 4ನೇ ಬ್ಲಾಕ್ 30ನೇ ಕ್ರಾಸ್ ಬಸ್ ನಿಲ್ದಾಣದ ಹತ್ತಿರ | ಸಾರಿಗೆ ಸಂಸ್ಥೆಯವರು ಬಸ್ ನಿಲ್ದಾಣ ನಿರ್ಮಿಸಿರುವ ಪ್ರಯುಕ್ತ ಬಸವೇಶ್ವರ ವೃತ್ತ ಸೋಫಿಯಾ ಸ್ಕೂಲ್ ಎದುರಿಗೆ ಸ್ಥಳಾಂತರಿಸಲಾಗಿದೆ | ಸಾರಿಗೆ ಸಂಸ್ಥೆಯವರು ಬಸ್ ನಿಲ್ದಾಣ ನಿರ್ಮಿಸಿರುವ ಪ್ರಯುಕ್ತ ಬಸವೇಶ್ವರ ವೃತ್ತ ಸೋಫಿಯಾ ಸ್ಕೂಲ್ ಎದುರಿಗೆ ಸ್ಥಳಾಂತರಿಸಲಾಗಿದೆ | ಕಾಮಗಾರಿ ಪೂರ್ಣಗೊಂಡಿದೆ |
| 3 | ಕನ್ನಿಂಗ್ ಹ್ಯಾಂ ರಸ್ತೆ ಎಂ.ಎಸ್.ಐ.ಎಲ್. ಹತ್ತಿರ | ಕ್ರೈಸ್ಟ್ ಕಾಲೇಜ್ ಹತ್ತಿರ | ಆಂತರಿಕ ವರ್ತುಲ ರಸ್ತೆ ಡೆಲ್ ಸಂಸ್ಥೆ ಎದುರು | ನಿರ್ಮಾಣ ಹಂತದಲ್ಲಿ ಇರುತ್ತದೆ |
| 4 | ಕೆ.ಹೆಚ್.ರಸ್ತೆ ಬಿ.ಎಂ.ಟಿ.ಸಿ. ಕಛೇರಿ ಹತ್ತಿರ | ಮಹಾರಾಣಿ ಕಾಲೇಜ್ ಹತ್ತಿರ | ಮಹಾರಾಣಿ ಕಾಲೇಜ್ ಹತ್ತಿರ | ಕಾಮಗಾರಿ ಪೂರ್ಣಗೊಂಡಿದೆ |
| 5 | ವಿಮಾನ ನಿಲ್ದಾಣ ರಸ್ತೆ ಕೆಂಪ್‌ಪೋರ್ಟ್ ಹತ್ತಿರ | ಬದಲಾವಣೆ ಮಾಡಿರುವುದಿಲ್ಲ | ವಿಮಾನ ನಿಲ್ದಾಣ ರಸ್ತೆ ಕೆಂಪ್‌ಪೋರ್ಟ್ ಹತ್ತಿರ | ಕಾಮಗಾರಿ ಪೂರ್ಣಗೊಂಡಿದೆ |
| 6 | ರೆಸಿಡೆನ್ಸಿ ರಸ್ತೆ ಬಿಷಪ್ ಕಾಟನ್ ಸ್ಕೂಲ್/ ಬೆಂಗಳೂರು ಕ್ಲಬ್ | ಬದಲಾವಣೆ ಮಾಡಿರುವುದಿಲ್ಲ | ರೆಸಿಡೆನ್ಸಿ ರಸ್ತೆ ಬಿಷಪ್ ಕಾಟನ್ ಸ್ಕೂಲ್/ಬೆಂಗಳೂರು ಕ್ಲಬ್ | ಕಾಮಗಾರಿ ಪೂರ್ಣಗೊಂಡಿದೆ |
| 7 | ಆರ್.ವಿ.ರಸ್ತೆ ವಿಜಯ ಕಾಲೇಜ್ ಹತ್ತಿರ | ಸಿ.ವಿ.ರಾಮನ್ ರಸ್ತೆ | ಸಿ.ವಿ.ರಾಮನ್ ರಸ್ತೆ, ಸಿ.ಪಿ.ಆರ್.ಐ ಎದುರು | ಕಾಮಗಾರಿ ಪೂರ್ಣಗೊಂಡಿದೆ |
| 8 | ಇಸ್ಕಾನ್ ದೇವಸ್ಥಾನದ ಎದುರು | ಹಳೇ ಮದ್ರಾಸ್ ರಸ್ತೆ ಕೆ.ಆರ್.ಪುರಂ ಹತ್ತಿರ | ಹಳೇ ಮದ್ರಾಸ್ ರಸ್ತೆ ಕೆ.ಆರ್.ಪುರಂ ಹತ್ತಿರ | ಮೆಟ್ರೋ ಕಾಮಗಾರಿ ಪ್ರಯುಕ್ತ ಸ್ಥಳಾಂತರಿಸಲಾಗಿದೆ |

ದಿನಾಂಕ:27-08-2009ರ ಮಾನ್ಯ ಮುಖ್ಯಮಂತ್ರಿಗಳ ಸಲಹೆಗಾರರಾದ ಡಾ॥ ರವೀಂದ್ರರವರ ಸೂಚನೆಯಂತೆ ಜಯನಗರ 4ನೇ ಬ್ಲಾಕ್‌ನಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಾಣಗೊಂಡಿರುವ ಹಿನ್ನಲೆಯಲ್ಲಿ ಶಾಲಾ ಮಕ್ಕಳಿಗೆ ಅನುಕೂಲವಾಗುವಂತೆ ಪಾದಚಾರಿ ಮೇಲುಸೇತುವೆಯನ್ನು ಬಸವೇಶ್ವರ ವೃತ್ತ, ಸೋಫಿಯಾ ಸ್ಕೂಲ್ ಎದುರು ಸ್ಥಳಾಂತರಿಸಲು ದಿನಾಂಕ:31-08-2009 ರಂದು ವಿಶೇಷ ಆಯುಕ್ತರು (ಯೋಜನೆ) ರವರು ಅನುಮೋದಿಸಿರುತ್ತಾರೆ.

ಮೆ॥ ವಾಂಟೇಜ್ ಅಡ್ವರ್‌ಟೈಸಿಂಗ್ ಪ್ರೈ.ಲಿ. ಸಂಸ್ಥೆಯವರು ಎರಡು ರಸ್ತೆಗಳನ್ನು ದಾಟಲು ಪಾದಚಾರಿ ಮೇಲುಸೇತುವೆಯನ್ನು ನಿರ್ಮಿಸಿರುತ್ತಾರೆ. ಈಗಾಗಲೇ ವಹಿಸಿಕೊಟ್ಟಿರುವ ಕರಾರಿನಲ್ಲಿ ಪ್ರತಿಯೊಂದು ಪಾದಚಾರಿ ಮೇಲುಸೇತುವೆಗೆ ರೂ.10,000/- ಗಳ ಮಾಸಿಕ ಅಥವಾ ರೂ.1,20,000/- ಗಳ ವಾರ್ಷಿಕ ನೆಲಬಾಡಿಗೆ ಮತ್ತು ಜಾಹೀರಾತು ತೆರಿಗೆ ವಿಧಿಸಲು ಅವಕಾಶವಿರುತ್ತದೆ. 2010ನೇ ಸಾಲಿನಲ್ಲಿ ನಡೆದ ಪಾಲಿಕೆಯ ಸಭೆಯಲ್ಲಿ ಹಲವಾರು ಸದಸ್ಯರು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಪ್ರಕ್ರಿಯೆ ಜರುಗಿಸದೇ ನಿರ್ಮಾಣಗೊಂಡಿರುವ ಜಯನಗರ ಪಾದಚಾರಿ ಮೇಲುಸೇತುವೆಯನ್ನು ಬಸವೇಶ್ವರ ವೃತ್ತ, ಸೋಫಿಯಾ ವೃತ್ತದ ಹತ್ತಿರ ಸ್ಥಳಾಂತರಿಸುವ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸಿರುತ್ತಾರೆ. ಪಾಲಿಕೆಯ ವತಿಯಿಂದ ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಕರೆದಿದ್ದ

.....................4

ಟೆಂಡರ್‌ನ್ನು ಬ್ಯಾಟರಾಯನಪುರ ಹತ್ತಿರ ಪಾದಚಾರಿ ಮೇಲುಸೇತುವೆ ನಿರ್ಮಿಸಲು ರೂ.22,00,000/- ಗಳು ವಾರ್ಷಿಕ ನೆಲಬಾಡಿಗೆಯನ್ನು ನಮೂದಿಸಲಾಗಿದೆ. ಬಸವೇಶ್ವರ ವೃತ್ತ ಸೋಫಿಯಾ ಶಾಲೆ ಎದುರು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ನೆಲಬಾಡಿಗೆ ನಿಗಧಿಪಡಿಸಿದರೆ ವಾರ್ಷಿಕ ಕನಿಷ್ಟ ರೂ.5,00,000- ಗಳಿಂದ ರೂ.22,00,000/- ಗಳವರೆಗೆ ನೆಲಬಾಡಿಗೆ ನಿರೀಕ್ಷಿಸಬಹುದಾಗಿರುತ್ತದೆ ಎಂದು ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಪಾದಚಾರಿ ಮೇಲುಸೇತುವೆ ವಹಿಸಿದರೆ ಪಾಲಿಕೆಗೆ ಹೆಚ್ಚಿನ ಆದಾಯ ಬರುತ್ತದೆಂದು, ಪಾಲಿಕೆ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ದಿನಾಂಕ:28-12-2010ರ ಮತ್ತು 05-04-2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:42/10-11ರ ನಿರ್ಣಯವನ್ನು ದಿನಾಂಕ:28-06-2011 ರಂದು ಪಾಲಿಕೆಯ ಸಭೆಯಲ್ಲಿ ಚರ್ಚಿಸಿ ಏಳು ಮೇಲುಸೇತುವೆಗಳನ್ನು ಮೆ॥ ವಾಂಟೇಜ್ ಅಡ್ವರ್‌ಟೈಸಿಂಗ್ ಸಂಸ್ಥೆಯವರಿಗೆ ಹಾಗೂ ಕೆ.ಆರ್.ಪುರಂ ಪಾದಚಾರಿ ಮೇಲುಸೇತುವೆ ನಿರ್ಮಾಣ ವೆಚ್ಚವನ್ನು ಮೆ॥ ಸ್ಕೈಲೈನ್ ಅಡ್ವರ್‌ಟೈಸಿಂಗ್ ಸಂಸ್ಥೆಯವರಿಗೆ ಹಿಂದಿರುಗಿಸಿ, ಸದರಿ ಜಾಹೀರಾತು ಹಕ್ಕುಗಳನ್ನು ಟೆಂಡರ್ ಕಂ ಹರಾಜು ಮುಖಾಂತರ ವಹಿಸಿಕೊಟ್ಟಿದ್ದಲ್ಲಿ ಪಾಲಿಕೆಗೆ ಹೆಚ್ಚಿನ ಆದಾಯ ಅಂದಾಜು ರೂ.44 ಕೋಟಿಗಳು ಸಂದಾಯವಾಗಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ.

ಮಾನ್ಯ ಘನ ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂ.ಪಿ. ಸಂಖ್ಯೆ:247/2006ರ ದಾವೆಗೆ ಸಂಬಂಧಿಸಿದಂತೆ ನ್ಯಾಯಾಲಯವು ದಿನಾಂಕ:19-04-2011 ರಂದು ಈ ಕೆಳಕಂಡಂತೆ ಆದೇಶವನ್ನು ನೀಡಲಾಗಿದೆ.

**"At the present juncture, all 7 bridges awarded to respondent No.4 in furtherance of the agreement dated:20-11-2004 have been duly constructed. What has been commissioned cannot be reversed. The residents of the city of Bangalore have been benefited from the 7 "foot over-bridges" constructed by respondent no.4 to the facts and circumstances of this case, we are satisfied, that no action is called for in so far as the award of contract to respondent no.4 is concerned, and/or the terms and conditions at which the aforesaid contract was awarded".**

ಈ ರೀತಿ ನ್ಯಾಯಾಲಯದಲ್ಲಿ ಆದೇಶ ನೀಡಿರುವ ಕುರಿತು ಸದರಿ ವಿಷಯವನ್ನು ದಿನಾಂಕ:18-10-2011 ರಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ರವರಿಗೆ ಸರ್ಕಾರದ ಅನುಮೋದನೆಗಾಗಿ ಪತ್ರವನ್ನು ಕಳುಹಿಸಲಾಗಿತ್ತು. ಅದರಂತೆ, ಸರ್ಕಾರದಿಂದ ದಿನಾಂಕ:17-11-2011 ರಂದು ಹಾಗೂ ದಿನಾಂಕ:08-12-2011 ರಂದು ಕೆಲವು ಮಾಹಿತಿಗಳನ್ನು ನೀಡುವಂತೆ ಕೋರಿರುವ ಮೇರೆಗೆ ಸದರಿ ಮಾಹಿತಿಗಳನ್ನು ಒದಗಿಸಲಾಗಿತ್ತು.

ದಿನಾಂಕ:28-02-2012 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರು ಈ ಕೆಳಕಂಡಂತೆ ಸೂಚಿಸಿರುತ್ತಾರೆ.

1. ಪಾಲಿಕೆಯ ವ್ಯಾಪ್ತಿಯಲ್ಲಿ ಏಳು ಸ್ಕೈವಾಕ್‌ಗಳನ್ನು ಬಿ.ಓ.ಟಿ. ಆಧಾರದ ಮೇಲೆ ನಿರ್ಮಾಣ ಮಾಡಲು ಮೆ॥ ವಾಂಟೇಜ್ ಅಡ್ವರ್‌ಟೈಸಿಂಗ್ ಪ್ರೈ.ಲಿ., ಸಂಸ್ಥೆಗೆ ನೀಡಿರುವ ಕ್ರಮ ಸರಿಯಾಗಿದೆಯೆಂದು ಹಾಗೂ ಆ ಸಂಸ್ಥೆಯೊಂದಿಗೆ ಕರಾರು ಮಾಡಿಕೊಂಡಿರುವುದು ಸರಿಯಾದ ಕ್ರಮವಾಗಿದೆಯೆಂದು ಪಾಲಿಕೆಯು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:247/2006 ರಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರದ ಮೂಲಕ ತಿಳಿಸಿದೆ. ಆದರೆ, ಈಗ ಈ ಕ್ರಮ ಸರಿಯಿಲ್ಲವೆಂದು, ಪಾಲಿಕೆಗೆ ಹೆಚ್ಚಿನ ಆದಾಯ ಬರುತ್ತದೆಂಬ ಕಾರಣದಿಂದ ಅವರಿಗೆ ಕೊಟ್ಟಿರುವ ಅನುಮತಿಯನ್ನು ಹಿಂದಕ್ಕೆ ಪಡೆಯುವಂತೆ ತೀರ್ಮಾನಿಸಿರುವುದು ನ್ಯಾಯಾಲಯದಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ವ್ಯತಿರಿಕ್ತವಾಗುವುದಿಲ್ಲವೇ? ಎಂದು ಪ್ರಶ್ನಿಸಿರುತ್ತಾರೆ.
2. ನ್ಯಾಯಾಲಯವು ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ:247/2006 ರಲ್ಲಿ ದಿನಾಂಕ:19-04-2011 ರಲ್ಲಿ ಸಂಸ್ಥೆಯವರಿಗೆ ನೀಡಿರುವ ಅನುಮತಿಯನ್ನು ಎತ್ತಿ ಹಿಡಿದಿದ್ದು, ಈ ಅಂಶವನ್ನು ಆಯುಕ್ತರಾಗಲೀ ಅಥವಾ ಸಂಬಂಧಿಸಿದ ಅಧಿಕಾರಿಗಳಾಗಲೀ ದಿನಾಂಕ:28-06-2011 ರಂದು ನಡೆದ ಪಾಲಿಕೆಯ ಸಭೆಯ

.......................5

ಮುಂದೆ ಮಂಡಿಸದೇ ಇರುವುದನ್ನು ಗಮನಿಸಿದೆ. ಆದುದರಿಂದ, ನ್ಯಾಯಾಲಯದ ತೀರ್ಪನ್ನು ನಿಯಮಾನುಸಾರ ಪರಿಶೀಲಿಸಿ ಪಾಲಿಕೆಯ ಸಭೆಯ ಮುಂದೆ ಮಂಡಿಸಿ ವಿಷಯವನ್ನು ಪುನರ್ ಪರಿಶೀಲಿಸುವುದು ಎಂದು ಸೂಚಿಸಿರುವ ಮೇರೆಗೆ ದಿನಾಂಕ: 28-03-2012 ರಂದು ಸರ್ಕಾರವು ತಿಳಿಸಿರುವಂತೆ ಅಭಿಪ್ರಾಯ ನೀಡಲು ಕಾನೂನು ಕೋಶದ ಮುಖ್ಯಸ್ಥರಿಗೆ ಕಡತವನ್ನು ಸಲ್ಲಿಸಲಾಗಿತ್ತು. ಕಾನೂನು ಕೋಶದ ಮುಖ್ಯಸ್ಥರು ಕಡತವನ್ನು ಪರಿಶೀಲಿಸಿ ದಿನಾಂಕ:03-04-2012 ರಂದು ತಮ್ಮ ಅಭಿಪ್ರಾಯದಲ್ಲಿ ಈ ಕೆಳಕಂಡಂತೆ ಅಭಿಪ್ರಾಯವನ್ನು ಸಲ್ಲಿಸಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯದಲ್ಲಿನ ಮುಖ್ಯ ನ್ಯಾಯಾಧೀಶರ ಆದೇಶಗಳಂತೆ ಈಗಾಗಲೇ ಸದರಿ ಜಾಹೀರಾತು ಸಂಸ್ಥೆಗೆ ನೀಡಲಾಗಿರುವ ಪಾದಚಾರಿ ಮೇಲುಸೇತುವೆ ನಿರ್ಮಾಣದ ಕಾಮಗಾರಿಯನ್ನು ಪೂರೈಸಲಾಗಿದ್ದು, ಸಾರ್ವಜನಿಕರು ಇದರ ಉಪಯೋಗವನ್ನು ಪಡೆದುಕೊಳ್ಳುತ್ತಿರುವ ಹಿನ್ನಲೆಯಲ್ಲಿ ಸದರಿ ಕಾಮಗಾರಿಯನ್ನು ಹಿಂದಕ್ಕೆ ಪಡೆಯುವುದು ಕಷ್ಟ ಸಾಧ್ಯವಾದ್ದರಿಂದ ನ್ಯಾಯಾಲಯದ ಆದೇಶದಂತೆ ಸದರಿ ಜಾಹೀರಾತು ಸಂಸ್ಥೆಯವರಿಂದ ಈಗಾಗಲೇ ಟೆಂಡರ್ ನಿಯಮ, ನಿಬಂಧನೆಗಳಂತೆ ವಹಿಸಿಕೊಟ್ಟಿರುವ ಕಾಮಗಾರಿಯನ್ನು ಪೂರ್ಣಗೊಳಿಸಿರುವ ಹಿನ್ನಲೆಯಲ್ಲಿ ಸದರಿ ಸಂಸ್ಥೆಯವರು ಕರಾರಿನ ನಿಯಮ ನಿಬಂಧನೆಗಳಂತೆ ಸದರಿ ಪ್ರಸ್ತಾವನೆಯನ್ನು ಮುಂದುವರೆಸುವುದು ಸೂಕ್ತ ಹಾಗೂ ಸಮಂಜಸವೆಂದು ಅಭಿಪ್ರಾಯಿಸುತ್ತಾ ಪಾಲಿಕೆಯ ಸಭೆಯ ಮುಂದೆ ಘನ ಉಚ್ಚ ನ್ಯಾಯಾಲಯದ ಆದೇಶದ ವಿವರಣೆಗಳನ್ನು ಮಂಡಿಸಿ ಸದರಿ ವಿಷಯವನ್ನು ಪುನರ್ ಪರಿಶೀಲಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲು ಮಾನ್ಯ ಆಯುಕ್ತರವರ ಮುಖೇನ ಟಿಪ್ಪಣಿ ಮಂಡಿಸಲು ನಿಯಮಾನುಸಾರ ಮುಂದಿನ ಕ್ರಮ ತೆಗೆದುಕೊಳ್ಳುವಂತೆ ಕಾನೂನು ಕೋಶದ ಮುಖ್ಯಸ್ಥರು ಅಭಿಪ್ರಾಯವನ್ನು ನೀಡಿರುತ್ತಾರೆ.

ಅದರಂತೆ, ದಿನಾಂಕ:17-05-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿತ್ತು. ದಿನಾಂಕ:29-05-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ವಿಷಯದ ಸಂಖ್ಯೆ:125(122)/2012-13 ರಂತೆ ಮಾನ್ಯ ಆಯುಕ್ತರ ದಿನಾಂಕ: 17-05-2012ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಗಿರುತ್ತದೆ.

ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ಮೇರೆಗೆ ಮೆ॥ ವಾಂಟೇಜ್ ಅಡ್ವರ್‌ಟೈಸಿಂಗ್ ಸಂಸ್ಥೆರವರಿಗೆ ಪಾಲಿಕೆಗೆ ನೆಲಬಾಡಿಗೆ, ಜಾಹೀರಾತು ತೆರಿಗೆ ಹಾಗೂ ಸೇವಾ ತೆರಿಗೆಯನ್ನು ಒಟ್ಟು ರೂ.59,19,080/- ಗಳನ್ನು ಪಾವತಿಸಲು ದಿನಾಂಕ:02-07-2012 ರಂದು ಮಾನ್ಯ ಆಯುಕ್ತರ ಅನುಮೋದನೆ ಮೇರೆಗೆ ಸದರಿ ಸಂಸ್ಥೆರವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ದಿನಾಂಕ: 03-03-2012 ರಂದು 2006ರ ಜಾಹೀರಾತು ಬೈಲಾ ಹೊಸ ಜಾಹೀರಾತು ನೀತಿಗೆ ಹೆಚ್ಚುವರಿ ಶುಲ್ಕವನ್ನು ನಿಗಧಿಪಡಿಸಿ ನಿರ್ಣಯಿಸಲಾಗಿರುವ ತೀರ್ಮಾನವನ್ನು ದಿನಾಂಕ:19-03-2012 ರಂದು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ಸರ್ಕಾರದಿಂದ ಇಲ್ಲಿಯವರೆಗೂ ಯಾವುದೇ ರೀತಿಯ ಅನುಮೋದನೆ ದೊರೆತಿಲ್ಲದ ಕಾರಣ ಸದರಿ ಸಂಸ್ಥೆರವರಿಗೆ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ಹೆಚ್ಚುವರಿ ಮಾಡಲಾದ ಜಾಹೀರಾತು ತೆರಿಗೆಯ ದರಪಟ್ಟಿಯನ್ನು ವಿಧಿಸಿ ಸದರಿ ಸಂಸ್ಥೆರವರಿಗೆ ಡಿಮ್ಯಾಂಡ್ ನೋಟೀಸನ್ನು ಜಾರಿಗೊಳಿಸಲಾಗಿತ್ತು.

ಅದರಂತೆ, ಸದರಿ ಸಂಸ್ಥೆರವರು ಒಟ್ಟು ರೂ.40,74,513/- ಗಳನ್ನು ಪಾಲಿಕೆಗೆ ಡಿ.ಡಿ. ಮುಖಾಂತರ ಸಲ್ಲಿಸಿದ್ದು, ಸದರಿ ಡಿ.ಡಿ.ಗಳನ್ನು ಪಾಲಿಕೆಗೆ ಜಮಾ ಮಾಡಿಕೊಳ್ಳಲಾಗಿದ್ದು, ಉಳಿಕೆ ಮೊತ್ತವನ್ನು ಸರ್ಕಾರದಿಂದ ಅನುಮೋದನೆ ದೊರೆತ ನಂತರ ಪಾವತಿಸುವುದಾಗಿ ಜಾಹೀರಾತುದಾರರು ತಮ್ಮ ಮನವಿ ಪತ್ರದಲ್ಲಿ ಕೋರಿರುತ್ತಾರೆ.

ಸದರಿ ಸಂಸ್ಥೆರವರು ನಿರ್ಮಿಸಿರುವ ಮೇಲು ಸೇತುವೆ (ಸ್ಕೈ ವಾಕ್) ಗಳನ್ನು ದಿನಾಂಕ:09-11-2012 ಹಾಗೂ 29-11-2012 ರಂದು ಈ ಕಛೇರಿಯ ಕಂದಾಯ ಪರಿವೀಕ್ಷಕರು ಸ್ಥಳ ತನಿಖೆ ಮಾಡಲಾಗಿ ಸದರಿ ಸಂಸ್ಥೆರವರು ಪಾಲಿಕೆಯೊಂದಿಗೆ ಮಾಡಿಕೊಂಡಿರುವ ಕರಾರಿನ ಅನ್ವಯ ಕೆಲವು ಷರತ್ತುಗಳನ್ನು ಉಲ್ಲಂಘನೆ ಮಾಡಲಾಗಿರುವುದು ಕಂಡು ಬಂದಿರುತ್ತದೆ. ಆದ್ದರಿಂದ, ಮೆ॥ ವಾಂಟೇಜ್ ಅಡ್ವರ್‌ಟೈಸಿಂಗ್ ಸಂಸ್ಥೆರವರಿಗೆ ದಿನಾಂಕ:23-11-2012 ರಂದು ಹಾಗೂ 07-12-2012 ರಂದು ನೋಟೀಸನ್ನು ಜಾರಿಗೊಳಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರಾದ ಶ್ರೀ. ಸುರೇಶ್ ಹೆಚ್., ವಾರ್ಡ್ ನಂ.181 ರವರು ಕೆ.ಎಂ.ಸಿ. ಕಾಯ್ದೆ ನಿಯಮ 51ರ ಅಡಿಯಲ್ಲಿ ಪ್ರಸ್ತಾಪಿತ ಕಡತವನ್ನು ಕೌನ್ಸಿಲ್ ಸಭೆಗೆ ಮಂಡಿಸುವಂತೆ ಕೋರಿರುವ ಹಿನ್ನಲೆಯಲ್ಲಿ, ಕಡತವನ್ನು ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ, 1976 ರೂಲ್-51ರ ಅಡಿಯಲ್ಲಿ ಕಡತವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-01-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪಾಲಿಕೆ ಸಭೆಯಲ್ಲಿ ಈ ಹಿಂದೆ ಕೈಗೊಂಡ ನಿರ್ಣಯಕ್ಕೆ ವಿಧಾನಸೌಧ ಸುತ್ತಮುತ್ತಲಿನ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಜಾಹೀರಾತು ಫಲಕಗಳನ್ನು ಪ್ರದರ್ಶಿಸಬಾರದೆಂಬ ಅಂಶವನ್ನು ಅಳವಡಿಸಿಕೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪಾಲಿಕೆ ಸಭೆಯಲ್ಲಿ ಈ ಹಿಂದೆ ಕೈಗೊಂಡ ನಿರ್ಣಯಕ್ಕೆ ವಿಧಾನಸೌಧ ಸುತ್ತಮುತ್ತಲಿನ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಜಾಹೀರಾತು ಫಲಕಗಳನ್ನು ಪ್ರದರ್ಶಿಸಬಾರದೆಂಬ ಅಂಶವನ್ನು ಅಳವಡಿಸಿಕೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 08 (398)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸ್ಥಳಗಳಲ್ಲಿ ಬಾಡಿಗೆ ಆಧಾರದ ಮೇಲೆ "ಎಲೆಕ್ಟ್ರಾನಿಕ್ ಡಿಸ್‌ಪ್ಲೇ ಸಿಸ್ಟಂ' ಗಳನ್ನು ಅಳವಡಿಸುವ ಕುರಿತು ಟೆಂಡರ್ ಅಧಿಸೂಚನೆಯನ್ನು ಸಂಖ್ಯೆ: ಸಆ(ಜಾ)ಪಿಆರ್/12/07-08 ದಿನಾಂಕ:06.12.2007 ರಂತೆ ಪ್ರಕಟಿಸಲಾಗಿತ್ತು. ಈ ಪ್ರಕಟಣೆಗೆ ಪ್ರತಿಕ್ರಿಯಿಸಿ ಮೆ॥ ಆಡ್ ಲ್ಯಾಬ್ ಫಿಲಮ್ಸ್ ಲಿ. ಮತ್ತು ಇತರರು ತಮ್ಮ ಟೆಕ್ನಿಕಲ್ ಬಿಡ್‌ನ್ನು ಸಲ್ಲಿಸಿದ್ದರು. ಒಟ್ಟು 8 ಸಂಸ್ಥೆಗಳು ಟೆಕ್ನಿಕಲ್ ಬಿಡ್‌ನಲ್ಲಿ ಸಫಲರಾಗಿ ಟೆಂಡರ್-ಕಂ-ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಲಾಯಿತು. ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಸಂಸ್ಥೆಗಳ ಬಿಡ್ ಮೊತ್ತ ಈ ಕೆಳಕಂಡಂತೆ ಇರುತ್ತದೆ.

| Sl No. | Agency | Bid Amount |
|---|---|---|
| 1. | M/s Sujay Advertisers | 2.3 Crores |
| 2. | M/s VSR Media | 20.01 Crores |
| 3. | M/s Times Innovative Media | 44.75 Lakhs |
| 4. | M/s Hype Intergrated | 12.26 Crores |
| 5. | M/s Star Advertising | 3.49 Crores |
| 6. | M/s Prakash Arts | 2.16 Crores |
| 7. | M/s Omni Egate | 1.20 Crores |
| 8. | M/s Ad Labs Films Ltd. | 25.02 Crores |

ದಿನಾಂಕ:04.01.2008 ರಲ್ಲಿ ನಡೆದ ಟೆಂಡರ್-ಕಂ-ಹರಾಜು ಪ್ರಕ್ರಿಯೆಯಲ್ಲಿ ಮೆ॥ ಆಡ್ ಲ್ಯಾಬ್ ಫಿಲಮ್ಸ್ ಲಿ. ಇವರು ಅತಿ ಹೆಚ್ಚಿನ ದರ ನಮೂದಿಸಿದ್ದರ ಮೇರೆಗೆ ಅವರನ್ನು ಯಶಸ್ವಿ ಬಿಡ್‌ದಾರರೆಂದು ಘೋಷಿಸಿದ್ದು, ಅವರಿಂದ ನಿಗದಿತ ಪರವಾನಗಿ ಶುಲ್ಕವನ್ನು ಪಾಲಿಕೆಗೆ ಪಾವತಿಸಿಕೊಳ್ಳಲಾಗಿರುತ್ತದೆ. ಟೆಂಡರ್ ನಿಯಮಾನುಸಾರ ಕರಾರು ಪತ್ರವನ್ನು ಪಾಲಿಕೆಯೊಂದಿಗೆ ಸಹಿ ಮಾಡಿಕೊಳ್ಳಲು ಸದರಿ ಸಂಸ್ಥೆಯವರಿಗೆ ಈ ಕಛೇರಿಯಿಂದ ದಿನಾಂಕ:27.06.2008, 16.10.2008 ಮತ್ತು 13.11.2008 ರಂದು ಪತ್ರಗಳನ್ನು ಕಳುಹಿಸಲಾಗಿದ್ದು, ಆದರೆ ಸದರಿ ಸಂಸ್ಥೆಯವರು ಯಾವುದೇ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ. ಬದಲಾಗಿ ದಿನಾಂಕ:01.11.2008 ಮತ್ತು 18.11.2008 ರಂದು ಮೆ॥ ಆಡ್ ಲ್ಯಾಬ್ಸ್ ಫಿಲಮ್ಸ್ ಲಿ., (ಮೆ॥ ರಿಲಯನ್ಸ್ ಮೀಡಿಯಾ ವರ್ಲ್ಡ್ ಲಿ.,) ಪಾಲಿಕೆಗೆ ಪತ್ರಗಳನ್ನು ಬರೆದು ಕರಾರು ಪತ್ರವನ್ನು ಮಾಡಿಕೊಳ್ಳದಿರಲು ಹಲವಾರು ಆಕ್ಷೇಪಣೆಗಳು ಹಾಗೂ ಸಮಸ್ಯೆಗಳನ್ನು ಸಲ್ಲಿಸಿರುತ್ತಾರೆ. ಈ ಆಕ್ಷೇಪಣೆಗಳಿಗೆ ಪಾಲಿಕೆ ವತಿಯಿಂದ ಸೂಕ್ತ ವಿವರಣೆಯನ್ನು ಕಳುಹಿಸಿಕೊಡಲಾಗಿರುತ್ತದೆ.

ಮುಂದುವರೆದು, ಸದರಿ ಸಂಸ್ಥೆಯವರಿಗೆ ಪಾಲಿಕೆಯ ವತಿಯಿಂದ ಅಂತಿಮ ನೋಟಿಸ್ ನೀಡಿ ಕರಾರು ಪತ್ರ ಮಾಡಿಕೊಳ್ಳದೇ ಇದ್ದ ಪಕ್ಷದಲ್ಲಿ ಈಗಾಗಲೇ ಪಾವತಿಸಿರುವ (ಲೈಸನ್ಸ್ ಫೀ) ಪರವಾನಗಿ ಶುಲ್ಕ ಮತ್ತು ಇ.ಎಂ.ಡಿ. ಮೊತ್ತ ರೂ.28,31,24,720/- (ಇಪ್ಪತ್ತೆಂಟು ಕೋಟಿ ಮೂವತ್ತೊಂದು ಲಕ್ಷ ಇಪ್ಪತ್ನಾಲ್ಕು ಸಾವಿರದ ಏಳನೂರಾ ಇಪ್ಪತ್ತು ರೂಗಳು ಮಾತ್ರ) ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದು ಸೂಚಿಸಲಾಗಿರುತ್ತದೆ.

ಈ ಸಂಬಂಧ ಸದರಿ ಸಂಸ್ಥೆಯವರು ಪ್ರತ್ಯುತ್ತರವಾಗಿ ಇಂತಹ ಕ್ಲಿಷ್ಟಕರವಾದ ಪರಿಸ್ಥಿತಿಯಲ್ಲಿ ಟೆಂಡರ್ ಪ್ರಕಾರ ಕೆಲಸ ನಿರ್ವಹಣೆ ಸಾಧ್ಯವಿಲ್ಲವೆಂದು ತಿಳಿಸುತ್ತಾ ಪಾಲಿಕೆಯೇ ಎಲ್ಲಾ ವಿಳಂಬಗಳಿಗೆ ಕಾರಣವೆಂದು ಹಾಗೂ ಈ ಸನ್ನಿವೇಶದಲ್ಲಿ ಏಜೆನ್ಸಿಯು ಪಾಲಿಕೆಗೆ ಪಾವತಿಸಿರುವ (ಲೈಸನ್ಸ್ ಫೀ) ಪರವಾನಗಿ ಶುಲ್ಕ ಮತ್ತು ಇ.ಎಂ.ಡಿ. ಮೊತ್ತ ರೂ.28,31,24,720/- (ಇಪ್ಪತ್ತೆಂಟು ಕೋಟಿ ಮೂವತ್ತೊಂದು ಲಕ್ಷ ಇಪ್ಪತ್ನಾಲ್ಕು ಸಾವಿರದ ಏಳನೂರಾ ಇಪ್ಪತ್ತು ರೂಗಳು ಮಾತ್ರ) ಮೊತ್ತವನ್ನು ಏಳು ದಿನಗಳೊಳಗೆ ಮರುಪಾವತಿಸುವಂತೆ ದಿನಾಂಕ:15.05.2009 ರ ಪತ್ರದಲ್ಲಿ ಕೋರಿರುತ್ತಾರೆ. ಈ ಸಂಬಂಧ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:25.11.2009ರಂದು ಬೆಳಿಗ್ಗೆ 10.30 ಗಂಟೆಗೆ ಏರ್ಪಡಿಸಿದ ಸಭೆಯಲ್ಲಿ ಸದರಿ ಸಂಸ್ಥೆಯವರನ್ನು ಪಾಲ್ಗೊಳ್ಳಲು ಸೂಚಿಸಲಾಗಿತ್ತು.

......................2

ದಿನಾಂಕ:18.02.2010 ರಂದು ನಡೆದ ಸಭೆಯಲ್ಲಿ ಸಂಸ್ಥೆಯ ಪ್ರತಿನಿಧಿಗಳು ಹಾಜರಿದ್ದು ಎಲ್ಲಾ ವಿಷಯಗಳನ್ನು ಚರ್ಚಿಸಲಾಯಿತು. ಏಜೆನ್ಸಿಯು 2008ರಲ್ಲಿ ಗುತ್ತಿಗೆ ಕರಾರು ಪತ್ರವನ್ನು ಸಹಿ ಮಾಡದ ಪ್ರಯುಕ್ತ ಪಾಲಿಕೆಗೆ ಪ್ರತಿ ವರ್ಷಕ್ಕೆ ರೂ.25.02 ಕೋಟಿ ನಷ್ಟ ಉಂಟಾಗಿದ್ದು, ಏಜೆನ್ಸಿಯು ಪಾವತಿಸಿದ್ದ ಪರವಾನಗಿ ಶುಲ್ಕ ಮತ್ತು ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲು ನಿರ್ಧರಿಸಲಾಗಿರುವಂತೆ ಈ ಕಛೇರಿಯ ಆದೇಶ ಸಂಖ್ಯೆ:ಜಅ(ಜಾ)/ಪಿಆರ್/82/07-08 ರಂತೆ ಮೆ॥ ಆಡ್ ಲ್ಯಾಬ್ಸ್ ಫಿಲಮ್ಸ್ ಲಿಮಿಟೆಡ್ (ಮೆ॥ ರಿಲೆಯನ್ಸ್ ಮೀಡಿಯಾ ವರ್ಲ್ಡ್ ಲಿಮಿಟೆಡ್) ಸಂಸ್ಥೆಯವರು ಪಾಲಿಕೆಯ ಸ್ವತ್ತುಗಳಲ್ಲಿ 7 ಸಂಖ್ಯೆಯ LED ಫಲಕಗಳನ್ನು ಬಾಡಿಗೆ ಆಧಾರದ ಮೇಲೆ ಅಳವಡಿಸಲು ಕರೆದಿದ್ದ ಟೆಂಡರ್-ಕಂ-ಹರಾಜಿನಲ್ಲಿ ಭಾಗವಹಿಸಿ ಕರಾರು ಪತ್ರವನ್ನು ಮಾಡಿಕೊಳ್ಳದೇ ಯೋಜನೆಯನ್ನು ಜಾರಿ ಮಾಡಲು ವಿಫಲರಾಗಿರುವ ಹಿನ್ನೆಲೆಯಲ್ಲಿ ಪಾಲಿಕೆಯ ಸ್ವತ್ತುಗಳಲ್ಲಿ 7 ಸಂಖ್ಯೆಯ LED ಫಲಕಗಳನ್ನು ಬಾಡಿಗೆ ಆಧಾರದ ಮೇಲೆ ಅಳವಡಿಸಲು ಕರೆದಿದ್ದು ಟೆಂಡರ್-ಕಂ-ಹರಾಜು ಪ್ರಕಟಣೆಯನ್ನು ರದ್ದುಪಡಿಸಲಾಗಿದ್ದು ಹಾಗೂ ಭದ್ರತಾ ಠೇವಣಿ ಇಟ್ಟಿರುವ ಹಣವನ್ನು ಮತ್ತು ಪಾವತಿಸಿರುವ ಪರವಾನಗಿ ಶುಲ್ಕವನ್ನು ನಗರ ಪಾಲಿಕೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಮೆ॥ ಆಡ್ ಲ್ಯಾಬ್ಸ್ ಫಿಲಮ್ಸ್ ಲಿ., ರವರು ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ಈ ಬಗ್ಗೆ ಮನವಿಯನ್ನು ಸಲ್ಲಿಸಿ ಪಾಲಿಕೆಯು ಮುಟ್ಟುಗೋಲು ಹಾಕಿಕೊಂಡಿರುವ ಲೈಸೆನ್ಸ್ ಶುಲ್ಕ ಹಾಗೂ ಇ.ಎಂ.ಡಿ. ಮೊತ್ತವನ್ನು ಮರುಪಾವತಿ ಮಾಡುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಾಂಕ:19.04.2010ರಲ್ಲಿ ಸರ್ಕಾರವು ಸದರಿ ಪ್ರಕರಣದ ವಿವರವಾದ ವರದಿಯನ್ನು ಸಲ್ಲಿಸುವಂತೆ ಸೂಚಿಸಿರುವ ಮೇರೆಗೆ ದಿನಾಂಕ:07.05.2010ರಂದು ಸಂಬಂಧಪಟ್ಟ ಮೂಲ ಕಡತವನ್ನು ಸರ್ಕಾರಕ್ಕೆ ಕಳುಹಿಸಿಕೊಡಲಾಗಿರುತ್ತದೆ.

ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶ ಸಂಖ್ಯೆ:ನಅಇ 369 ಎಂಎನ್‌ವೈ 2010, ದಿನಾಂಕ: 01.07.2010ರ ಆದೇಶದ ಮೇರೆಗೆ ಸದರಿ ಸಂಸ್ಥೆಯಿಂದ ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದ ಭದ್ರತಾ ಠೇವಣಿ ಹಣ ಮತ್ತು ಪರವಾನಗಿ ಶುಲ್ಕವನ್ನು ಕೂಡಲೇ ಸಂಸ್ಥೆಗೆ ವಾಪಸ್ಸು ಮಾಡುವಂತೆ ಆದೇಶಿಸಲಾಗಿರುತ್ತದೆ.

ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ದಿನಾಂಕ:01.07.2010ರಂದು ನೀಡಿರುವ ನಿರ್ದೇಶನವನ್ನು ಈ ಕೆಳಕಂಡ ಅಂಶಗಳ ಹಿನ್ನೆಲೆಯಲ್ಲಿ ಮರು ಪರಿಶೀಲಿಸುವಂತೆ ಕೋರಲಾಗಿರುತ್ತದೆ.

1. ಟೆಂಡರ್ ಅಧಿಸೂಚನೆ Clause 9 (Appendix A) ಮೇರೆಗೆ ಟೆಂಡರಿನಲ್ಲಿ LED ಜಾಹೀರಾತುಗಳನ್ನು ಅಳವಡಿಸುವ ಸ್ವತ್ತುಗಳನ್ನು ಪರಮಾರ್ಶಿಸಿ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ತದನಂತರ ಬಿಡ್ಡುಗಳನ್ನು ಸಲ್ಲಿಸಬೇಕೆಂದು ತಿಳಿಸಲಾಗಿದೆ. ಟೆಂಡರ್ ಪ್ರಕಟಣೆ ದಿನಾಂಕದಿಂದ ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸುವ ದಿನಾಂಕದವರೆವಿಗೂ ಒಂದು ತಿಂಗಳ ಕಾಲಾವಕಾಶ ಇದ್ದರಿಂದ ಏಜೆನ್ಸಿಯವರು ಈ ಸ್ಥಳಗಳಲ್ಲಿ ಜಾಹೀರಾತುಗಳನ್ನು ಅಳವಡಿಸುವ ನಿಟ್ಟಿನಲ್ಲಿ ಆಗಬಹುದಾದ ಸಾಧಕಬಾಧಕಗಳನ್ನು ಮನಗಂಡೇ ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರೆಂದು ಭಾವಿಸಬೇಕಿರುತ್ತದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಜಾಹೀರಾತುಗಳನ್ನು ಅಳವಡಿಸಲು ಈ ಸ್ಥಳಗಳು ಆರ್ಥಿಕ ದೃಷ್ಟಿಯಿಂದ ಸರಿಯಿರುವುದಿಲ್ಲವೆಂಬ ಏಜೆನ್ಸಿಯ ವಾದವನ್ನು ಒಪ್ಪಲಾಗುವುದಿಲ್ಲ.

2. Clause 13 (Appendix A) ಮೇರೆಗೆ ಪಾಲಿಕೆಯು ಬಿಡ್ಡನ್ನು ಒಪ್ಪಿದ ಕೂಡಲೇ ಅಂತಹ ಏಜೆನ್ಸಿಯು ಜಾಹೀರಾತು ಅಳವಡಿಕೆ ಬಗ್ಗೆ ಕರಾರನ್ನು ಸಹಿ ಮಾಡುವ ನಿಬಂಧನೆ ಇರುತ್ತದೆ. ಆದರೆ, ಈ ಪ್ರಕರಣದಲ್ಲಿ 27.06.2008ರಂದು ಸದರಿ ಏಜೆನ್ಸಿಯ ಬಿಡ್ಡನ್ನು ಒಪ್ಪಿಕೊಳ್ಳಲಾಗಿದೆಯೆಂದು ಹಾಗೂ ಈ ಬಗ್ಗೆ ಕರಾರರನ್ನು ಮಾಡಿಕೊಳ್ಳಲು ಕ್ರಮ ಕೈಗೊಳ್ಳುವಂತೆ ಏಜೆನ್ಸಿಗೆ ಪಾಲಿಕೆ ವತಿಯಿಂದ ಸ್ಪಷ್ಟವಾಗಿ ತಿಳಿಯಪಡಿಸಲಾಗಿದೆ. ತದನಂತರವೂ ಸಹ ಏಜೆನ್ಸಿಗೆ ಕರಾರು ಪತ್ರವನ್ನು ಮಾಡಿಕೊಳ್ಳುವ ಬಗ್ಗೆ ಸಾಕಷ್ಟು ತಿಳುವಳಿಕೆ ನೀಡಲಾಗಿದೆ.

......................3

3. Clause 14 (Appendix A) ಮೇರೆಗೆ ಟೆಂಡರುದಾರರು ಒಪ್ಪಿಗೆ ಪತ್ರ ಪಡೆದ 15 ದಿನಗಳೊಳಗೆ ಪೂರ್ಣ ಬಿಡ್ಡು ಮೊತ್ತವನ್ನು ಏಜೆನ್ಸಿ ಪಾವತಿಸಬೇಕಿರುತ್ತದೆ ಹಾಗೂ ಈ ಬಗ್ಗೆ ಕರಾರನ್ನು ಸಹ ಸಹಿ ಮಾಡಬೇಕಿರುತ್ತದೆ. ಈ ಪ್ರಕರಣದಲ್ಲಿ ಟೆಂಡರುದಾರರು ಹಣವನ್ನು ಪಾವತಿಸಿರುತ್ತಾರೆ. ಆದರೆ ಕರಾರನ್ನು ಸಹಿ ಮಾಡಲು ವಿಳಂಬ ಮಾಡಿರುವುದು ಏಜೆನ್ಸಿಯ ವತಿಯಿಂದಲೇ ಹೊರತು ಪಾಲಿಕೆಯ ವತಿಯಿಂದಲ್ಲ. ಆದ್ದರಿಂದ ಕರಾರನ್ನು ಸಹಿ ಮಾಡದೇ ಇರುವ ಜವಾಬ್ದಾರಿಯನ್ನು ಪಾಲಿಕೆಯ ಮೇಲೆ ಹೊರಸುವುದು ಯಾವುದೇ ದೃಷ್ಟಿಕೋನದಿಂದಲೂ ಸರಿಯೆಂದು ಕಂಡು ಬರುವುದಿಲ್ಲ.

4. Clause 15 (Appendix A) ಪ್ರಕಾರ ಬಿಡ್ಡುದಾರರು ಕರಾರನ್ನು ಸಹಿ ಮಾಡಿ 15 ದಿನಗಳೊಳಗಾಗಿ ಜಾಹೀರಾತುಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಬೇಕೆಂದು ಇಲ್ಲದಿದ್ದ ಪಕ್ಷದಲ್ಲಿ ಕರಾರನ್ನು ಉಲ್ಲಂಘಿಸಿದಂತೆ ಪರಿಗಣಿಸಿ ಟೆಂಡರುದಾರರು ಪಾವತಿಸಿರುವ ಸೆಕ್ಯೂರಿಟಿ ಡಿಪಾಸಿಟ್ ಮತ್ತು ಬಿಡ್ಡು ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವಂಥೆ ವಿಧಿಸಲಾಗಿದೆ. ಈ ಪ್ರಕರಣದಲ್ಲಿ ಒಪ್ಪಿಗೆ ಪತ್ರವನ್ನು ದಿನಾಂಕ:27.06.2008 ರಂದು ನೀಡಿ ಏಜೆನ್ಸಿಯು ಟೆಂಡರ್ ಷರತ್ತುಗಳನ್ನು ಸುಮಾರು ಎರಡು ವರ್ಷ ಅವಧಿ ಕಳೆದರೂ ಸಹ ಪಾಲಿಸದಿದ್ದ ಕಾರಣ ಇ.ಎಂ.ಡಿ. ಮತ್ತು ಲೈಸೆನ್ಸ್ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

5. ಟೆಂಡರ್ ಷರತ್ತುಗಳು ಕರಾರಿನ ಅವಿಭಾಜ್ಯ ಅಂಗವಾಗಿರುವುದರಿಂದ ಹಾಗೂ ಟೆಂಡರ್ ಷರತ್ತುಗಳನ್ನು ಸಂಪೂರ್ಣವಾಗಿ ಏಜೆನ್ಸಿಯು ಉಲ್ಲಂಘಿಸಿರುವುದರಿಂದ ಲೈಸೆನ್ಸ್ ಫೀ ಮತ್ತು ಇ.ಎಂ.ಡಿ. ಮೊತ್ತವನ್ನು ಪಾಲಿಕೆ ಮುಟ್ಟುಗೋಲು ಹಾಕಿಕೊಂಡಿರುವುದು ಸರಿಯಿರುತ್ತದೆ. ಕರಾರನ್ನು ಸಹಿ ಮಾಡಿಲ್ಲವೆಂಬ ಏಕೈಕ ಕಾರಣಕ್ಕೆ ಈ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡಿರುವುದು ಸರಿಯಿಲ್ಲವೆಂಬ ನಿರ್ಧಾರಕ್ಕೆ ಬರುವುದು ಸರಿಯಿರುವುದಿಲ್ಲ.

6. ಈ ಪ್ರಕರಣದ ಎಲ್ಲಾ ಆಗುಹೋಗುಗಳನ್ನು ಸಮಗ್ರವಾಗಿ ಪರಿಶೀಲಿಸಿ ನಿರ್ಧಾರಕ್ಕೆ ಬರುವುದು ಸರಿಯಾದ ಮಾರ್ಗವೆನಿಸುತ್ತದೆ. ಏಜೆನ್ಸಿಗೆ ಪಾಲಿಕೆ ವತಿಯಿಂದ ಒಪ್ಪಿಗೆ ಪತ್ರ ನೀಡಿ ಎರಡು ವರ್ಷ ಕಳೆದಿರುವುದರಿಂದ ಏಜೆನ್ಸಿಯು ಎರಡು ವರ್ಷದ ಲೈಸೆನ್ಸ್ ಫೀ ಅಂದರೆ ರೂ.50.04 ಕೋಟಿ ಮೊತ್ತವನ್ನು ನಿಯಮಾನುಸಾರ ಪಾಲಿಕೆಗೆ ಸಂದಾಯ ಮಾಡಬೇಕಿರುತ್ತದೆ.

7. ಮೆ॥ ಆಡ್ ಲ್ಯಾಬ್ ಫಿಲಮ್ಸ್ ಲಿ. ಇವರು ಅತಿ ಹೆಚ್ಚಿನ ಮೊತ್ತವನ್ನು ಬಿಡ್‌ನಲ್ಲಿ ನಮೂದಿಸಿದ್ದು, (H1) ಬಿಡ್ಡುದಾರರಾಗಿರುತ್ತದೆ. ಇವರ ನಂತರದ ಎರಡನೇ ಅತಿ ಹೆಚ್ಚಿನ ಬಿಡ್ಡುದಾರರಾದ (H2) M/s. VSR Media ಇವರಿಗೆ ಟೆಂಡರನ್ನು ವಹಿಸಿಕೊಟ್ಟಿದ್ದಲ್ಲಿ ಪಾಲಿಕೆಗೆ ಎರಡು ವರ್ಷಕ್ಕೆ ರೂ.40.02 ಕೋಟಿ ಸಂದಾಯ ವೃದ್ಧಿಯಾಗುತ್ತಿತ್ತು.

ಈ ಎಲ್ಲಾ ಅಂಶಗಳನ್ನು ಹಾಗೂ ಈ ವಿಷಯಕ್ಕೆ ಸಂಬಂಧಿಸಿದ ಸಂಪೂರ್ಣ ವಿವರಗಳನ್ನು ದಿನಾಂಕ:20.07.2010ರಂದು ಸರ್ಕಾರಕ್ಕೆ ಮತ್ತೊಮ್ಮೆ ಕಳುಹಿಸಿದ್ದು, ವಾಸ್ತವಾಂಶವನ್ನು ಸರ್ಕಾರದ ಗಮನಕ್ಕೆ ತಂದು ಪಾಲಿಕೆಯ ನಿಲುವನ್ನು ಎತ್ತಿಹಿಡಿಯುವಂತೆ ಕೋರಲಾಗಿರುತ್ತದೆ.

ಆದರೆ, ಮೆ॥ ಆಡ್ ಲ್ಯಾಬ್ಸ್ ಸಂಸ್ಥೆಯವರು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ರವರಿಗೆ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮೇಲ್ಮನವಿ ಸಲ್ಲಿಸಿದ್ದು, ಈ ಮೇಲ್ಮನವಿಗೆ ಸರ್ಕಾರವು ದಿನಾಂಕ:04.12.2010, 10.01.2011, 07.02.2011, 15.07.2011, 05.09.2011, 29.06.2012ರಂದು ವಿಚಾರಣೆಗಳನ್ನು ನಡೆಸಲಾಗಿರುತ್ತದೆ ಹಾಗೂ ಪಾಲಿಕೆ ಪರವಾಗಿ ಸದರಿ ಪ್ರಕರಣದ ಸಂಕ್ಷಿಪ್ತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿರುವ ಮೇರೆಗೆ ದಿನಾಂಕ:09.07.2012ರಂದು ಸಲ್ಲಿಸಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಮೇಲ್ಮನವಿ/ಮರು ಪರಿಶೀಲನೆ ಮೆ॥ ಆಡ್‌ಲ್ಯಾಬ್ಸ್ ಪ್ರೈ.ಲಿ. (ಮೆ॥ ರಿಲಯನ್ಸ್ ಮೀಡಿಯಾ ವರ್ಲ್ಡ್ ಲಿಮಿಟೆಡ್) ಹಾಗೂ ಪಾಲಿಕೆ ವಿರುದ್ಧ ಕೆ.ಎಂ.ಸಿ. ಕಾಯ್ದೆ 1976 ಸೆಕ್ಷನ್ 102 ಅಡಿಯಲ್ಲಿ ಈ ಕೆಳಕಂಡಂತೆ ಆದೇಶ ಹೊರಡಿಸಿರುತ್ತದೆ.

........4

**Government Order No: UDD 369 MNY 2010, dated:07.08.2012**

**For the reasons mentioned in the above paras, the appeal/Revision Petition filed by M/s. Adlabs Films Limited (Reliance Media World Limited) is allowed and the Order No.JC(A)PR/82/07-08, dated: 18.02.2010 of the Addl. Commissioner (Admn), BBMP., is hereby set aside. Further, the B.B.M.P. is directed to implement the directions issued vide Government letter No.UDD 369 MNY 2010, dated:01.07.2010 and refund the forfeited amount to M/s. Adlabs Films Limited (Reliance Media World Limited).**

ಈ ವಿಷಯವನ್ನು ಪರಿಶೀಲಿಸಿ, ಪಾಲಿಕೆ ಕೈಗೊಳ್ಳಬೇಕಿರುವ ಕ್ರಮದ ಬಗ್ಗೆ ಕಾನೂನು ಕೋಶದ ಅಭಿಪ್ರಾಯ ಪಡೆಯಲಾಗಿ ಕಾನೂನು ಕೋಶವು ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತದೆ.

**Having regard to the totality of the case and huge stakes involved, we left with no option expect moving the State Government by way review petition with request to recall the order dated:07-08-2012 and give a full pledged opportunity (with the assistance of a Legal Expert). The entire matter may have to be reargued before the government including the question in relation to jurisdiction (ILR 1999 Karnataka 314).**

**In view of the heavy reliance placed by the government on the opinion of the learned Advocate General, It is very much necessary for the BBMP to seek a fresh legal opinion after apprising the learned Advocate General about extraordinary circumstances under which the BBMP passed the forfeiture order** ಎಂದು ಆದೇಶಿಸಿರುತ್ತದೆ.

ಮೇಲ್ಕಂಡ ಸರ್ಕಾರದ ಆದೇಶದ ಕುರಿತು ಮಾನ್ಯ ಆಯುಕ್ತರು ಪಾಲಿಕೆಯ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆಯಲು ಸೂಚಿಸಿದ ಮೇರೆಗೆ ಕಾನೂನು ಕೋಶದ ಇಲಾಖೆಯು ಈ ಕೆಳಕಂಡಂತೆ ಅಭಿಪ್ರಾಯವನ್ನು ನೀಡಿದೆ.

ಮೆ॥ ಆಡ್‌ಲ್ಯಾಬ್ಸ್ ಫಿಲಮ್ಸ್ ರವರು ಕರಾರುಪತ್ರ ಮಾಡಿಕೊಳ್ಳದೇ ಟೆಂಡರ್ ಕೆಲಸ ನಿರ್ವಹಣೆ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿದ್ದರಿಂದ ಪ್ರತಿವರ್ಷ ಪಾಲಿಕೆಗೆ 25.02 ಕೋಟಿ ನಷ್ಟ ಉಂಟು ಮಾಡಲು ಕಾರಣರಾದ ಸದರಿ ಸಂಸ್ಥೆಯು ಜಮಾ ಮಾಡಿದ ಶುಲ್ಕ ಮತ್ತು ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದು, ಸದರಿ ಸಂಸ್ಥೆಯು ಸದರಿ ಆದೇಶದ ವಿರುದ್ಧ ಸರ್ಕಾರಕ್ಕೆ ಮೇಲ್ಮನವಿಯನ್ನು ಪುರಸ್ಕರಿಸಿ ಮುಟ್ಟುಗೋಲು ಹಾಕಿಕೊಂಡ ಹಣವನ್ನು ಹಿಂದಿರುಗಿಸಲು ಆದೇಶಿಸಿದೆ. ಇದಕ್ಕೆ ಸಂಬಂಧಿಸಿದಂತೆ ಸರ್ಕಾರದ ಕಾನೂನು ಇಲಾಖೆ, ಆರ್ಥಿಕ ಇಲಾಖೆ ಹಾಗೂ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯವನ್ನು ಸರ್ಕಾರವು ಪಡೆದುಕೊಂಡು ಮೇಲಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಮತ್ತು ನಿರ್ದೇಶನಗಳನ್ನು ಒಳಗೊಂಡಂತೆ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯು ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದ್ದು, ಈ ವಿಚಾರದಲ್ಲಿ ನಗರ ಪಾಲಿಕೆ ನಿರ್ಣಯವು ಅಂತಿಮವಾಗಿರುವುದಿಲ್ಲ. ನಗರ ಪಾಲಿಕೆ ನಿರ್ಣಯವನ್ನು ಸಕ್ಷಮ ಪ್ರಾಧಿಕಾರವು ಅನುಮೋದಿಸದ ಹೊರತು ಸದರಿ ನಿರ್ಣಯವನ್ನು ಅನುಷ್ಠಾನಗೊಳಿಸಲು ಬರುವುದಿಲ್ಲ. ಅರ್ಜಿದಾರರು ಸಲ್ಲಿಸಿದ್ದ ಮೇಲ್ಮನವಿ ಆಧಾರದ ಮೇಲೆ ಸರ್ಕಾರವು ಆದೇಶ ಹೊರಡಿಸಿ ಹಾಗೂ ಹಣ ಪಾವತಿ ಮಾಡಲು ನಿರ್ದೇಶಿಸಿರುತ್ತದೆಯೇ ಹೊರತು ನಗರ ಪಾಲಿಕೆಯ ಪ್ರಸ್ತಾವನೆಗೆ ಅನುಮೋದನೆ ನೀಡಿದಂತೆ ಆಗುವುದಿಲ್ಲ. ಆದ ಮೇರೆಗೆ ಮುಂದಿನ ಕ್ರಮ ಕೈಗೊಳ್ಳುವ ಮೊದಲು ಪಾಲಿಕೆಯ ನಿರ್ಣಯಕ್ಕೆ ಸರ್ಕಾರದ ಅನುಮೋದನೆ ಪಡೆಯುವುದು ಅವಶ್ಯಕವಾಗಿರುತ್ತದೆ.

ಆದುದರಿಂದ ಸರ್ಕಾರದ ಆದೇಶದಿಂದ ಪಾಲಿಕೆ ಹಿತಾಸಕ್ತಿ ಧಕ್ಕೆ ಉಂಟಾಗಿದೆ ಎಂದು ತಿಳಿದರೂ ಕೂಡ ಸರ್ಕಾರಿ ಆದೇಶವನ್ನು ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿಯ ಮೂಲಕ ಪ್ರಶ್ನಿಸಬಹುದಾಗಿದೆ. ಇದು ಸೂಕ್ಷ್ಮ ವಿಚಾರವಾಗಿರುವುದರಿಂದ ತಮ್ಮ ಅವಗಾಹನೆಗೆ ಬಿಡಲಾಗಿದೆ. ಆದ್ದರಿಂದ ಮೇಲ್ಮನವಿಯನ್ನು ಪುರಸ್ಕರಿಸಿ

ಸರ್ಕಾರವು ಆದೇಶಿಸಿರುವಂತೆ ಪಾಲಿಕೆಯ ನಿರ್ಣಯಕ್ಕೆ ಸರ್ಕಾರದ ಅನುಮೋದನೆ ಪಡೆದು ಅರ್ಜಿದಾರರು ಪಾವತಿಸಿದಂತೆ ಶುಲ್ಕ ಮತ್ತು ಇ.ಎಂ.ಡಿ. ಮೊತ್ತ ರೂ.28,31,24,720/– ಹಿಂದಿರುಗಿಸುವ ಅಥವಾ ರಿಟ್ ಅರ್ಜಿ ಸಲ್ಲಿಸಬೇಕೇ ಎಂಬ ಬಗ್ಗೆ ಆಯುಕ್ತರ ಮುಂದಿನ ಆದೇಶಕ್ಕಾಗಿ ಎಂದು ಅಭಿಪ್ರಾಯವನ್ನು ನೀಡಿರುತ್ತಾರೆ.

ಈ ಮಧ್ಯೆ, ಮಾನ್ಯ ವಿರೋಧ ಪಕ್ಷದ ನಾಯಕರು ದಿನಾಂಕ:10–10–2012 ರಂದು ಒಂದು ಪತ್ರವನ್ನು ಪೂಜ್ಯ ಮಹಾಪೌರರಿಗೆ ನೀಡಿದ್ದು, ಈ ವಿಷಯದ ಬಗ್ಗೆ ಮರು ಪರಿಶೀಲನೆ ಅಗತ್ಯವಿರುವುದರಿಂದ ಪೌರ ನಿಗಮಗಳು ಮತ್ತು ಸಮಿತಿಗಳ ವ್ಯವಹಾರವನ್ನು ನಡೆಸುವುದಕ್ಕಾಗಿ ಪ್ರಕ್ರಿಯಾ ನಿಯಮಗಳು ನಿಯಮ–51ರ ಮೇರೆಗೆ ಮರು ಮಂಡಿಸುವಂತೆ ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಮಾನ್ಯ ವಿರೋಧ ಪಕ್ಷದ ನಾಯಕರು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ನಿಯಮ–51ರ ಅಡಿಯಲ್ಲಿ ಕೋರಿರುವ ಪ್ರಸ್ತಾವನೆಯನ್ನು ಪುನರ್‌ಪರಿಶೀಲನೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:14–02–2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಿಯಮ 51ರ ಪ್ರಸ್ತಾವನೆಯನ್ನು ಕೈ ಬಿಡುವುದೆಂದು ತೀರ್ಮಾನಿಸುತ್ತಾ, ಈ ಹಿಂದೆ ಪ್ರಸ್ತಾಪಿತ ವಿಷಯದ ಬಗ್ಗೆ ಕೈಗೊಂಡಿದ್ದ ನಿರ್ಣಯವನ್ನು ಸ್ಥಿರಿಕರಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಿಯಮ 51ರ ಪ್ರಸ್ತಾವನೆಯನ್ನು ಕೈ ಬಿಡುವುದೆಂದು ತೀರ್ಮಾನಿಸುತ್ತಾ, ಈ ಹಿಂದೆ ಪ್ರಸ್ತಾಪಿತ ವಿಷಯದ ಬಗ್ಗೆ ಕೈಗೊಂಡಿದ್ದ ನಿರ್ಣಯವನ್ನು ಸ್ಥಿರಿಕರಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 09 (418)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ ಕೃಷ್ಣ ರಾಜೇಂದ್ರ ಮಾರುಕಟ್ಟೆ ಆವರಣದಲ್ಲಿ 574 ಪಾದಚಾರಿ ವ್ಯಾಪಾರಿಗಳಿಗೆ ವ್ಯಾಪಾರ ಮಾಡಲು ಸ್ಥಳಾವಕಾಶ ಒದಗಿಸುವ ಕುರಿತು ದಿನಾಂಕ:30-08-2012 ರಂದು ನಡೆದ ಪಾಲಿಕೆ ಸಭೆಯಲ್ಲಿ "ಪ್ರಸ್ತಾವನೆಯನ್ನು ಕೈಬಿಡಲಾಗಿದೆ" ಎಂದು ನಿರ್ಣಯಿಸಲಾಗಿದ್ದು, ಶ್ರೀ.ಎನ್.ಗುಣಶೇಖರ್, ವಿರೋಧ ಪಕ್ಷದ ನಾಯಕರು ದಿನಾಂಕ:17-01-2012ರ ಪತ್ರದಲ್ಲಿ ಸದರಿ ಪ್ರಸ್ತಾವನೆಯನ್ನು ಕೆ.ಎಂ.ಸಿ ಕಾಯ್ದೆ ರೂಲ್ 51ರ ಪ್ರಕಾರ ಪಾಲಿಕೆಯ ಸಭೆಯ ಮುಂದೆ ಮಂಡಿಸುವಂತೆ ಪೂಜ್ಯ ಮಹಾಪೌರರಿಗೆ ಬರೆದಿರುವ ಪತ್ರದ ಮೇರೆಗೆ, ಪ್ರಸ್ತಾವನೆಯನ್ನು ಪಾಲಿಕೆಯ ಸಭೆಯ ಮುಂದೆ ಪುನ: ಮರು ಮಂಡಿಸಲಾಗಿದೆ.

ಕರ್ನಾಟಕ ರಾಜ್ಯ ದಲಿತ ಕ್ರಿಯಾ ಸಮಿತಿ (ರಿ), ರಾಜ್ಯ ಸಮಿತಿ, ಬೆಂಗಳೂರು ರವರು ಮನವಿ ಸಲ್ಲಿಸಿ, ಶ್ರೀ ಕೃಷ್ಣ ರಾಜೇಂದ್ರ ಮಾರುಕಟ್ಟೆ ಪ್ರಾಂಗಣದ ಸುತ್ತಮುತ್ತ ಬಡ, ದಲಿತ, ಹಿಂದುಳಿದ, ಅಲ್ಪ ಸಂಖ್ಯಾತರು ಫುಟ್‌ಪಾತ್‌ನಲ್ಲಿ ವ್ಯಾಪಾರಸ್ಥರನ್ನು ಏಕಾಏಕಿ ತೆರವುಗೊಳಿಸಿದ್ದು, ಈ ಹಿನ್ನಲೆಯಲ್ಲಿ ವ್ಯಾಪಾರಸ್ಥರು 10 ರಿಂದ 15 ವರ್ಷಕ್ಕಿಂತಲೂ ಹೆಚ್ಚಾಗಿ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುತ್ತಿರುವುದರಿಂದ, ಬಡವರು ತಾತ್ಕಾಲಿಕವಾಗಿ ಯಥಾಸ್ಥಿತಿ ಮುಂದುವರೆಸಿಕೊಂಡು ಹೋಗಲು ಮಾನವೀಯ ಮೌಲ್ಯಾಧಾರಗಳಡಿಯಲ್ಲಿ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಮಾನ್ಯ ಆಯುಕ್ತರವರ ದಿನಾಂಕ:18-01-2011 ಮತ್ತು ದಿನಾಂಕ:14-07-2011ರ ಟಿಪ್ಪಣಿಯಲ್ಲಿ ಶ್ರೀ ಕೃಷ್ಣ ರಾಜೇಂದ್ರ ಮಾರುಕಟ್ಟೆಯ ಪಾದಚಾರಿ ರಸ್ತೆಯಲ್ಲಿ ಫುಟ್‌ಪಾತ್ ವ್ಯಾಪಾರಸ್ಥರು ಸುಮಾರು 400-500 ಮಂದಿ ವ್ಯಾಪಾರ ಮಾಡುತ್ತಿದ್ದು, ಪಾದಚಾರಿಯ ರಸ್ತೆಯಲ್ಲಿ ಓಡಾಡಲು ಸ್ಥಳವನ್ನು ಬಿಟ್ಟು ಉಳಿದ ಜಾಗದಲ್ಲಿನ 4x5 ಅಡಿಗಳ ಜಾಗವನ್ನು ಚೌಕಕಾರವಾಗಿ ವಿಂಗಡಿಸಿ ಪ್ರತಿ ಜಾಗಕ್ಕೂ ಕ್ರಮ ಸಂಖ್ಯೆ ನೀಡಿ ಮೊದಲು ಬಂದವರಿಗೆ ಮೊದಲ ಆದ್ಯತೆ ಅನ್ವಯ ಟೋಕನ್ ಪದ್ಧತಿ ಅಳವಡಿಸಿ, ಬೆಳಿಗ್ಗೆ 8.30 ರಿಂದ ರಾತ್ರಿ 8.30 ರವರೆಗೆ ತಲಾ ರೂ.20/- ಗಳಂತೆ ದರ ನಿಗಧಿಪಡಿಸಿದ್ದಲ್ಲಿ ಸ್ವಚ್ಛತಾ ನಿರ್ವಹಣಾ ವೆಚ್ಚ ಎಂಬುದಾಗಿ ನಗರ ಪಾಲಿಕೆಗೆ ಲಕ್ಷಾಂತರ ಹಣವು ಬರುವ ಹಿನ್ನಲೆಯಲ್ಲಿ ಮಾರುಕಟ್ಟೆ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿಯನ್ನು ಮಂಡಿಸಿ ತೀರ್ಮಾನಕ್ಕಾಗಿ ಮಂಡಿಸಲಾಗಿರುತ್ತದೆ.

ಮಾನ್ಯ ಆಯುಕ್ತರವರು ದಿನಾಂಕ:18-05-2011 ರಂದು ನಡೆದ ಸಭೆಯಲ್ಲಿ ಸದರಿ ಮಾರುಕಟ್ಟೆ ಪ್ರದೇಶದಲ್ಲಿ ಅನಧಿಕೃತವಾಗಿ ವ್ಯಾಪಾರ ಮಾಡುತ್ತಿರುವ ವ್ಯಾಪಾರಸ್ಥರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿರುತ್ತಾರೆ. ಅದರಂತೆ ಅನಧಿಕೃತ ವ್ಯಾಪಾರಸ್ಥರನ್ನು ತೆರವುಗೊಳಿಸಲಾಗಿರುತ್ತದೆ.

ಈ ಕುರಿತು ಕರ್ನಾಟಕ ರಾಜ್ಯ ದಲಿತ ಕ್ರಿಯಾ ಸಮಿತಿ (ರಿ) ರವರು ದಿನಾಂಕ:20-06-2011 ರಂದು ಅಧ್ಯಕ್ಷರು, ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಬೆಂಗಳೂರು ರವರಿಗೆ ಅನಧಿಕೃತ ವ್ಯಾಪಾರಸ್ಥರನ್ನು ತೆರವುಗೊಳಿಸಿರುವ ಬಗ್ಗೆ ವರದಿಯನ್ನು ನೀಡಲು ಆಯೋಗದ ಮುಖೇನ ಪತ್ರ ಬರೆಯಲಾಗಿರುತ್ತದೆ.

ಅಧ್ಯಕ್ಷರು, ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಬೆಂಗಳೂರು ರವರ ವಿಚಾರಣೆ ದಿನಾಂಕ:08-07-2011ರ ಪ್ರಕರಣ ಸಂಖ್ಯೆ:11/2011ರ ಆಯೋಗ ನಿರ್ದೇಶನದಲ್ಲಿ ಸದರಿ ಪ್ರಕರಣದ ಬಗ್ಗೆ ನಿರ್ಣಯ ಕೈಗೊಳ್ಳಲು ಮಾರುಕಟ್ಟೆ ಸ್ಥಾಯಿ ಸಮಿತಿಗೆ ಕಳುಹಿಸಿದ್ದು, ಈವರೆವಿಗೂ ಮಾರುಕಟ್ಟೆ ಸ್ಥಾಯಿ ಸಮಿತಿಯು ಯಾವುದೇ ನಿರ್ಣಯವನ್ನು ಕೈಗೊಂಡಿರುವುದಿಲ್ಲ. ನಿರ್ಣಯ ಕೈಗೊಳ್ಳುವವರೆಗೆ ಆಯೋಗದ ನಿರ್ದೇಶನದಂತೆ ಯಥಾಸ್ಥಿತಿಯನ್ನು, ಕಾಯ್ದುಕೊಳ್ಳುವುದು. ಅಲ್ಲದೇ ಹಿಂದಿನಿಂದಲೂ ವ್ಯಾಪಾರ ಮಾಡುತ್ತಾ ಬಂದಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವ್ಯಾಪಾರಸ್ಥರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಕಟ್ಟಿಸಿರುವ ಮಳಿಗೆಗಳನ್ನು ಹಂಚಿಕೆ ಮಾಡಬೇಕು. ಇಲ್ಲವಾದಲ್ಲಿ ಮಳಿಗೆಯನ್ನು ಹೊಸದಾಗಿ ನಿರ್ಮಾಣ ಮಾಡಿ, ವಿತರಣೆ ಮಾಡಲು ಆಯೋಗವು ಸೂಚಿಸಿರುತ್ತದೆ.

......................2

ದಿನಾಂಕ:29-08-2011 ರಂದು ನಡೆದ ಮಾರುಕಟ್ಟೆ ಸ್ಥಾಯಿ ಸಮಿತಿಯ ಸಭೆಯ ವಿಷಯದ ಸಂಖ್ಯೆ:ಮಾ.ಸ್ಥಾ.ಸ/11/11-12ರ ನಿರ್ಣಯದಲ್ಲಿ ದಿನಾಂಕ:14-07-2011ರ ಆಯುಕ್ತರ ಟಿಪ್ಪಣಿ ಪರಿಶೀಲಿಸಿದೆ ಪ್ರಸ್ತಾವನೆಯನ್ನು ಮರು ಪರಿಶೀಲಿಸಿ ಪುನರ್ ಮಂಡಿಸಲು ಸಮಿತಿಯು ತೀರ್ಮಾನಿಸಿತು ಎಂದು ಸೂಚಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ, ಕೂಲಂಕುಷವಾಗಿ ಪರಿಷ್ಕೃತ ಟಿಪ್ಪಣಿಯನ್ನು ಸಮಿತಿಯ ಮುಂದೆ ಪುನರ್ ಮಂಡಿಸಿದೆ.

ಪಾಲಿಕೆಗೆ ಸಂಬಂಧಿಸಿದ ಮಾರುಕಟ್ಟೆಗಳಲ್ಲಿ ಮಳಿಗೆಗಳನ್ನು ಹಂಚಿಕೆ ಮಾಡುವ ವಿಧಿ ವಿಧಾನದ ಬಗ್ಗೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ-1976 ರಲ್ಲಿ ಪ್ರತ್ಯೇಕ ನಿಯಮ ಅಥವಾ ಬೈಲಾಗಳನ್ನು ರಚಿಸಿರುವುದು ಕಂಡು ಬಂದಿರುವುದಿಲ್ಲ. ಆ ಕಾಯ್ದೆಯು ಕಲಂ-176ರಲ್ಲಿ ವಿವರಿಸಿರುವಂತೆ ಪಾಲಿಕೆಯ ಸ್ವತ್ತನ್ನು ಗುತ್ತಿಗೆ ಆಧಾರದ ಮೇಲೆ 1 ವರ್ಷದ ಅವಧಿಗೆ ಆಯುಕ್ತರು, 3 ವರ್ಷದ ಅವಧಿಗೆ ಸ್ಥಾಯಿ ಸಮಿತಿ, 5 ವರ್ಷದ ಅವಧಿಗೆ ಪಾಲಿಕೆಯು, 5 ವರ್ಷಕ್ಕೆ ಮೇಲ್ಪಟ್ಟ ಅವಧಿಗೆ ಸರ್ಕಾರದ ಪೂರ್ವಾನುಮೋದನೆ ಅತ್ಯವಶ್ಯಕ ಎಂಬುದಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ನಇ 129 ಟಿಎಂಡಿ 2002, ದಿನಾಂಕ:02-06-2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡಬೇಕೆಂದಿದೆ.

ಈ ಆದೇಶದ ಅನ್ವಯ ಕರ್ನಾಟಕ ಪಾರದರ್ಶಕ ಕಾಯ್ದೆ ಅನ್ವಯ ಮಳಿಗೆಗಳನ್ನು ಬಹಿರಂಗವಾಗಿ ಟೆಂಡರ್ ಮತ್ತು ಹರಾಜಿನ ಮೂಲಕ ಹಂಚಿಕೆ ಮಾಡಬೇಕಾಗುತ್ತದೆ.

1. ಗಾಂಧಿನಗರ ಉಪವಲಯದಲ್ಲಿ ಟ್ಯಾಂಕ್ ಬಂಡ್ ರಸ್ತೆಯಲ್ಲಿರುವ ಬಿ.ಟಿ.ಎಸ್. ಬಸ್ ನಿಲ್ದಾಣದ ಪಕ್ಕದಲ್ಲಿ ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡುತ್ತಿದ್ದ ವ್ಯಾಪಾರಸ್ಥರಿಗೆ ಜನವರಿ 2010 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪರವಾನಗಿಯನ್ನು ಹಂಚಿಕೆ ಮಾಡಿರುವ ಕ್ರಮವು ಸರಿಯಿಲ್ಲವೆಂದು ಶ್ರೀ. ಬಷೀರ್ ಖಾನ್ ಮತ್ತು ಇನ್ನು ಒಟ್ಟು 41 ಜನರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮೇಲೆ ಹೂಡಿದ್ದ ದಾವೆಯ ಸಂಖ್ಯೆ: ಡಬ್ಲ್ಯೂಪಿ ನಂ.28799-839/10 ಎಲ್‌ಬಿ-ಬಿಎಂಪಿ) ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ:16-10-2010 ರಂದು ಜಾರಿ ಮಾಡಿರುವ ಆದೇಶದ ಮೇರೆಗೆ, ಸದರಿ ವ್ಯಾಪಾರಿಗಳಿಗೆ ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡಲು ಜಾಗಗಳನ್ನು ತುರ್ತಾಗಿ ಮರು ಹಂಚಿಕೆ ಮಾಡುವಂತೆ ಸೂಚಿಸಲಾಗಿದೆ.

2. **Maharashtra Ekta Hawkers Union Case and another V/s. Municipal Corporations, Greater Mumbai and others** ಪ್ರಕರಣದಲ್ಲಿ ಗೌರವಾನ್ವಿತ ಭಾರತ ಸರ್ವೋಚ್ಛ ನ್ಯಾಯಾಲಯವು ನೀಡಿರುವ ಮಾರ್ಗಸೂಚಿಗಳಿಗೆ ಕೆಳಕಂಡಂತೆ ವರದಿ ಮಾಡಿದೆ.
    1. ಮನೆಗಳ ಮತ್ತು ಅಂಗಡಿಗಳ ಪ್ರವೇಶಕ್ಕೆ ಅಡ್ಡಿಯಾಗದಂತೆ ಹಾಗೂ ಪಾದಚಾರಿಗಳಿಗೆ ಅಥವಾ ವಾಹನ ಸಂಚಾರಕ್ಕೆ ಅಡ್ಡಿಯಾಗದಂತೆ ಫುಟ್‌ಪಾತ್ (ಪಾದಚಾರಿ ರಸ್ತೆ)ಯ ಅಂಚಿನಲ್ಲಿ 1x1 ಮೀಟರ್ ವಿಸ್ತೀರ್ಣದ ಜಾಗವನ್ನು ಸಂಚಾರಿ ಮಾರಾಟ ವಲಯವನ್ನು ಗುರುತಿಸುವುದು.
    2. ರಸ್ತೆ ಬದಿ ವ್ಯಾಪಾರಿಗಳು ಸಂಚಾರಿ ಮಾರಾಟ ವಲಯದಲ್ಲಿ ಯಾವುದೇ ಕಟ್ಟಡ ಅಥವಾ ವಿನ್ಯಾಸವನ್ನು ರಚಿಸುವಂತಿಲ್ಲ.
    3. ಯಾವುದೇ ಪೂಜಾ ಸ್ಥಳಗಳಿಂದ, ಶಾಲಾ ಕಾಲೇಜುಗಳಿಂದ, ಆಸ್ಪತ್ರೆಗಳಿಂದ ನೂರು ಮೀಟರ್ ಸುತ್ತಳತೆಯಲ್ಲಿ ಸಂಚಾರಿ ಮಾರಾಟ ವಲಯ ಸ್ಥಾಪಿಸುವಂತಿಲ್ಲ. ಹಾಗೆಯೇ ರಸ್ತೆ ಮೇಲು ಸೇತುವೆಗಳಲ್ಲಿ ಮತ್ತು ಮುನಿಸಿಪಲ್ ಮಾರುಕಟ್ಟೆಗಳಿಂದ 150 ಮೀಟರ್ ಒಳಗೆ ಬೀದಿ ಬದಿ ವ್ಯಾಪಾರ ನಡೆಸುವಂತಿಲ್ಲ.
    4. ರಸ್ತೆ ಬದಿ ವ್ಯಾಪಾರಿಗಳು ಗ್ರಾಹಕರನ್ನು ಆಕರ್ಷಿಸಲು ಯಾವುದೇ ವಾದ್ಯಗಳನ್ನಾಗಲಿ ಅಥವಾ ಸಂಗೀತವನ್ನಾಗಲೀ ನುಡಿಸತಕ್ಕದಲ್ಲ ಹಾಗೂ ಹೆಚ್ಚು ಗದ್ದಲ ಮಾಡುವಂತಿಲ್ಲ.
    5. ರಸ್ತೆ ಬದಿ ವ್ಯಾಪಾರಿಗಳು ಸಿದ್ಧಪಡಿಸಿರುವ ಆಹಾರ ಪದಾರ್ಥಗಳು, ತಿಂಡಿ ತಿನಿಸುಗಳು, ಹೆಚ್ಚಿಟ್ಟ ಹಣ್ಣು ಮುಂತಾದವುಗಳನ್ನು ಸ್ವಚ್ಛತೆ ಕಾಪಾಡಿಕೊಂಡು ಮಾರಬಹುದು.

.....................3

6. ಬೀದಿ ಬದಿ ವ್ಯಾಪಾರವನ್ನು ಬೆಳಿಗ್ಗೆ 7 ರಿಂದ ರಾತ್ರಿ 10 ಗಂಟೆಯವರೆಗೆ ನಡೆಸಬಹುದು.
7. ರಸ್ತೆ ಬದಿಯ ವ್ಯಾಪಾರಿಗಳು ತಾವು ನಡೆಸುವ ವ್ಯಾಪಾರದ ಸ್ಥಳದಲ್ಲಿ ನಗರ, ಸ್ಥಳೀಯ ಸಂಸ್ಥೆಯ ಆರೋಗ್ಯ ವಿಭಾಗದೊಂದಿಗೆ ಸ್ವಚ್ಛತೆಯನ್ನು ಕಾಪಾಡಲು ಸಹಕರಿಸುವುದು.
8. 8 ಮೀಟರ್‌ಗಿಂತ ಕಡಿಮೆ ಅಗಲವಿರುವ ರಸ್ತೆಗಳಲ್ಲಿ ರಸ್ತೆ ಬದಿ ವ್ಯಾಪಾರಕ್ಕೆ ಅನುಮತಿ ನೀಡಬಾರದು. ಹಾಗೆಯೇ ವಾಣಿಜ್ಯ ವ್ಯವಹಾರ ನಿಷೇದಿಸಲ್ಪಟ್ಟಿರುವ ಪೂರ್ಣ ಜನ ವಸತಿ ಪ್ರದೇಶಗಳಲ್ಲಿ ಕೂಡ ಸಂಚಾರಿ ಮಾರಾಟ ವಲಯವನ್ನು ಗುರುತಿಸಬಾರದು.
9. ರಸ್ತೆ ಬದಿ ವ್ಯಾಪಾರಿಗಳು ಕ್ಯಾಮರ, ಕ್ಯಾಸೆಟ್‌ಗಳು, ದೂರವಾಣಿ ಉಪಕರಣಗಳು, ವಿಡಿಯೋ ಮತ್ತು ಆಡಿಯೋ ಟೇಪ್‌ಗಳು ಮುಂತಾದ ಹೆಚ್ಚಿನ ಮೌಲ್ಯದ ಎಲೆಕ್ಟ್ರಾನಿಕ್ ವಸ್ತುಗಳನ್ನು ಮಾರಬಾರದೆಂದು ನಿಷೇಧಿಸಿದೆ.

ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆಯ ಸುತ್ತಮುತ್ತ ಸುಮಾರು 2500 ವ್ಯಾಪಾರಸ್ಥರು ಫುಟ್‌ಪಾತ್ ಮೇಲೆ ವ್ಯಾಪಾರ ನಡೆಸುತ್ತಿದ್ದು, ಸ್ಥಳ ಪರಿಶೀಲನೆ ಮಾಡಿದಾಗ ಇವರಲ್ಲಿ ಬಹುತೇಕ ಮಂದಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗಗಳಿಗೆ ಸೇರಿದ್ದು, ಆಯೋಗವು ನೀಡಿರುವ 574 ವ್ಯಾಪಾರಸ್ಥರ ಪಟ್ಟಿಯಲ್ಲಿ ಬಹುತೇಕ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರು ಸೇರಿರುತ್ತಾರೆಂದು ಸ್ಥಳೀಯ ಅಧಿಕಾರಿಗಳು ವರದಿ ನೀಡಿದ್ದಾರೆ.

ಈ ಅನಧಿಕೃತ ವ್ಯಾಪಾರಸ್ಥರು ಕೆ.ಆರ್.ಮಾರುಕಟ್ಟೆಯ ನೂತನ ಕಟ್ಟಡ ಮತ್ತು ಹಳೆಯ ಕಟ್ಟಡ ಆವರಣದೊಳಗೆ ಇದ್ದು, ಇದರ ಹೊರತಾಗಿ ಸುಮಾರು 2000 ಅನಧಿಕೃತ ವ್ಯಾಪಾರಸ್ಥರು ಮಾರುಕಟ್ಟೆಯ ಸುತ್ತಮುತ್ತಲಿನ ರಸ್ತೆ ಮತ್ತು ಪಾದಚಾರಿ ಪ್ರದೇಶದಲ್ಲಿ ನಡೆಸುತ್ತಿರುವುದು ಕಂಡು ಬಂದಿರುತ್ತದೆ. ಇಲ್ಲಿಯ ಸಮಸ್ಯೆಯ ಬಗ್ಗೆ ಬಿ.ಎಂ.ಟಿ.ಎಫ್ ಅಧಿಕಾರಿಗಳು ಮಾರುಕಟ್ಟೆಯ ಒಳಗಿನ ಹಾಗೂ ಹೊರಗಿನ ಜನ ಸಂದಣಿಯ ವಾತಾವರಣವನ್ನು ಗಮನಿಸಿ ಅಲ್ಲಿ ಸಂಭವಿಸಬಹುದಾದಂತಹ ಅನಾಹುತ ಗಮನಿಸಿ ಇಲ್ಲಿ ಯಾವುದೇ ಹೆಚ್ಚಿನ ಹಂಚಿಕೆಗಳನ್ನು ಮಾಡಬಾರದೆಂದು ಸೂಚಿಸಿರುತ್ತಾರೆ.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ:01-06-2011 ರಂದು ಡಬ್ಲ್ಯೂಪಿ ಸಂಖ್ಯೆ: 2604-2607/2011 ರಲ್ಲಿ ಹೊರಡಿಸಿರುವ ಆದೇಶದಲ್ಲಿ ಮಾರುಕಟ್ಟೆಯ 'ಜಿ' ಪ್ಲಾನ್‌ಗೆ ವ್ಯತಿರಿಕ್ತವಾಗಿ ಮೇಲಿನ ಬೇಸ್‌ಮೆಂಟ್ ಮಹಡಿಯಲ್ಲಿ ಯಾವುದೇ ಖಾಲಿ ಜಾಗಗಳಲ್ಲಿ ಹಂಚಿಕೆ ಮಾಡಕೂಡದೆಂಬುದಾಗಿ ಆದೇಶಿಸಿರುತ್ತದೆ.

ನಿರ್ಣಯ:- ಮುಂದುವರೆದಂತೆ ದಿನಾಂಕ:30-03-2012 ರಂದು ನಡೆದ ಮಾರುಕಟ್ಟೆ ಸ್ಥಾಯಿ ಸಮಿತಿಯ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಲ್ಲಿ ಸರ್ವೋಚ್ಛ ನ್ಯಾಯಾಲಯದ ಆದೇಶವನ್ನು ಆಧರಿಸಿ, ನಗರ ಪಾಲಿಕೆಯ ಕಾನೂನು ಕೋಶವು ವಿವರಿಸಿರುವಂತೆ ಶ್ರೀ ಕೃಷ್ಣ ರಾಜೇಂದ್ರ ಮಾರುಕಟ್ಟೆ ಒಳ ಮತ್ತು ಹೊರ ಫುಟ್‌ಪಾತ್ ವ್ಯಾಪಾರಿಗಳ ತೊಂದರೆಯನ್ನು ನಿವಾರಿಸಲು ಈ ಹಿಂದೆ ಮಾನ್ಯ ಆಯುಕ್ತರ ಸುತ್ತೋಲೆ ಸಂಖ್ಯೆ: ಡಿ.ಸಿ.ಹೆಚ್.ಪಿ.ಆರ್/(2)170/10-11, ದಿನಾಂಕ:25-05-2010 ರಲ್ಲಿ ನೀಡಿರುವ ಕೆಲವು ಅಂಶಗಳನ್ನು ಗಣನೆಗೆ ತೆಗೆದುಕೊಂಡು (ಇವರು ಬೀದಿ ವ್ಯಾಪಾರಿಗಳಲ್ಲದೆ ಇರುವುದರಿಂದ), ಈ ಕೆಳಕಂಡಂತೆ ನಿಯಮಗಳನ್ನು ಅನುಸರಿಸಿ, ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವುದಾಗಿ ತೀರ್ಮಾನಿಸಲಾಗಿರುತ್ತದೆ.

1. ಬೇರೆ ಅಂಗಡಿಗಳ ಪ್ರವೇಶಕ್ಕೆ ಅಥವಾ ಪಾದಚಾರಿಗಳಿಗೆ ಅಡ್ಡಿಯಾಗದಂತೆ ಅಂಚಿನಲ್ಲಿ 1 ಮೀ x 1 ಮೀ ಜಾಗವನ್ನು ಮಾರಾಟ ಸ್ಥಳವಾಗಿ ಗುರುತಿಸಿ ಸಂಖ್ಯೆಗಳನ್ನು ನೀಡುವುದು.
2. ಈ ವ್ಯಾಪಾರಿಗಳು ಸದರಿ ಸ್ಥಳದಲ್ಲಿ ಯಾವುದೇ ಕಟ್ಟಡ, ಟಾರ್ಪಲ್ ಕಟ್ಟುವುದು ಹಾಗೂ ಇದು ತಮ್ಮ ಸ್ಥಳ ಎಂಬುದನ್ನು ನಿರ್ಭಂದಿಸಿದೆ.
3. ಈ ಸ್ಥಳದಲ್ಲಿ ವ್ಯಾಪಾರ ಮಾಡುವವರು ಗ್ರಾಹಕರನ್ನು ಆಕರ್ಷಿಸಲು ಯಾವುದೇ ರೀತಿಯ ವಾದ್ಯವಾಗಲಿ, ಸಂಗೀತವನ್ನಾಗಲಿ ಮಾಡುವಂತಿಲ್ಲ.
4. ಸಿದ್ಧಪಡಿಸಿರುವ ಆಹಾರ ತಿಂಡಿ ತಿನಿಸುಗಳು, ಹೆಚ್ಚಿಟ್ಟ ಹಣ್ಣುಗಳು ಮುಂತಾದವುಗಳನ್ನು ಸ್ವಚ್ಛತೆ ಕಾಪಾಡಿಕೊಂಡು ಮಾರಬಹುದು.

.......................4

5. ಈ ಸ್ಥಳದಲ್ಲಿ ಮೊದಲು ಬಂದವರಿಗೆ ಆದ್ಯತೆಯಂತೆ ಒಂದು ಬದಿಯಿಂದ ನೀಡತಕ್ಕದ್ದು.
6. ವ್ಯಾಪಾರ ಮಾಡುವ ವೇಳೆ ಬೆಳಿಗ್ಗೆ 7-00 ರಿಂದ ರಾತ್ರಿ 10-00 ಗಂಟೆಯವರೆಗೆ ನಡೆಸಬಹುದು. ಈ ಸ್ಥಳದಲ್ಲಿ ವ್ಯಾಪಾರ ಮಾಡುವವರು ನಗರ ಪಾಲಿಕೆಯ ಆರೋಗ್ಯ ವಿಭಾಗದೊಂದಿಗೆ ಸ್ವಚ್ಛತೆಯನ್ನು ಕಾಪಾಡಲು ಸಹಕರಿಸಬೇಕು.
7. ಈ ಸ್ಥಳದಲ್ಲಿ ಹಣ್ಣು ತರಕಾರಿಗಳನ್ನು ಹೊರತು ಪಡಿಸಿ ಬೇರೆ ಯಾವುದನ್ನು ಮಾರುವಂತಿಲ್ಲ.

<u>ಪರವಾನಗಿ ನೀಡುವ ಬಗ್ಗೆ</u>

1. ಒಂದು ಕುಟುಂಬಕ್ಕೆ ಒಂದಕ್ಕಿಂತ ಹೆಚ್ಚಿನ ಪರವಾನಗಿ ನೀಡುವಂತಿಲ್ಲ.
2. ಪರವಾನಗಿ ಪಡೆಯಲು ಅರ್ಜಿ ಹಾಕಿದವರು ಕನಿಷ್ಟ ಪಕ್ಷ 5 ವರ್ಷವಾದರೂ ಮಾರುಕಟ್ಟೆ ಪರಿಮಿತಿಯಲ್ಲಿ ವ್ಯಾಪಾರ ಮಾಡುತ್ತಿದ್ದವರಾಗಿರಬೇಕು.
3. ಈ ವ್ಯಾಪಾರವನ್ನಲ್ಲದೇ ಬೇರೆ ವ್ಯಾಪಾರವನ್ನು ಹೊಂದಿರಬಾರದು.
4. ನಗರದಲ್ಲಿ ಸ್ವಂತವಾದ ಅಥವಾ ಬಾಡಿಗೆಗೆ ಯಾವುದೇ ವಾಣಿಜ್ಯ ಮಳಿಗೆಯನ್ನು ಹೊಂದಿರಬಾರದು.
5. ಒಂದು ಅರ್ಜಿಗೆ ಒಂದು ಪರವಾನಗಿಯನ್ನು ಮಾತ್ರ ನೀಡುವುದು.
6. 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಪರವಾನಗಿ ನೀಡದಂತೆ ಎಚ್ಚರಿಕೆ ವಹಿಸಬೇಕು.
7. ಪ್ರತಿ ಪರವಾನಗಿದಾರರು ದಿನವೊಂದಕ್ಕೆ ರೂ.20/- ಗಳಂತೆ ಪರವಾನಗಿ ಶುಲ್ಕವನ್ನು ಪಾಲಿಕೆಗೆ ಪಾವತಿಸಬೇಕು. ಈ ಶುಲ್ಕವನ್ನು ಹೆಚ್ಚು ಅಥವಾ ಕಡಿಮೆ ಮಾಡಲು ಪಾಲಿಕೆಯು ಅಧಿಕಾರವುಳ್ಳದ್ದಾಗಿರುತ್ತದೆ.
8. ವ್ಯಾಪಾರಿ ಹೆಸರು, ವಿಳಾಸ ಭಾವಚಿತ್ರವನ್ನು ಹೊಂದಿರಬೇಕು.
9. ಪರವಾನಗಿಯಲ್ಲಿ ಇರುವ ಭಾವಚಿತ್ರದವರೇ ವ್ಯಾಪಾರ ಮಾಡಬೇಕು.
10. ವ್ಯಾಪಾರಿಯ ಕುಟುಂಬದವರ ಹೆಸರು ಮತ್ತು ವ್ಯಾಪಾರ ಮಾಡುತ್ತಿರುವ ಜಾಗದ ವಿಳಾಸ
11. ಈಗಾಗಲೇ ಪಟ್ಟಿ ಮಾಡಿರುವವರನ್ನು ಹೊರತುಪಡಿಸಿ ಹೊಸದಾಗಿ ಬೇರೆಯವರಿಗೆ ಪರವಾನಗಿ ನೀಡಬಾರದು.

ಮೇಲಿನ ಮಾನ್ಯ ನ್ಯಾಯಾಲಯಗಳ ಆದೇಶ, ಬಿ.ಎಂ.ಟಿ.ಎಫ್ ಅಧಿಕಾರಿಗಳ ಹಾಗೂ ಸ್ಥಳೀಯ ಅಧಿಕಾರಿಗಳ ವರದಿಯ ಆಧಾರದ ಮೇಲೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ವರ್ಗಗಳ ಆಯೋಗದ ನಿರ್ದೇಶನದ ಅನ್ವಯ ಸದರಿ ವಿಷಯವನ್ನು ಅವಗಾಹನೆಗೆ ಇರಿಸಿ, ಮಾರುಕಟ್ಟೆ ಸ್ಥಾಯಿ ಸಮಿತಿಯವರ ನಿರ್ಣಯದಂತೆ ಶ್ರೀ ಕೃಷ್ಣ ರಾಜೇಂದ್ರ ಮಾರುಕಟ್ಟೆ ಆವರಣದಲ್ಲಿ 574 ಪಾದಚಾರಿ ವ್ಯಾಪಾರಿಗಳಿಗೆ ವ್ಯಾಪಾರ ಮಾಡಲು ಸ್ಥಳಾವಕಾಶ ಒದಗಿಸುವ ಕುರಿತ ಪ್ರಸ್ತಾವನೆಗೆ ದಿನಾಂಕ:30-08-2012 ರಂದು ನಡೆದ ಪಾಲಿಕೆ ಸಭೆಯಲ್ಲಿ "ಪ್ರಸ್ತಾವನೆಯನ್ನು ಕೈಬಿಡಲಾಗಿದೆ" ಎಂದು ತೀರ್ಮಾನಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾನೆ ಕುರಿತಂತೆ, ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ, 1976ರ ನಿಯಮ 51ರ ಅಡಿಯಲ್ಲಿ ಪಾಲಿಕೆ ಸಭೆಯ ಮುಂದೆ ಮರು ಮಂಡಿಸಲು ಮಾನ್ಯ ವಿರೋಧ ಪಕ್ಷದ ನಾಯಕರು ಕೋರಿರುವುದರಿಂದ ಸದರಿ ವಿಷಯವನ್ನು ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21-02-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಿಯಮ 51ರ ಪ್ರಸ್ತಾವನೆಯನ್ನು ಕೈ ಬಿಡುವುದೆಂದು ತೀರ್ಮಾನಿಸುತ್ತಾ, ಈ ಹಿಂದೆ ಪ್ರಸ್ತಾಪಿತ ವಿಷಯದ ಬಗ್ಗೆ ಕೈಗೊಂಡಿದ್ದ ನಿರ್ಣಯವನ್ನು ಸ್ಥಿರಿಕರಿಸುವುದು".

......................5

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ನಿಯಮ 51ರ ಪ್ರಸ್ತಾವನೆಯನ್ನು ಕೈ ಬಿಡುವುದೆಂದು ತೀರ್ಮಾನಿಸುತ್ತಾ, ಈ ಹಿಂದೆ ಪ್ರಸ್ತಾಪಿತ ವಿಷಯದ ಬಗ್ಗೆ ಕೈಗೊಂಡಿದ್ದ ನಿರ್ಣಯವನ್ನು ಸ್ಥಿರೀಕರಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 10 (103)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ನಂ.97, ದಯಾನಂದನಗರ, 7ನೇ ಮುಖ್ಯರಸ್ತೆಯಲ್ಲಿ ಬರುವ ಸರ್ಕಾರಿ ಆಯುರ್ವೇದಿಕ್ ಮತ್ತು ಯುನಾನಿ ಕಾಲೇಜಿಗೆ ಈ ಹಿಂದೆ 1949 ರಲ್ಲಿ ಸದರಿ ಸಂಸ್ಥೆಗೆ 100x48 ಚದರ ಅಡಿಗಳ ಜಾಗವನ್ನು ಆಯುರ್ವೇದಿಕ್ ಆಸ್ಪತ್ರೆ ನಿರ್ಮಿಸಿಕೊಂಡು ನಡೆಸಲು ನಗರ ಪಾಲಿಕೆಯಿಂದ ಉಚಿತವಾಗಿ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಸಂಸ್ಥೆಯವರಿಗೆ ಹಂಚಿಕೆ ಮಾಡಲಾದ ಸ್ವತ್ತಿಗೆ ಸಂಬಂಧಿಸಿದಂತೆ ಸ್ವತ್ತಿನ ನೊಂದಾವಣೆಯನ್ನು ತಮ್ಮ ಖರ್ಚಿನಲ್ಲಿ ಮಾಡಿಕೊಳ್ಳುವಂತೆ ಸೂಚಿಸಲಾಗಿರುತ್ತದೆ. ಸದರಿ ಸಂಘದವರು ಕಾರಣಾಂತರಗಳಿಂದ ಸಂಘದ ಹೆಸರಿನಲ್ಲಿ ನೊಂದಾವಣೆ ಮಾಡಿಸಲು ಸಾಧ್ಯವಾಗಲಿಲ್ಲವೆಂದು ತಮ್ಮ ಮನವಿಯಲ್ಲಿ ತಿಳಿಸಿರುತ್ತಾರೆ.

ಸದರಿ ಸ್ವತ್ತಿನಲ್ಲಿ ನೆಲ ಮಹಡಿ, ಒಂದನೇ ಅಂತಸ್ತು, ಎರಡನೇ ಅಂತಸ್ತಿನ ಆರ್.ಸಿ.ಸಿ. ಕಟ್ಟಡವಿದ್ದು, ಕಟ್ಟಡದ ಸ್ವಲ್ಪ ಭಾಗವನ್ನು ಸಂಜೀವಿನಿ ನರ್ಸಿಂಗ್ ಹೋಂ ನಡೆಸಲು ಬಾಡಿಗೆಗೆ ನೀಡಲಾಗಿದ್ದು, ಈ ಸ್ವತ್ತಿಗೆ ಸಂಬಂಧಿಸಿದಂತೆ ಸದರಿ ಸಂಸ್ಥೆಯವರು ಸಲ್ಲಿಸಿರುವ ದಾಖಲೆಗಳ ಆಧಾರದ ಮೇರೆಗೆ ಸದರಿ ಸ್ವತ್ತಿಗೆ ಶುದ್ಧ ಕ್ರಯಪತ್ರವನ್ನು ಮಾಡಿಕೊಡುವಂತೆ ಕೋರಿರುತ್ತಾರೆ.

ಪ್ರಸ್ತುತ ಸ್ಥಳದಲ್ಲಿ ತಮ್ಮ ಸಂಸ್ಥೆಯ ವತಿಯಿಂದ 1946 ರಿಂದ ಉಚಿತವಾಗಿ ಆಯುರ್ವೇದಿಕ್ ಆಸ್ಪತ್ರೆಯನ್ನು ನಡೆಸುತ್ತಿದ್ದು, ಇಬ್ಬರು ವೈದ್ಯರು, ಒಬ್ಬ ಕಾಂಪೌಂಡರ್ ಮತ್ತು ಆಯಾ ಸಿಬ್ಬಂದಿ ವರ್ಗವನ್ನು ಇದಕ್ಕಾಗಿ ನೇಮಕ ಮಾಡಿಕೊಳ್ಳಲಾಗಿದೆ. ತಮ್ಮ ಸಂಸ್ಥೆಯು ಉಚಿತವಾಗಿ ನೇತ್ರ ತಪಾಸಣೆಯನ್ನು ಹಾಗೂ ಕಣ್ಣಿನ ಶಸ್ತ್ರ ಚಿಕಿತ್ಸೆಯನ್ನು ಪ್ರತಿ ಮಾಹೆಯಲ್ಲಿ ನಡೆಸುತ್ತಿದ್ದು, ಉಚಿತ ದಂತಗಳ ಪರೀಕ್ಷೆ ಹಾಗೂ ವೈದ್ಯಕೀಯ ಶಿಬಿರಗಳನ್ನು ಸಹ ಆಗಾಗ್ಗೆ ನಡೆಸುತ್ತಿರುವುದಾಗಿ ತಿಳಿಸಿ, ತಮ್ಮ ಸಂಸ್ಥೆಯು ಪದವೀಧರರುಗಳಿಗೆ **Continuous Medical Education** ಕಾರ್ಯಕ್ರಮವನ್ನು ಆಗಾಗ್ಗೆ ನಡೆಸುತ್ತಿದ್ದು, ಈ ಕಾರ್ಯಕ್ರಮಗಳನ್ನು ನಡೆಸಲು ಹಾಗೂ ನಿರ್ವಹಿಸಲು ಹಣದ ಅವಶ್ಯಕತೆ ಇರುವುದರಿಂದ ಕಟ್ಟಡದ ನೆಲ ಮಹಡಿಯ ಸ್ವಲ್ಪ ಭಾಗವನ್ನು ಸಂಸ್ಥೆಯ ಸದಸ್ಯರೊಬ್ಬರಿಗೆ ಬಾಡಿಗೆಗೆ ನೀಡಿರುವುದಾಗಿ ತಿಳಿಸಿರುತ್ತಾರೆ. ಸಂಸ್ಥೆಯ ಖರ್ಚು ವೆಚ್ಚಗಳಿಗೆ ಸಂಬಂಧಿಸಿದಂತೆ 2006 ರಿಂದ 2011ನೇ ಸಾಲಿನವರೆಗಿನ Balance Sheet ಹಾಗೂ ಆಡಿಟ್ ವರದಿಗಳನ್ನು ಸಲ್ಲಿಸಿರುತ್ತಾರೆ.

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ.100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರಿ ಆಯುರ್ವೇದಿಕ್ ಮತ್ತು ಯುನಾನಿ ಕಾಲೇಜಿನ ಸಂಸ್ಥೆಯ ಹೆಸರಿಗೆ ಶುದ್ಧ ಕ್ರಯ ಪತ್ರ ನೊಂದಾಯಿಸಿ ಕೊಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-11-2011ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:20-12-2011ರ

......................2

ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 11-04-2012ರ ನಿರ್ಣಯ ಹಾಗೂ ಪುನರ್ ಪರಿಶೀಲಿಸಿ ಸಭೆಗೆ ಮಂಡಿಸಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿರುವ ದಿನಾಂಕ:29-05-2012 ರಂದು ನಡೆದ ಪಾಲಿಕೆ ಸಭೆಯ ನಿರ್ಣಯ ಹಾಗೂ ಮಾನ್ಯ ಆಯುಕ್ತರ ದಿನಾಂಕ:16-11-2011ರ ಟಿಪ್ಪಣಿಯನ್ನು ಪುನರ್ ಪರಿಶೀಲಿಸಿ ಸದರಿಯವರು ಕಟ್ಟಡದ ನೆಲಮಹಡಿಯ ಸ್ವಲ್ಪಭಾಗವನ್ನು ಸಂಜೀವಿನಿ ನರ್ಸಿಂಗ್ ಹೋಮ್‌ರವರಿಗೆ ಬಾಡಿಗೆ ನೀಡಿರುವುದು ಷರತ್ತಿನ ಉಲ್ಲಂಘನೆಯಾಗಿರುವುದರಿಂದ ಸಂಜೀವಿನಿ ನರ್ಸಿಂಗ್ ಹೋಮ್‌ರವರಿಂದ ಹಂಚಿಕೆದಾರರು ಪಡೆದಿರುವ ಬಾಡಿಗೆ ಹಣವನ್ನು ಪಾಲಿಕೆಗೆ ಪಾವತಿಸಿಕೊಂಡ ನಂತರ ಸದರಿ ಸಂಸ್ಥೆಯ ಹೆಸರಿಗೆ ಶುದ್ಧ ಕ್ರಯ ಪತ್ರ ನೊಂದಾಯಿಸಿ ಕೊಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 08-01-2013ರ ಪುನರ್ ಪರಿಶೀಲನಾ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:08-01-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 08-01-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 11 (394)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀಮತಿ. ಲಕ್ಷ್ಮಿನರಸಮ್ಮ ಕೋಂ ಬಿನ್ ಬಿ.ಎನ್.ಮೂರ್ತಿ ರವರ ಜಿ.ಪಿ.ಎ.ಹೋಲ್ಡರ್ ಶ್ರೀ. ಟಿ.ಎನ್.ಸೋಮಶೇಖರ್ ಬಿನ್ ನರಸಿಂಹಚಾರ್ ರವರು ಮನವಿ ಸಲ್ಲಿಸಿ, ತಮಗೆ ಅಂದರೆ ಲೇಟ್ ಬಿ.ಎನ್.ಮೂರ್ತಿ ರವರಿಗೆ ಕರ್ನಾಟಕ ವಿದ್ಯುತ್ ಕಾರ್ಖಾನೆ ಬಡಾವಣೆಯಲ್ಲಿ, ಕರ್ನಾಟಕ ವಿದ್ಯುತ್ ಕಾರ್ಖಾನೆಯ ಗೃಹ ನಿರ್ಮಾಣ ಸಹಕಾರ ಸಂಘದಿಂದ ಸ್ವತ್ತಿನ ಅಳತೆ 20x30=600 ಚದರ ಅಡಿಗಳ ನಿವೇಶನ ಸಂಖ್ಯೆ:422 ಹಂಚಿಕೆ ಆಗಿದ್ದು, ಈ ಜಾಗದಲ್ಲಿ ಮಹಾನಗರ ಪಾಲಿಕೆಯ ವತಿಯಿಂದ ಅಂಬೇಡ್ಕರ್ ಭವನ ನಿರ್ಮಾಣವಾಗಿದ್ದು, ಇದರಿಂದ ತಮಗೆ ಹಂಚಿಕೆ ಆಗಿರುವ ನಿವೇಶನ ದೊರೆಯದೆ ತೊಂದರೆ ಆಗಿದ್ದು, ತಮಗೆ ಬದಲೀ ನಿವೇಶನ ನೀಡಬೇಕೆಂದು ಕೋರಿರುತ್ತಾರೆ. ಈ ವಿಚಾರದಲ್ಲಿ ತಾವು ನಿವೇಶನ ಹಂಚಿಕೆದಾರರ ಜಿ.ಪಿ.ಎ.ಹೋಲ್ಡರ್ ಆಗಿದ್ದು, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಈ ಬಗ್ಗೆ ರಿಟ್ ಅರ್ಜಿ ಸಂಖ್ಯೆ:9375/2010ನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:22-11-2010 ರಲ್ಲಿ ಆದೇಶ ನೀಡಿ ಅರ್ಜಿದಾರರು ಹೊಸದಾಗಿ ಅರ್ಜಿ ಸಲ್ಲಿಸಿದ ಮೂರು ತಿಂಗಳ ಒಳಗಾಗಿ ಕಾನೂನು ಅನ್ವಯ ಬದಲೀ ನಿವೇಶನವನ್ನು ಹಂಚಿಕೆ ಮಾಡುವಂತೆ ಮಹಾನಗರ ಪಾಲಿಕೆಗೆ ನಿರ್ದೇಶನ ನೀಡಿರುತ್ತದೆ.

ಈ ಮೇಲಿನ ಹಿನ್ನಲೆಯಲ್ಲಿ, ಕವಿಕಾ ಬಡಾವಣೆಯ ನಿವೇಶನ ಸಂಖ್ಯೆ:422 ರಲ್ಲಾಗಲೀ ಅಥವಾ ನಿವೇಶನ ಸಂಖ್ಯೆ:490 ರಲ್ಲಾಗಲೀ ಮಂಡಳಿಯು ಅಂಬೇಡ್ಕರ್ ಭವನವನ್ನು ನಿರ್ಮಿಸಿರುವುದಿಲ್ಲ ಮತ್ತು ಆ ಜಾಗಕ್ಕೆ ಮಂಡಳಿಯ ವತಿಯಿಂದ ಯಾವುದೇ ಸ್ವಾಧೀನ ಪತ್ರವನ್ನು ಸಹ ನೀಡಿರುವುದಿಲ್ಲ. ಆದಾಗ್ಯೂ ಸದರಿ ಜಾಗದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಡಾ|| ಬಿ.ಆರ್.ಅಂಬೇಡ್ಕರ್ ಭವನ ನಿರ್ಮಿಸಿದ್ದು, ಈ ನಿವೇಶನ ಕೊಳಚೆ ನಿರ್ಮೂಲನಾ ಮಂಡಳಿಯ ವ್ಯಾಪ್ತಿಗೆ ಬರುವುದಿಲ್ಲವೆಂದು ಕೊಳಚೆ ನಿರ್ಮೂಲನ ಮಂಡಳಿಯವರು ಪತ್ರ ಮುಖೇನ ತಿಳಿಸಿರುತ್ತಾರೆ.

ಈ ಸ್ಥಳದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಶೇ.18%ರ ಅನುದಾನದ ಹಣದಲ್ಲಿ ಡಾ|| ಬಿ.ಆರ್.ಅಂಬೇಡ್ಕರ್ ಭವನವನ್ನು ನಿರ್ಮಿಸಿರುವುದು ಕಂಡು ಬರುತ್ತದೆ. ಈ ಬಗ್ಗೆ ಮಂಡಳಿಗೂ ಹಾಗೂ ಅಂಬೇಡ್ಕರ್ ಭವನಕ್ಕೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲವೆಂದು ಈಗಾಗಲೇ ಅಂಬೇಡ್ಕರ್ ಭವನವನ್ನು ನಿರ್ಮಿಸಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದಲೇ ಬದಲಿ ನಿವೇಶನ ನೀಡುವ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬಹುದೆಂದು ತಮ್ಮ ಪತ್ರ ದಿನಾಂಕ:14-09-2011 ರಲ್ಲಿ ಕೊಳಚೆ ನಿರ್ಮೂಲನ ಮಂಡಳಿಯವರು ತಿಳಿಸಿರುತ್ತಾರೆ ಹಾಗೂ ಕರ್ನಾಟಕ ವಿದ್ಯುತ್ ಕಾರ್ಖಾನೆಯ ಹೌಸಿಂಗ್ ಸೊಸೈಟಿಯ (ಕವಿಕಾ) ಸದರಿ ನಿವೇಶನ ಸಂಖ್ಯೆ:422ರ ಸದಸ್ಯರಿಗೆ ಬೇರೆ ಕಡೆ ಬದಲಿ ನಿವೇಶನ ಸಂಘದ ವತಿಯಿಂದ ನೀಡಿರುವುದಿಲ್ಲ ಮತ್ತು ನಿವೇಶನ ಸಂಖ್ಯೆ:422ರ ಜಾಗವನ್ನು ಸರ್ವೆ ನಂ.106 ರಲ್ಲಿ ವಿಂಗಡಿಸಲಾಗಿರುತ್ತದೆ. ಅಂದಿನ ಸಚಿವರ ಅಧ್ಯಕ್ಷತೆಯಲ್ಲಿ ಆದ ಸಭೆಯ ತೀರ್ಮಾನದಂತೆ 2 ಎಕರೆ ಜಾಗವನ್ನು ಸಂಘದ ವತಿಯಿಂದ ಬಿಟ್ಟು ಕೊಟ್ಟಿರುತ್ತಾರೆ. ಈ ನಿವೇಶನವು ಆ ಪ್ರದೇಶದಲ್ಲಿ ಇದೆ ಎಂಬುದಾಗಿ ದಿನಾಂಕ:29-07-2011ರ ಪತ್ರದಲ್ಲಿ ತಿಳಿಸಿರುತ್ತಾರೆ.

ಅರ್ಜಿದಾರರಿಗೆ ದಿನಾಂಕ:30-09-2011ರ ಪತ್ರದಲ್ಲಿ ಸೂಚಿಸಿರುವಂತೆ, ಕವಿಕಾ ಸಂಸ್ಥೆಯವರು ನಿವೇಶನ ಸಂಖ್ಯೆ:422ಕ್ಕೆ ಸಂಬಂಧಿಸಿದಂತೆ ನೊಂದಾಯಿಸಿರುವ ಕ್ರಯಪತ್ರವನ್ನು ನಿಯಮಾನುಸಾರ ರದ್ದುಪಡಿಸಿ ಅದರ ಪ್ರತಿಯನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಲು ತಿಳಿಸಲಾಗಿರುತ್ತದೆ.

......................2

ಪರ್ಯಾಯ ನಿವೇಶನ ನೀಡುವ ಬಗ್ಗೆ ಅಪರ ಆಯುಕ್ತರು (ಪಶ್ಚಿಮ) ವಲಯ ಹಾಗೂ ಮುಖ್ಯ ಅಭಿಯಂತರರು (ಪಶ್ಚಿಮ) ರವರುಗಳಿಂದ ವರದಿ ಪಡೆಯಲಾಗಿರುತ್ತದೆ. ಬಸವೇಶ್ವರನಗರ ವಾರ್ಡ್ ಸಂಖ್ಯೆ:100 ರಲ್ಲಿನ ಪಶ್ಚಿಮ ಕಾರ್ಡ್ ರಸ್ತೆ, 4ನೇ ಮುಖ್ಯರಸ್ತೆ, 3ನೇ 'ಸಿ' ಕ್ರಾಸ್, 3ನೇ ಹಂತ, 2ನೇ ಬ್ಲಾಕ್‌ನಲ್ಲಿ ನಿವೇಶನ ಸಂಖ್ಯೆ:235 ಜಾಗವು ಖಾಲಿಯಿದ್ದು, ಇದರ ವಿಸ್ತೀರ್ಣ 94.57 ಚ.ಮೀ. ಅಂದರೆ 1017.57 ಚದರ ಅಡಿಗಳು ಆಗುತ್ತದೆ. ಈ ಜಾಗವನ್ನು ಬದಲೀ ನಿವೇಶನವನ್ನಾಗಿ ಅರ್ಜಿದಾರರಾದ ಶ್ರೀ. ಟಿ.ಎನ್.ಸೋಮಶೇಖರ್ ರವರಿಗೆ ಹಂಚಿಕೆ ಮಾಡಬಹುದೆಂದು ವಲಯ ಅಧಿಕಾರಿಗಳು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಈ ಬಗ್ಗೆ ದಿನಾಂಕ:22-02-2012 ರಂದು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆ ಮುಂದೆ ಟಿಪ್ಪಣಿ ತಯಾರಿಸಿ ಮಂಡಿಸಲಾಗಿದ್ದು, ದಿನಾಂಕ:20-03-2012 ರಂದು ನಡೆದ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆಯಲ್ಲಿ ಅರ್ಜಿದಾರರಿಗೆ ಕರ್ನಾಟಕ ವಿದ್ಯುತ್ ಕಾರ್ಖಾನೆಯ ಗೃಹ ನಿರ್ಮಾಣ ಸಹಕಾರ ಸಂಘದಿಂದ ಸ್ವತ್ತಿನ ಅಳತೆ 20x30=600 ಚದರಡಿಗಳ ನಿವೇಶನ ಸಂಖ್ಯೆ:422 ಹಂಚಿಕೆಯಾಗಿರುವುದಾಗಿ ತಿಳಿಸಿದ್ದು, ಈ ಖಾಲಿ ಜಾಗದಲ್ಲಿ ಪಾಲಿಕೆ ವತಿಯಿಂದ ಡಾ|| ಬಿ.ಆರ್.ಅಂಬೇಡ್ಕರ್ ಭವನ ನಿರ್ಮಿಸಿರುವುದರಿಂದ ಇದಕ್ಕೆ ಬದಲಿ ನಿವೇಶನವಾಗಿ 600 ಚದರಡಿಗಳ ನಿವೇಶನ ನೀಡಬೇಕಾಗಿದ್ದು, ಅದಕ್ಕೆ ಬದಲಾಗಿ 1017.57 ಚದರ ಅಡಿಗಳ ನಿವೇಶನವನ್ನು ನೀಡುವ ಕುರಿತು ಮಂಡಿಸಿರುವ ಪ್ರಸ್ತಾವನೆಯು ಸೂಕ್ತವಲ್ಲವೆಂದು ಅಭಿಪ್ರಾಯಿಸಿ ಸದರಿಯವರಿಗೆ 600 ಚದರಡಿಗಳ ನಿವೇಶನವನ್ನು ಮಾತ್ರ ನೀಡಲು ಕ್ರಮ ಕೈಗೊಂಡು ಕಡತವನ್ನು ಸಮಿತಿಗೆ ಮರುಮಂಡಿಸಲು ತೀರ್ಮಾನಿಸಲಾಗಿದೆ.

ಸದರಿ ಅರ್ಜಿದಾರರು ಪುನಃ ದಿನಾಂಕ:30-05-2012 ರಂದು ವಲಯಾಧಿಕಾರಿಗಳಿಗೆ ಮನವಿ ಸಲ್ಲಿಸಿ ಹೆಚ್ಚುವರಿ ವಿಸ್ತೀರ್ಣ 417.57 ಚದರಡಿಗಳ ಜಾಗವನ್ನು ಹಂಚಿಕೆ ಮಾಡಲು ಕೋರಿದ್ದು, ಈ ಹೆಚ್ಚುವರಿ ವಿಸ್ತೀರ್ಣಕ್ಕೆ ತಗಲುವ ಹಣದ ವ್ಯತ್ಯಾಸವನ್ನು ನಗರ ಪಾಲಿಕೆಗೆ ಪಾವತಿಸಲು ತಯಾರಿದ್ದೇನೆ ಎಂದು ತನ್ನ ಮನವಿಯಲ್ಲಿ ತಿಳಿಸಿರುತ್ತಾರೆ. ಈ ಬಗ್ಗೆ ಜಂಟಿ ಆಯುಕ್ತರು (ಆಸ್ತಿಗಳು) ರವರು ಇದು ಮೂಲೆ ನಿವೇಶನವಾದ್ದರಿಂದ 600 ಚದರಡಿಯನ್ನು ಬದಲಿ ನಿವೇಶನವನ್ನಾಗಿ ಶ್ರೀ. ಟಿ.ಎನ್.ಸೋಮಶೇಖರ್ ರವರಿಗೆ ಹಂಚಿಕೆ ಮಾಡಿ ಉಳಿಕೆ 417.57 ಚದರಡಿ ನಿವೇಶನವನ್ನು ಪಾಲಿಕೆಯ ಬೇರೆ ಉದ್ದೇಶಗಳಿಗೆ ಕಾಯ್ದಿರಿಸಬಹುದೆಂದು ಅಭಿಪ್ರಾಯಿಸಲಾಗಿದೆ.

ಸರ್ಕಾರವು ಇತ್ತೀಚೆಗೆ ದಿನಾಂಕ:21-09-2011 ರಲ್ಲಿ ಪ್ರಕಟಿಸಿರುವ ಸ್ವತ್ತಿನ ಸ್ಥಿರ ಆಸ್ತಿಗಳ ಮಾರ್ಗಸೂಚಿ ದರದಂತೆ ಪ್ರಸ್ತುತ ಪ್ರದೇಶದಲ್ಲಿ ಚದರ ಅಡಿ ಒಂದಕ್ಕೆ ರೂ.4,550/- ಗಳಿರುತ್ತದೆ. ನಿವೇಶನವನ್ನು ಕ್ರಯಕ್ಕೆ ನೀಡಬೇಕಾದಲ್ಲಿ ಶೇಕಡ 20% ರಷ್ಟು ಹೆಚ್ಚಿಸಲಾಗಿ ಇದು ಚದರ ಅಡಿ 1ಕ್ಕೆ ರೂ.5,460/- ಗಳಾಗುತ್ತದೆ. ಬದಲಿ ನಿವೇಶನದ ವಿಸ್ತೀರ್ಣ 600 ಚದರ ಅಡಿ ಇರುತ್ತದೆ. ಇದರಂತೆ ಲೆಕ್ಕಚಾರ ಮಾಡಲಾಗಿ ಸ್ವತ್ತಿನ ಒಟ್ಟು ಮೌಲ್ಯ ರೂ.5460x600=32,76,000/- ಗಳಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಅರ್ಜಿದಾರರಾದ ಶ್ರೀ. ಟಿ.ಎನ್.ಸೋಮಶೇಖರ್ ರವರಿಗೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಮೇಲೆ ತಿಳಿಸಿರುವ ನಗರ ಪಾಲಿಕೆ ಸ್ವತ್ತನ್ನು ಬದಲೀ ನಿವೇಶನವನ್ನಾಗಿ ನೀಡುವ ಬಗ್ಗೆ ನೊಂದಾಯಿಸಿರುವ ಕ್ರಯಪತ್ರ ರದ್ದುಪಡಿಸುವ ಷರತ್ತಿನ ಮೇಲೆ ಸರ್ಕಾರಕ್ಕೆ ಪ್ರಸ್ತಾಪಿಸುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:13-08-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಮಾರ್ಪಡಿಸಿ, ಸದರಿಯವರಿಗೆ ಬದಲಿ ನಿವೇಶನವನ್ನಾಗಿ 600 (ಆರು ನೂರು) ಚದರ ಅಡಿಗಳ ನಿವೇಶನವನ್ನು ಮಾತ್ರ ನೀಡಿ ಉಳಿದ 417.57 ಚದರ ಅಡಿ ನಿವೇಶನವನ್ನು ಪಾಲಿಕೆಯ ಬೇರೆ ಉದ್ದೇಶಗಳಿಗೆ ಕಾಯ್ದಿರಿಸುವಂತೆ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:08-01-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:08-01-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 08-01-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 13 (419)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ನಂ.65, (ಕಾಡುಮಲ್ಲೇಶ್ವರಂ) ಮಲ್ಲೇಶ್ವರಂ ರೈಲ್ವೆ ನಿಲ್ದಾಣದ ಹತ್ತಿರ (ರೈಲ್ವೆ ಪ್ಯಾರ್‌ಲಾಲ್ ರಸ್ತೆ) 11ನೇ ಅಡ್ಡರಸ್ತೆಯಲ್ಲಿ ಇರುವ ನಗರ ಪಾಲಿಕೆ 9x12=108 ಚದರಡಿಗಳ ಜಾಗವನ್ನು ದಿನಾಂಕ:12-12-2007 ರಲ್ಲಿ ರೂ.2500/- ರಂತೆ ಮಾಸಿಕ ಬಾಡಿಗೆ ಮೊತ್ತವನ್ನು ನಿಗಧಿಪಡಿಸಿ 5 ವರ್ಷಗಳ ಅವಧಿಗೆ ಅರ್ಜಿದಾರರಾದ ಶ್ರೀ. ರಾಮಣ್ಣರವರಿಗೆ ಗುತ್ತಿಗೆಗೆ ನೀಡಲಾಗಿತ್ತು.

ಸದರಿ ಗುತ್ತಿಗೆ ಅವಧಿಯು ದಿನಾಂಕ:11-12-2012 ರಂದು ಮುಕ್ತಾಯವಾಗಿರುತ್ತದೆ. ಈ ಬಗ್ಗೆ ಅರ್ಜಿದಾರರು ದಿನಾಂಕ:11-08-2012 ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳ ಸನ್ನಿಧಾನಕ್ಕೆ ಮನವಿ ಸಲ್ಲಿಸಿ ಸದರಿ ಗುತ್ತಿಗೆ ಅವಧಿಯನ್ನು ಪುನಃ 30 ವರ್ಷಗಳ ಅವಧಿಗೆ ನವೀಕರಿಸುವಂತೆ ತಮ್ಮ ಮನವಿಯ ಪತ್ರದಲ್ಲಿ ಕೋರಿರುತ್ತಾರೆ. ಈ ಬಗ್ಗೆ ವಲಯಾಧಿಕಾರಿಗಳು ಸದರಿ ಗುತ್ತಿಗೆ ಅವಧಿಯನ್ನು ನವೀಕರಿಸಬಹುದೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 9x12=108 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿನಾಂಕ: 21-09-2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.4000/- ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 4000x108=ರೂ.4,32,000/- ಒಟ್ಟು ಮೊತ್ತಗಳಾಗುತ್ತದೆ. ಶೇ.10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.43200/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.3600/- ಗಳಾಗುತ್ತದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆ ಅನ್ವಯ 1976 ಕಲಂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ ಇರುತ್ತದೆ. ನಗರ ಯೋಜನೆ ಮತ್ತು ಅಭಿವೃದ್ಧಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಈ ಸ್ಥಾಯಿ ಸಮಿತಿಗಳು ಮತ್ತು ಮಹಾನಗರ ಪಾಲಿಕೆಯ ಸಭೆಯ ಅನುಮೋದನೆಯೊಡನೆ 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಸರ್ಕಾರದ ಅನುಮೋದನೆ ಅವಶ್ಯವಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿ.ಎಂ.ಡಿ. 2002 ದಿನಾಂಕ:02-06-2003ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಯು ತಮ್ಮಕ ಅಧಿಕಾರಗಳನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂಬುದಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಮಾಸಿಕ ಗುತ್ತಿಗೆ ಮೊತ್ತ ರೂ.3600/- ನಿಗಧಿಪಡಿಸಿ, ಶ್ರೀ. ರಾಮಣ್ಣ ರವರಿಗೆ ಗುತ್ತಿಗೆ ಅವಧಿಯನ್ನು 5 ವರ್ಷಗಳ ಅವಧಿಗೆ ನವೀಕರಿಸುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:29-01-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:19-02-2013ರ ನಿರ್ಣಯ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-02-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

......................2

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-02-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-02-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 14 (420)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಸವನಗುಡಿ ವಾರ್ಡ್ ಸಂಖ್ಯೆ:51/154, ಮಾಡೆಲ್ ಹೌಸ್ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರಸ್ವಾಮಿ ದೇವಸ್ಥಾನದ ಉತ್ತರ ಭಾಗದಲ್ಲಿರುವ ಕನ್ಸರ್‌ವೆನ್ಸಿ ಖಾಲಿ ಜಾಗದ ವಿಸ್ತೀರ್ಣ 133'.6"x16' ಅಡಿಗಳ ಜಾಗವನ್ನು ಪಾಲಿಕೆವತಿಯಿಂದ 1949ರಲ್ಲಿ ಶ್ರೀ ಗುರುರಾಜ ಅಸೋಸಿಯೇಷನ್‌ರವರಿಗೆ ಗುತ್ತಿಗೆಗೆ ನೀಡಲಾಗಿರುತ್ತದೆ. ನಂತರ, ದಿನಾಂಕ:19-11-1982 ರಲ್ಲಿ ಸದರಿ ಜಾಗವನ್ನು 99 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲು ನಗರಪಾಲಿಕೆ ಸಭೆ ನಿರ್ಣಯಿಸಿದ್ದು, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದ ಸಂದರ್ಭದಲ್ಲಿ ಸರ್ಕಾರವು ತನ್ನ ದಿನಾಂಕ:24-10-1985ರ ಆದೇಶದಲ್ಲಿ ಸದರಿ ಜಾಗವನ್ನು ಸಂಸ್ಥೆಗೆ ಅಂದಿನ ಮಾರುಕಟ್ಟೆ ದರ ಚದರ ಅಡಿ ಒಂದಕ್ಕೆ ರೂ.275/- ರಂತೆ ಕ್ರಯಕ್ಕೆ ನೀಡಲು ಆದೇಶಿಸಿದ್ದು, ಇದರಂತೆ ಅರ್ಜಿದಾರರ ಸಂಸ್ಥೆಯು ಸ್ವತ್ತಿನ ಮೌಲ್ಯ ರೂ.29,429/- ಗಳನ್ನು ದಿನಾಂಕ: 06-12-1985 ರಲ್ಲಿ ಪಾವತಿಸಿರುತ್ತಾರೆ. ಇದರ ವಿರುದ್ಧವಾಗಿ ಶ್ರೀ ರಾಮು ಮತ್ತು ಶ್ರೀಮತಿ ಶಾಂತಬಾಯಿ ರವರು ಮಾನ್ಯ ಉಚ್ಛನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:11113-11114/1987ನ್ನು ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ:11-08-1998 ರಲ್ಲಿ ಆದೇಶ ನೀಡಿ, ಗುತ್ತಿಗೆದಾರರು ಗುತ್ತಿಗೆ ನವೀಕರಿಸಲು ಕೋರಿದ್ದು, ಅವರು ಕ್ರಯಕ್ಕೆ ಮಾರಾಟ ಮಾಡಲು ಕೋರಿಕೆ ಸಲ್ಲಿಸದಿರುವ ಕಾರಣ, ಸರ್ಕಾರವು ಕ್ರಯಕ್ಕೆ ಮಾರಾಟ ಮಾಡಲು ನೀಡಿರುವ ಆದೇಶವನ್ನು ರದ್ದುಪಡಿಸಿರುತ್ತದೆ. ಈ ಆದೇಶದ ವಿರುದ್ಧ ಪಾಲಿಕೆ ಸಲ್ಲಿಸಿದ್ದ ರಿಟ್ ಮೇಲ್ಮನವಿ ಸಂಖ್ಯೆ:4403/98, 5115/98 ಮತ್ತು 2444/99, 2498/99 ಈ ಮೇಲ್ಮನವಿಗಳು ದಿನಾಂಕ:19-01-2004 ರಂದು ತಿರಸ್ಕೃತಗೊಂಡಿರುತ್ತದೆ.

ಸದರಿ ಸಂಸ್ಥೆಯು ದಿನಾಂಕ:12-10-2006 ರಲ್ಲಿ ಮತ್ತೊಮ್ಮೆ ಅರ್ಜಿ ಸಲ್ಲಿಸಿ, ತಾವು ಈಗಾಗಲೇ ಕ್ರಯದ ಮೊತ್ತ ಪಾವತಿಸಿದ್ದು, ಕ್ರಯಪತ್ರ ನೀಡಲು ಕೋರಿರುತ್ತಾರೆ. ದಿನಾಂಕ:17-04-2007ರ ಸರ್ಕಾರದ ಮಾರ್ಗಸೂಚಿ ದರಗಳ ಅನ್ವಯ ವಾಣಿಜ್ಯಕ್ಕೆ ಚದರ ಅಡಿ ಒಂದಕ್ಕೆ ರೂ.3,220/- ಗಳಾಗಿದ್ದು, ಅದರಂತೆ, ಸ್ವತ್ತಿಗೆ ಒಟ್ಟು ಮೌಲ್ಯ ರೂ.68,83,072/- ಅಗುತ್ತದೆ. ಸದರಿ ಜಾಗಕ್ಕೆ ಅರ್ಜಿದಾರ ಸಂಸ್ಥೆಯು ರೂ.29,429/- ಗಳನ್ನು ಈಗಾಗಲೇ ಪಾವತಿಸಿರುವುದರಿಂದ, ಪ್ರಸಕ್ತ ಮಾರುಕಟ್ಟೆ ದರದಲ್ಲಿ ಶೇ.50% ಕ್ರಯಕ್ಕೆ ನೀಡುವ ಬಗ್ಗೆ ಮಾನ್ಯ ಆಡಳಿತಗಾರರ ಸಭೆ ದಿನಾಂಕ:02-07-2007 ರಲ್ಲಿ ಸರ್ಕಾರದ ಅನುಮೋದನೆ ಮೇರೆಗೆ ಪ್ರಸಕ್ತ ಮಾರುಕಟ್ಟೆ ದರದ ಶೇ.50% ರಷ್ಟು ದರಕ್ಕೆ ಕ್ರಯಕ್ಕೆ ನೀಡಲು ನಿರ್ಣಯಿಸಿರುತ್ತಾರೆ. ಆದರೆ, ಈ ನಿರ್ಣಯವನ್ನು ಸರ್ಕಾರ ತನ್ನ ಪತ್ರ ದಿನಾಂಕ:27-05-2008 ರಲ್ಲಿ ತಿರಸ್ಕರಿಸಿರುತ್ತದೆ. ನಂತರ, ಸರ್ಕಾರವು ಕನ್ಸರ್‌ವೆನ್ಸಿ ಜಾಗವನ್ನು ಅರ್ಜಿದಾರ ಸಂಸ್ಥೆಗೆ ಪ್ರಸಕ್ತ ಮಾರ್ಗಸೂಚಿ ಬೆಲೆ ನಿಗದಿಪಡಿಸಿ ದಿನಾಂಕ:02-07-2009 ರಲ್ಲಿ ಮಾರಾಟ ಮಾಡಲು ಮಂಜೂರಾತಿ ನೀಡಿರುತ್ತದೆ.

ಸರ್ಕಾರದ ಈ ಆದೇಶವನ್ನು ಶ್ರೀಮತಿ. ಹೆಚ್.ಎನ್.ಪದ್ಮಜಾ ರಾವ್ ಮತ್ತಿತರರು ಮಾನ್ಯ ಉಚ್ಛನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:25716/2009 ಮತ್ತು 25774/09 ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಗಳು ದಿನಾಂಕ:13-09-2010 ರಲ್ಲಿ ತೀರ್ಮಾನವಾಗಿರುತ್ತದೆ. ಅರ್ಜಿದಾರರ ಸಂಸ್ಥೆಗೆ ಗುತ್ತಿಗೆ ನೀಡಿರುವ ಜಾಗವನ್ನು ಕ್ರಯಕ್ಕೆ ನೀಡಿರುವ ಬಗ್ಗೆ ನಡೆದಿರುವ ಆಡಳಿತಗಾರರ ವರದಿ ಹಾಗೂ ಸರ್ಕಾರದ ದಿನಾಂಕ: 02-07-2009ರ ಆದೇಶಗಳನ್ನು ರದ್ದುಪಡಿಸಿ, ಮಾನ್ಯ ನ್ಯಾಯಾಲಯವು ತೀರ್ಪು ನೀಡಿರುತ್ತದೆ. ಆದರೆ, ಹಿಂದೆ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ:11113-11114/87, ರಿಟ್ ಮೇಲ್ಮನವಿ 4403/98 ಹಾಗೂ ಇತರೇ ಪ್ರಕರಣಗಳು ಮತ್ತು ರಿಟ್ ಅರ್ಜಿ ಸಂಖ್ಯೆ:11042/09 ಗಳಲ್ಲಿ ನೀಡಿರುವ ಆದೇಶಗಳ ಹಿನ್ನಲೆಯಲ್ಲಿ ಅರ್ಜಿದಾರ ಸಂಸ್ಥೆಯು ಹಾಗೂ ರಿಟ್ ಅರ್ಜಿದಾರರುಗಳ ಮನವಿಗಳನ್ನು ಪರಿಶೀಲಿಸುವಂತೆ, ನಿರ್ದೇಶನ ನೀಡಿರುತ್ತದೆ. ಈ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳಲು ದಿನಾಂಕ:13-09-2010 ರಿಂದ ಮೂರು ತಿಂಗಳ ಕಾಲಾವಕಾಶ ನೀಡಿರುತ್ತದೆ. ಅಲ್ಲಿಯವರೆಗೆ ಪ್ರಶ್ನಿತ ಜಾಗಕ್ಕೆಕ ಸಂಬಂಧಿಸಿದಂತೆ ಯಥಾಸ್ಥಿತಿ (STATUS-QUO) ಕಾಪಾಡಲು ಮಾನ್ಯ ಉಚ್ಛನ್ಯಾಯಾಲಯವು ನಿರ್ದೇಶಿಸಿರುತ್ತದೆ.

......................2

ಮುಂದುವರೆದು, ದಿನಾಂಕ:13-09-2010ರ ಉಚ್ಚನ್ಯಾಯಾಲಯದ ಆದೇಶದಲ್ಲಿ ಮೂರು ತಿಂಗಳ ಅವಧಿಯೊಳಗೆ ಮೇಲ್ಮನವಿದಾರರಾದ ಶ್ರೀಮತಿ. ಹೆಚ್.ಎನ್.ಪದ್ಮಜಾರಾವ್ ಮತ್ತು ಶ್ರೀಧರ್ ಬಲ್ಲಾಳ, ಎದುರುದಾರರಾದ ಶ್ರೀ ಗುರುರಾಜ ಅಸೋಸಿಯೇಷನ್‌ರವರು ಈ ಜಾಗವನ್ನು ಪಡೆಯುವ ಅರ್ಹತೆ ಬಗ್ಗೆ ಸ್ಪಷ್ಟ ಅಭಿಪ್ರಾಯ ನೀಡದೇ ಇರುವುದನ್ನು ನ್ಯಾಯಾಲಯವು ಗಮನಿಸಿ ಉಭಯತ್ರರರ ಬೇಡಿಕೆ ಬಗ್ಗೆ **W.P.No.11113-11114/2009** ಮತ್ತು **W.A.No.4403/98, 5115/98** ಮತ್ತು **2444/99, 4298** ಮತ್ತು **W.P.No.11042/2009** ರಲ್ಲಿ ನೀಡಲಾಗಿರುವ ಆದೇಶಗಳ **Letter** ಮತ್ತು **Spirit** ಹಿನ್ನಲೆಯಲ್ಲಿ ಪರಾಮರ್ಶಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಅದರ ಅನುಮತಿಯನ್ನು ಪಡೆಯುವುದೆಂದು ಆದೇಶಿಸಲಾಗಿರುತ್ತದೆ.

ಜಂಟಿ ಆಯುಕ್ತರು (ದಕ್ಷಿಣ) ವಲಯ ರವರು ಪ್ರಕರಣಕ್ಕೆ ಸಂಬಂಧಿಸಿದಂತೆ, ಉಭಯತ್ರರಿಗೆ ವಿಚಾರಣಾ ತಿಳುವಳಿಕೆ ಪತ್ರ ನೀಡಿ ವಿಚಾರಣೆ ನಡೆಸಿ, ಅವಶ್ಯ ದಾಖಲಾತಿಗಳೊಂದಿಗೆ ತಮ್ಮ ವಿವರವಾದ ವರದಿಯನ್ನು ಸಲ್ಲಿಸಿದ್ದು, ಇದರ ಸಂಕ್ಷಿಪ್ತ ವರದಿ ಈ ಕೆಳಕಂಡಂತೆ ಇದೆ.

ಅರ್ಜಿದಾರ ಸಂಸ್ಥೆಯು ದಿನಾಂಕ:06-12-1985ರಲ್ಲಿ ಸರ್ಕಾರದ ಆದೇಶದನ್ವಯ ಮಾರುಕಟ್ಟೆ ಮಾರ್ಗಸೂಚಿ ದರದಂತೆ, ರೂ.29,429/- ಗಳ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಿರುತ್ತಾರೆ. ಈಗಾಗಲೇ ಸದರಿ ಸಂಸ್ಥೆಯು ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದು, ಮಠದ ಭಕ್ತಾಧಿಗಳಿಗೆ ಸೂಕ್ತ ರೀತಿಯಲ್ಲಿ ಉಪಯೋಗಿಸುತ್ತಿದ್ದು, ಸದರಿ ಖಾಲಿ ಜಾಗವನ್ನು ಕ್ರಯಕ್ಕೆ ನೀಡುವಂತೆ ಕೋರಿರುತ್ತಾರೆ.

ತಕರಾರುದಾರರು ಮುಖ್ಯವಾಗಿ ಪ್ರಸ್ತುತ ಸ್ವತ್ತಿನಲ್ಲಿ ನೀರು ಮತ್ತು ಒಳಚರಂಡಿ ಪೈಪುಗಳು ಹಾದುಹೋಗಿದ್ದು, ಅಕ್ಕಪಕ್ಕದ ನಿವಾಸಿಗಳ ಅನುಕೂಲಕ್ಕಾಗಿ ಪಾಲಿಕೆಯು ಈ ಆಸ್ತಿಯನ್ನು ರಕ್ಷಿಸಿ ಉಳಿಸಿಕೊಂಡು ಹೋಗಬೇಕೆಂದು ತಿಳಿಸಿರುತ್ತಾರೆ.

ವಿಚಾರಣೆಯಿಂದ ಜಂಟಿ ಆಯುಕ್ತರು(ದಕ್ಷಿಣ)ರವರು ಈ ಕೆಳಕಂಡ ಅಂಶಗಳನ್ನು ಪರಿಗಣಿಸಿದ್ದು, ಅವುಗಳ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ.

(i) ಪ್ರಸ್ತುತ ಸ್ವತ್ತಿನ ವಿಸ್ತೀರ್ಣ ಕೇವಲ 2137.6' ಚ.ಅಡಿ ಇದ್ದು, ಇದರಲ್ಲಿ ಉದ್ಯಾನವನ/ಗಿಡ ನೆಡುವುದು ಸಾಧ್ಯವಾಗುವುದಿಲ್ಲ ಹಾಗೂ ಪ್ರಸ್ತುತ ಜಾಗವು ನಗರಪಾಲಿಕೆಗೆ ಉಪಯೋಗಕ್ಕೆ ಬರುವುದಿಲ್ಲ. ಅರ್ಜಿದಾರ ಸಂಸ್ಥೆಯು ಈಗಾಗಲೇ ಗುತ್ತಿಗೆ ಆಧಾರದ ಮೇಲೆ ಪ್ರಸ್ತುತ ಜಾಗದ ಸ್ವಾಧೀನಾನುಭವದಲ್ಲಿದ್ದು, ಇದನ್ನು ಸಮರ್ಪಕವಾಗಿ ಉಪಯೋಗಿಸುತ್ತಿದ್ದು, ಯಾವುದೇ ಮೂರನೇ ವ್ಯಕ್ತಿಗೆ ಪರಬಾರೆ ಮಾಡುವುದಕ್ಕೆ ಅವಕಾಶ ಇರುವುದಿಲ್ಲ.

(ii) ಒಂದು ವೇಳೆ ಈ ಸ್ಥಳವನ್ನು ಹಾಗೆ ಬಿಟ್ಟಲ್ಲಿ ದುರುಪಯೋಗ ಆಗುವ ಸಾಧ್ಯತೆಗಳೇ ಹೆಚ್ಚಾಗಿದ್ದು, ಈ ಜಾಗವನ್ನು ಗುತ್ತಿಗೆದಾರ ಸಂಸ್ಥೆ ಕೋರಿರುವಂತೆ ಪ್ರಸಕ್ತ ಮಾರುಕಟ್ಟೆ ಬೆಲೆ ನಿಗಧಿಪಡಿಸಿ ಸರ್ಕಾರದ ಮಂಜೂರಾತಿರನ್ವಯ ಮಾರಾಟ ಮಾಡುವುದು ಸಮಂಜಸವಾಗಿರುತ್ತದೆಯೆಂದು ಜಂಟಿ ಆಯುಕ್ತರು (ದಕ್ಷಿಣ) ರವರು ವರದಿ ನೀಡಿರುತ್ತಾರೆ.

ಸ್ಥಳ ಪರಿಶೀಲಿಸಲಾಗಿ, ಪ್ರಸ್ತುತ ಜಾಗವು ಈಗಾಗಲೇ ಶ್ರೀ ರಾಘವೇಂದ್ರಸ್ವಾಮಿ ಮಠದವರ ವಶದಲ್ಲಿದ್ದು, ನೀರಿನ ನಲ್ಲಿಗಳು ಹಾಗೂ ಸೌದೆ ಇತ್ಯಾದಿ ಸಂಗ್ರಹ ಮಾಡಿರುತ್ತಾರೆ. ಎರಡೂ ದಿಕ್ಕಿನಲ್ಲಿ ಗೋಡೆಯಿಂದ ಜಾಗ ಮುಚ್ಚಲಾಗಿದ್ದು, ಈ ಜಾಗದ ಪಕ್ಕದ ಜಾಗವನ್ನು ಸಹ ರಾಮಮಂದಿರ ದೇವಸ್ಥಾನದವರು ಕಟ್ಟಡ ನಿರ್ಮಿಸಿಕೊಂಡು ಬಳಸುತ್ತಿದ್ದಾರೆ. ಇದರಿಂದಾಗಿ, ಈ ಜಾಗ ಸಾರ್ವಜನಿಕ ಉದ್ದೇಶಕ್ಕೆ ಅನುಪಯುಕ್ತವಾಗಿರುತ್ತದೆ.

ಎದುರುದಾರರು ಈ ಜಾಗದಲ್ಲಿ ನೀರಿನ ಪೈಪು ಮತ್ತು ಒಳಚರಂಡಿ ಪೈಪುಗಳು ಕನ್ಸರ್‌ವೆನ್ಸಿ ಲೈನಿನಲ್ಲಿ ಹಾಯ್ದು ಹೋಗಿವೆ ಎಂಬುದಾಗಿ ತಿಳಿಸಿರುತ್ತಾರೆ. ಈ ಸಮಸ್ಯೆ ಕನ್ಸರ್‌ವೆನ್ಸಿಯಲ್ಲಿ ಜಾಗ ಪಡೆದಿರುವ ಪಕ್ಕದ ಇತರೆ ಕಟ್ಟಡಗಳ ಮಾಲೀಕರಿಂದ ಆಗುವುದು ಸಹಜ. ಈ ಪೈಪುಲೈನ್‌ಗಳನ್ನು ದುರಸ್ಥಿಪಡಿಸುವುದಾಗಲೀ ಅಥವಾ ಬದಲಾಯಿಸುವ ಕಾರ್ಯಗಳಿಗೆ ಯಾವುದೇ ರೀತಿಯ ತೊಂದರೆಯನ್ನು ನೀಡದೇ ಈ ಜಾಗದಲ್ಲಿ ಯಾವುದೇ ಶಾಶ್ವತವಾಗಿ ಪಕ್ಕಾ ಕಟ್ಟಡ ನಿರ್ಮಿಸದಿರುವ ಷರತ್ತನ್ನು ವಿಧಿಸಿ, ಈಗಾಗಲೇ ಸಂದಾಯ ಮಾಡಿರುವ ಹಣ ಅಂದಿನ ಮಾರುಕಟ್ಟೆ ದರದಂತೆ ಆಗಿದ್ದು, ಈಗಿನ ಮಾರುಕಟ್ಟೆ ಬೆಲೆ ಪ್ರಕಾರ ಹಣ ಕಟ್ಟಿಸಿಕೊಳ್ಳುವ

.......................3

ನಿಬಂಧನೆಗೊಳಪಟ್ಟು ಕ್ರಯಕ್ಕೆ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆ ಮುಂದೆ ಟಿಪ್ಪಣಿ ಮಂಡಿಸಲಾಗಿತ್ತು.

ಈ ಟಿಪ್ಪಣಿಯನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-09-2011 ರಲ್ಲಿ ಒಪ್ಪಿದ್ದು, ನಂತರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಪ್ರಸ್ತಾವನೆಯನ್ನು ಭಾಗಶಃ ಒಪ್ಪುತ್ತಾ, 5 ವರ್ಷಗಳ ಅವಧಿಗೆ ಜಾಗವನ್ನು ಗುತ್ತಿಗೆಗೆ ನೀಡಲು ನಂತರ ಮುಂದಿನ ಅವಧಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಒಪ್ಪಿದ್ದು, ಈ ನಿರ್ಣಯವನ್ನು ದಿನಾಂಕ:29-11-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ಒಪ್ಪುವುದೆಂದು ತೀರ್ಮಾನಿಸಿದೆ. ನಂತರ ಆಯುಕ್ತರ ಸುತ್ತೋಲೆಯಂತೆ ಗುತ್ತಿಗೆ ಹಣ ಲೆಕ್ಕಚಾರ ಮಾಡಲಾಗಿ ಮಾಸಿಕ ರೂ.53,440/- ಗಳಾಗುತ್ತದೆಂದು, ಗುತ್ತಿಗೆದಾರರಿಗೆ ಪಾವತಿಸುವಂತೆ ಹಿಂಬರಹ ಜಾರಿ ಮಾಡಲಾಗಿರುತ್ತದೆ. ಆದರೆ, ಗುತ್ತಿಗೆದಾರರು ಈ ಸಂಸ್ಥೆಯು ಕೇವಲ ಒಂದು ಧಾರ್ಮಿಕ ಸಂಸ್ಥೆಯಾಗಿದ್ದು, ನಿರಂತರವಾಗಿ ಜ್ಞಾನ ಕಾರ್ಯ ಮಾಡುತ್ತಿದ್ದು, ಯಾವುದೇ ಲಾಭದಾಯಕ ವ್ಯವಹಾರಗಳನ್ನು ಮಾಡುತ್ತಿಲ್ಲವೆಂದು ಗುತ್ತಿಗೆ ಹಣ ಪಾವತಿಸಲು ಶಕ್ತರಿಲ್ಲವೆಂದು ತಿಳಿಸಿ ಹಿಂದಿನ ಮೊತ್ತಕ್ಕೆ ಕ್ರಯಕ್ಕೆ ನೀಡಲು ಕೋರಿರುತ್ತಾರೆ. ಆದುದರಿಂದ, ಈ ಕರ್ನ್ಸರ್‌ವೆನ್ಸಿ ಜಾಗವನ್ನು ಪಾಲಿಕೆಯೇ ಉಳಿಸಿಕೊಳ್ಳಲು ಅಭಿಪ್ರಾಯಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಗುರುರಾಜ ಅಸೋಸಿಯೇಷನ್‌ರವರಿಗೆ ನೀಡಿರುವ ಗುತ್ತಿಗೆಯನ್ನು ರದ್ದುಪಡಿಸಿ ಕರ್ನ್ಸರ್‌ವೆನ್ಸಿ ಜಾಗವನ್ನು ಪಾಲಿಕೆಯೇ ಉಳಿಸಿಕೊಳ್ಳುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:29-08-2012ರ ಟಿಪ್ಪಣಿ ಹಾಗೂ ಪ್ರಸ್ತಾವನೆ ಕುರಿತಂತೆ ಈಗಾಗಲೇ ಹಲವಾರು ಬಾರಿ ಪಾಲಿಕೆಯ ಸಭೆ ಹಾಗೂ ಆಡಳಿತಗಾರರ ಮುಂದೆ ತೀರ್ಮಾನಕ್ಕಾಗಿ ಕಡತವನ್ನು ಮಂಡಿಸಿದ್ದು, ಸರ್ಕಾರದ ಹಂತದಲ್ಲಿ ಕಡತವು ವ್ಯವಹಾರಣೆ ಆಗಿರುವ ಕಾರಣ ಈ ಪ್ರಸ್ತಾವನೆ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲು ಪಾಲಿಕೆಯ ಸಭೆ ಮುಂದೆ ಮಂಡಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:08.01.2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 22-02-203ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪಾಲಿಕೆ ಸಭೆಯ ದಿನಾಂಕ:29-11-2011ರ ತೀರ್ಮಾನವನ್ನು ಪುನರ್ ಪ್ರತಿಪಾದಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪಾಲಿಕೆ ಸಭೆಯ ದಿನಾಂಕ:29-11-2011ರ ತೀರ್ಮಾನವನ್ನು ಪುನರ್ ಪ್ರತಿಪಾದಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 15 (421)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀಮತಿ. ಧನಲಕ್ಷ್ಮಿ ರವರು ವಾರ್ಡ್-34 (98) ಆರ್.ಟಿ.ನಗರ, ಶಾಂತಿನಗರ ಹೋಟೆಲ್ ಮುಂಭಾಗದಲ್ಲಿರುವ ಉದ್ಯಾನವನದಲ್ಲಿ 9x5 ಚದರ ಅಡಿಗಳ ಜಾಗವನ್ನು ನಂದಿನಿ ಹಾಲಿನ ಕೇಂದ್ರ ನಡೆಸಲು 5 ವರ್ಷಗಳ ಅವಧಿ ಗುತ್ತಿಗೆ ಆಧಾರದ ಮೇರೆಗೆ ಪಡೆದಿದ್ದು, ಸದರಿ ಗುತ್ತಿಗೆ ಅವಧಿಯು ದಿನಾಂಕ:10-07-2012ಕ್ಕೆ ಪೂರ್ಣಗೊಂಡಿದ್ದು, ಪುನಃ 5 ವರ್ಷಗಳ ಕಾಲ ಗುತ್ತಿಗೆ ಅವಧಿ ಮುಂದುವರೆಸುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ವಲಯಾಧಿಕಾರಿಗಳು ತಮ್ಮ ವರದಿಯಲ್ಲಿ 5x9=45 ಚದರ ಅಡಿಗಳ ಜಾಗವನ್ನು ಹಾಲಿನ ಕೇಂದ್ರ ನಡೆಸಲು ಮಾಸಿಕ ಗುತ್ತಿಗೆ ಮೊತ್ತ ರೂ.2,100/- ಗಳನ್ನು ನಿಗಧಿಪಡಿಸಿ ದಿನಾಂಕ:10-07-2007 ರಿಂದ 10-07-2012 ರವರೆಗೆ ಒಟ್ಟು 5 ವರ್ಷಗಳಿಗೆ ಶ್ರೀಮತಿ.ಧನಲಕ್ಷ್ಮಿ ಎಂಬುವವರಿಗೆ ಮಂಜೂರು ಮಾಡಿ ನೀಡಲಾಗಿದ್ದು, ಸದರಿ ಗುತ್ತಿಗೆ ಅವಧಿಯು ದಿನಾಂಕ:10-07-2012ಕ್ಕೆ ಮುಗಿದಿದ್ದು, ಮತ್ತೆ 5 ವರ್ಷಗಳ ಕಾಲ ನವೀಕರಣಕ್ಕಾಗಿ ಕೋರಿದ್ದು, ತಹಲ್‌ವರೆಗೂ ಮಾಸಿಕ ಗುತ್ತಿಗೆ ಹಣವನ್ನು ಪಾವತಿಸಿರುತ್ತಾರೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಅ.ಕಂ/ಪಿಆರ್/115/01-12, ದಿನಾಂಕ:01-03-2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ, ಪ್ರಸ್ತುತ ಮಾರುಕಟ್ಟೆ ಬೆಲೆಯ ಕನಿಷ್ಠ ಶೇ. 10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದೆಂದಿದೆ.

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:19-2010-11, ದಿನಾಂಕ:21-09-2011 ರಂತೆ ಪ್ರಸ್ತಾಪಿತ ಸ್ವತ್ತಿನ ಮಾರುಕಟ್ಟೆ ದರವು ವಾಣಿಜ್ಯ ಉದ್ದೇಶಕ್ಕೆ ಚದರ ಅಡಿ 1ಕ್ಕೆ ರೂ.7,700/- ಗಳಿದ್ದು, ಸ್ವತ್ತಿನ ಒಟ್ಟು ಅಳತೆ 45 ಚದರ ಅಡಿಗಳಿಗೆ ರೂ.3,46,500/- ಗಳಾಗಲಿದ್ದು, ವಾರ್ಷಿಕ ಗುತ್ತಿಗೆ ಮೊತ್ತ ರೂ.34,650/- ಗಳಾಗುತ್ತದೆ ಮತ್ತು ಶೇ.10% ರಂತೆ ಪರಿಗಣಿಸಿದಲ್ಲಿ ಮಾಸಿಕ ರೂ.2900/- ಗಳಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಅರ್ಜಿದಾರರು ಕೋರಿರುವಂತೆ ಗುತ್ತಿಗೆಯನ್ನು ಮತ್ತೇ 5 ವರ್ಷಗಳ ಅವಧಿಗೆ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-01-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-01-2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-02-2013ರ ನಿರ್ಣಯ.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-02-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-02-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 16 (422) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಡುಗೋಡಿ ವಾರ್ಡ್ ಸಂಖ್ಯೆ: 83 ರ ವ್ಯಾಪ್ತಿಯಲ್ಲಿ ಬರುವ ಹೊಸಕೋಟೆ-ಆನೇಕಲ್ ರಸ್ತೆಯಲ್ಲಿರುವ ಹೋಪ್ ಫಾರಂ ವೃತ್ತಕ್ಕೆ **"ಶ್ರೀ ಸತ್ಯಸಾಯಿ ವೃತ್ತ"** ಎಂದು ನಾಮಕರಣ ಮಾಡಲು ದಿನಾಂಕ:28-03-2012 ರಂದು ನಡೆದ ಪಾಲಿಕೆ ಸಭೆಯ ವಿಷಯದ ಸಂಖ್ಯೆ: 41(349)/2011-12ರಲ್ಲಿ ಕೈಗೊಂಡಿರುವ ನಿರ್ಣಯವನ್ನು ರದ್ದುಪಡಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಸಂಬಂಧ ಸರ್ಕಾರವು ದಿನಾಂಕ: 15-11-2012ರಂದು ನಗರ ಪಾಲಿಕೆಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಪಾಲಿಕೆಯ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಾಮಕರಣ ಸಂಬಂಧ ದಿನಾಂಕ: 28-03-2012 ರಂದು ವಿಷಯದ ಸಂಖ್ಯೆ 41(349)/2011-12ರಲ್ಲಿ ಕೈಗೊಂಡಿರುವ ನಿರ್ಣಯವು ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ಸಾರ್ವಜನಿಕ ಸ್ಥಳಕ್ಕೆ ನಾಮಕರಣ ಮಾಡುವುದು) ನಿಯಮಗಳು 2008 ನಿಯಮ 7ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಆದುದರಿಂದ, ಸದರಿ ನಿರ್ಣಯವನ್ನು ಏಕೆ ರದ್ದುಪಡಿಸಬಾರದು ಎಂಬ ಬಗ್ಗೆ ಕೆ.ಎಂ.ಸಿ ಕಾಯ್ದೆಯ ಕಲಂ 98(2)ರನ್ವಯ ಈ ನೋಟೀಸ್ ಜಾರಿ ಮಾಡಿದ್ದು ಈ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ ಈ ನೋಟೀಸ್ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ಲಿಖಿತ ಹೇಳಿಕೆಯನ್ನು ಸಂಬಂಧಿಸಿದ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯಿಂದ ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ. ನಿಗಧಿತ ದಿನಾಂಕದೊಳಗಾಗಿ ಲಿಖಿತ ಹೇಳಿಕೆ ಬಾರದಿದ್ದಲ್ಲಿ ನಿಯಮಾನುಸಾರ ಏಕಪಕ್ಷೀಯವಾಗಿ ನಿರ್ಣಯವನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ಸೂಚಿಸಿರುತ್ತಾರೆ.

ಆದುದರಿಂದ, ಸರ್ಕಾರದ ದಿನಾಂಕ: 15-11-2012ರ ಕಾರಣ ಕೇಳುವ ನೋಟಿಸ್‌ನ್ನು ದಾಖಲಾತಿಗಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:11-01-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಪರಿಶೀಲಿಸಲಾಗಿ, ಸ್ಥಳೀಯ ಪ್ರದೇಶದ ಸಾರ್ವಜನಿಕರ ಕೋರಿಕೆಯ ಮೇರೆಗೆ ಸದರಿ ರಸ್ತೆಯಲ್ಲಿರುವ ಹೋಪ್ ಫಾರಂ ವೃತ್ತಕ್ಕೆ ಶ್ರೀ ಸತ್ಯಸಾಯಿ ವೃತ್ತ ಎಂದು ನಾಮಕರಣ ಮಾಡಲು ತೀರ್ಮಾನಿಸಿದ್ದು, ಸರ್ಕಾರದ ಅಂತಿಮ ಆದೇಶಕ್ಕೆ ಬದ್ಧರಾಗಿರುವುದಾಗಿ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-01-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-01-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 22-01-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 17 (423)) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 168ರ ವ್ಯಾಪ್ತಿಯಲ್ಲಿ ಬರುವ ಪಟ್ಟಾಭಿರಾಮನಗರದ 24ನೇ ಅಡ್ಡರಸ್ತೆ, ಜಯನಗರ 4ನೇ ಬ್ಲಾಕ್‌ದಿಂದ ಆರಂಭವಾಗಿ 47ನೇ ಅಡ್ಡರಸ್ತೆ, ಜಯನಗರ 4ನೇ ಬ್ಲಾಕ್‌ಗೆ ಅಂತ್ಯವಾಗುವ 7ನೇ ಮುಖ್ಯರಸ್ತೆಗೆ **"ಶ್ರೀ ಚಂದ್ರಶೇಖರ್ ಆಜಾದ್ ರಸ್ತೆ"** ಎಂದು ನಾಮಕರಣ ಮಾಡಲು ದಿನಾಂಕ:28-03-2012 ರಂದು ನಡೆದ ಪಾಲಿಕೆ ಸಭೆಯ ವಿಷಯದ ಸಂಖ್ಯೆ:44(352)/2011-12 ರಲ್ಲಿ ಕೈಗೊಂಡಿರುವ ನಿರ್ಣಯವನ್ನು ರದ್ದುಪಡಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಸಂಬಂಧ ಸರ್ಕಾರವು ದಿನಾಂಕ: 15-11-2012ರಂದು ನಗರ ಪಾಲಿಕೆಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಪಾಲಿಕೆಯ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಾಮಕರಣ ಸಂಬಂಧ ದಿನಾಂಕ: 28-03-2012ರಂದು ವಿಷಯದ ಸಂಖ್ಯೆ:44(352)/2011-12ರಲ್ಲಿ ಕೈಗೊಂಡಿರುವ ನಿರ್ಣಯವು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ಸಾರ್ವಜನಿಕ ಸ್ಥಳಕ್ಕೆ ನಾಮಕರಣ ಮಾಡುವುದು) ನಿಯಮಗಳು 2008 7ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಆದುದರಿಂದ ಸದರಿ ನಿರ್ಣಯವನ್ನು ಏಕೆ ರದ್ದುಪಡಿಸಬಾರದು ಎಂಬ ಬಗ್ಗೆ ಕೆ.ಎಂ.ಸಿ ಕಾಯ್ದೆಯ ಕಲಂ 98(2)ರನ್ವಯ ಈ ನೋಟೀಸ್ ಜಾರಿ ಮಾಡಿದ್ದು ಈ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ ಈ ನೋಟೀಸ್ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ಲಿಖಿತ ಹೇಳಿಕೆಯನ್ನು ಸಂಬಂಧಿಸಿದ ಸ್ಥಾಯಿ ಸಮಿತಿಯಿಂದ ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ. ನಿಗಧಿತ ದಿನಾಂಕದೊಳಗಾಗಿ ಲಿಖಿತ ಹೇಳಿಕೆ ಬಾರದಿದ್ದಲ್ಲಿ ನಿಯಮಾನುಸಾರ ಏಕಪಕ್ಷೀಯವಾಗಿ ನಿರ್ಣಯವನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ಸೂಚಿಸಿರುತ್ತಾರೆ.

ಆದುದರಿಂದ, ಸರ್ಕಾರದ ದಿನಾಂಕ: 15-11-2012ರ ಕಾರಣ ಕೇಳುವ ನೋಟಿಸ್‌ನ್ನು ದಾಖಲಾತಿಗಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:11-01-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಪರಿಶೀಲಿಸಲಾಗಿ, ಸ್ಥಳೀಯ ಪ್ರದೇಶದ ಸಾರ್ವಜನಿಕರ ಕೋರಿಕೆಯ ಮೇರೆಗೆ ಸದರಿ ರಸ್ತೆಗೆ ಶ್ರೀ ಚಂದ್ರಶೇಖರ ಆಜಾದ್ ರಸ್ತೆ ಎಂದು ನಾಮಕರಣ ಮಾಡಲು ತೀರ್ಮಾನಿಸಿದ್ದು, ಸರ್ಕಾರದ ಅಂತಿಮ ಆದೇಶಕ್ಕೆ ಬದ್ಧರಾಗಿರುವುದಾಗಿ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 22-01-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-01-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 22-01-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 18 (424))/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 168ರ ವ್ಯಾಪ್ತಿಯಲ್ಲಿ ಬರುವ 36ನೇ ಅಡ್ಡರಸ್ತೆ (16ನೇ ಮುಖ್ಯರಸ್ತೆಯಿಂದ ಬನ್ನೇರುಘಟ್ಟ ರಸ್ತೆಯವರೆಗೆ) "ಶ್ರೀ ಸ್ವಾಮಿ ವಿವೇಕಾನಂದ ರಸ್ತೆ" ಎಂದು ನಾಮಕರಣ ಮಾಡಲು ದಿನಾಂಕ:28-03-2012 ರಂದು ನಡೆದ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ:42(350)/2011-12 ರಲ್ಲಿ ಕೈಗೊಂಡಿರುವ ನಿರ್ಣಯವನ್ನು ರದ್ದುಪಡಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಸಂಬಂಧ ಸರ್ಕಾರವು ದಿನಾಂಕ:15-11-2012ರಂದು ನಗರ ಪಾಲಿಕೆಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಪಾಲಿಕೆಯ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಾಮಕರಣ ಸಂಬಂಧ ದಿನಾಂಕ: 28-03-2012 ರಂದು ವಿಷಯದ ಸಂಖ್ಯೆ:42(350)/2011-12ರಲ್ಲಿ ಕೈಗೊಂಡಿರುವ ನಿರ್ಣಯವು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ಸಾರ್ವಜನಿಕ ಸ್ಥಳಕ್ಕೆ ನಾಮಕರಣ ಮಾಡುವುದು) ನಿಯಮಗಳು 2008ರ ನಿಯಮ 7ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಆದುದರಿಂದ, ಸದರಿ ನಿರ್ಣಯವನ್ನು ಏಕೆ ರದ್ದುಪಡಿಸಬಾರದು ಎಂಬ ಬಗ್ಗೆ ಕೆ.ಎಂ.ಸಿ ಕಾಯ್ದೆಯ ಕಲಂ 98(2)ರನ್ವಯ ಈ ನೋಟೀಸ್ ಜಾರಿ ಮಾಡಿದ್ದು ಈ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ ಈ ನೋಟೀಸ್ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ಲಿಖಿತ ಹೇಳಿಕೆಯನ್ನು ಸಂಬಂಧಿಸಿದ ಸ್ಥಾಯಿ ಸಮಿತಿಯಿಂದ ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ. ನಿಗಧಿತ ದಿನಾಂಕದೊಳಗಾಗಿ ಲಿಖಿತ ಹೇಳಿಕೆ ಬಾರದಿದ್ದಲ್ಲಿ ನಿಯಮಾನುಸಾರ ಏಕಪಕ್ಷೀಯವಾಗಿ ನಿರ್ಣಯವನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ಸೂಚಿಸಿರುತ್ತಾರೆ.

ಆದುದರಿಂದ, ಸರ್ಕಾರದ ದಿನಾಂಕ: 19-11-2012ರ ಕಾರಣ ಕೇಳುವ ನೋಟಿಸ್ ಅನ್ನು ದಾಖಲಾತಿಗಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-01-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಪರಿಶೀಲಿಸಲಾಗಿ, ಸ್ಥಳೀಯ ಪ್ರದೇಶದ ಸಾರ್ವಜನಿಕರ ಕೋರಿಕೆಯ ಮೇರೆಗೆ ಸದರಿ ರಸ್ತೆಗೆ ಶ್ರೀ ಸ್ವಾಮಿ ವಿವೇಕಾನಂದ ರಸ್ತೆ ಎಂದು ನಾಮಕರಣ ಮಾಡಲು ತೀರ್ಮಾನಿಸಿದ್ದು, ಸರ್ಕಾರದ ಅಂತಿಮ ಆದೇಶಕ್ಕೆ ಬದ್ಧರಾಗಿರುವುದಾಗಿ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-01-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-01-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 22-01-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 19 (425)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 168ರ ಪಟ್ಟಾಭಿರಾಮನಗರದ 9ನೇ ಮುಖ್ಯರಸ್ತೆ ಮತ್ತು 27ನೇ ಅಡ್ಡರಸ್ತೆ ಈ ಎರಡು ರಸ್ತೆಗಳು ಕೂಡುವ ವೃತ್ತಕ್ಕೆ **"ಹನುಮಾನ್ ಚೌಕ"** ಎಂದು ನಾಮಕರಣ ಮಾಡಲು ದಿನಾಂಕ:28-03-2012 ರಂದು ನಡೆದ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ: 39(347)/2011-12ರಲ್ಲಿ ಕೈಗೊಂಡಿರುವ ನಿರ್ಣಯವನ್ನು ರದ್ದುಪಡಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಸಂಬಂಧ ಸರ್ಕಾರವು ದಿನಾಂಕ:17-11-2012ರಂದು ನಗರ ಪಾಲಿಕೆಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಪಾಲಿಕೆಯ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಾಮಕರಣ ಸಂಬಂಧ ದಿನಾಂಕ:28-03-2012 ರಂದು ವಿಷಯದ ಸಂಖ್ಯೆ 39(347)/2011-12ರಲ್ಲಿ ಕೈಗೊಂಡಿರುವ ನಿರ್ಣಯವು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ಸಾರ್ವಜನಿಕ ಸ್ಥಳಕ್ಕೆ ನಾಮಕರಣ ಮಾಡುವುದು) ನಿಯಮಗಳು 2008ರ ನಿಯಮ 7ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಆದುದರಿಂದ, ಸದರಿ ನಿರ್ಣಯವನ್ನು ಏಕೆ ರದ್ದುಪಡಿಸಬಾರದು ಎಂಬ ಬಗ್ಗೆ ಕೆ.ಎಂ.ಸಿ ಕಾಯ್ದೆಯ ಕಲಂ 98(2) ರನ್ವಯ ಈ ನೋಟೀಸ್ ಜಾರಿ ಮಾಡಿದ್ದು ಈ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ ಈ ನೋಟೀಸ್ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ಲಿಖಿತ ಹೇಳಿಕೆಯನ್ನು ಸಂಬಂಧಿಸಿದ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯಿಂದ ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ. ನಿಗಧಿತ ದಿನಾಂಕದೊಳಗಾಗಿ ಲಿಖಿತ ಹೇಳಿಕೆ ಬಾರದಿದ್ದಲ್ಲಿ ನಿಯಮಾನುಸಾರ ಏಕಪಕ್ಷೀಯವಾಗಿ ನಿರ್ಣಯವನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ಸೂಚಿಸಿರುತ್ತಾರೆ.

ಆದುದರಿಂದ, ಸರ್ಕಾರದ ದಿನಾಂಕ: 17-11-2012ರ ಕಾರಣ ಕೇಳುವ ನೋಟಿಸ್‌ನ್ನು ದಾಖಲಾತಿಗಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 11-01-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಪರಿಶೀಲಿಸಲಾಗಿ, ಸ್ಥಳೀಯ ಪ್ರದೇಶದ ಸಾರ್ವಜನಿಕರ ಕೋರಿಕೆಯ ಮೇರೆಗೆ ಸದರಿ ವೃತ್ತಕ್ಕೆ **ಶ್ರೀ ಹನುಮಾನ್ ಚೌಕ** ಎಂದು ನಾಮಕರಣ ಮಾಡಲು ತಿರ್ಮಾನಿಸಿದ್ದು, ಸರ್ಕಾರದ ಅಂತಿಮ ಅದೇಶಕ್ಕೆ ಬದ್ಧರಾಗಿರುವುದಾಗಿ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 22-01-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:22-01-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 22-01-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 20 (426)/2012-13

| 13 | Improvements to drains, footpath and asphalting of main road from Guddadahalli Circle to KHB main road Via Acharya college in Ward no. 22 | 22 | 2.00 |
| 14 | Improvements to drains, footpath and asphalting of road from Babu reddy Layout Storm water drain to Vijayabharathi school in Ward no. 22 | 22 | 1.00 |
| 15 | Improvements to drains, footpath and asphalting of 2rd cross road from Subbaiahnapalya main road to Horamavu main road in Ward no.27 HRBR Layout. | 27 | 1.50 |
| 16 | Improvements to drains, footpath and asphalting of 3rd cross road from Subbaiahnapalya main road to Horamavu main road in Ward no.27 HRBR Layout. | 27 | 1.00 |
| 17 | Improvements to drains, footpath and asphalting (including Strengthening of Road Cut Portion) to shampura Main Road from ward office BBMP to Shampura Bus stop in Ward no.32 Kaval Byrasandra. | 47 | 1.50 |
| 18 | Widening & improvements to main road from 80 feet KPTCL transformer to 6th cross JSS compound in Kodihalli, HAL 3rd stage ward no.88 | 88 | 2.00 |
| 19 | Improvement and asphalting MM road from Tanny road circle to coxtown road circle | 78 | 2.00 |
| 20 | Improvement and asphalting Nethaji road from Bamboo Bazzar circle to Tanny road circle | 78 | 1.50 |
| | **TOTAL** | | 27.00 |

# ಬೊಮ್ಮನಹಳ್ಳಿ ವಲಯ

| Sl No | Name of Work | Ward No. | Estimate Cost (in Crores) |
|---|---|---|---|
| 1 | Improvements to 27th main, H.S.R. Layout (from 17th cross road to Somasundra Palya Road) | 174 | 2.50 |
| 2 | Improvements and asphalting to Hosa Palya main road from Somsundara Palya (Ujala Factory) to Kudlu Main Road | 190 | 1.00 |
| 3 | Improvements and asphalting to Somsundara Palya main road from Ujala factory to Kudlu road | 190 | 1.00 |
| 4 | Improvements and asphalting to Bande palya main road from Hosur main road to Hosa Palya Bus stop | 190 | 1.8 |
| 5 | Asphalting to Devarachikkanahalli Main Road (from Bannerghatta Road to B.D.A. Double Road) | 188 | 1.10 |

| | | | |
|---|---|---|---|
| 6 | Asphalting to Hulimavu Main Road (from Bannerghatta Road to Tayappa Garden Road) | 193 | 1.0 |
| 7 | Asphalting to Arakere Main Road (from Bannerghatta Road to Nyanappanahalli Main Road) | 193 | 1.5 |
| 8 | Improvements to Ittamudu-Arehalli road for the balance work near Arehalli | 184 | 0.35 |
| 9 | Widening and Asphalting to Jamboo Savari Dinne Road (from Jamboo Savari Dinne to Khodays Glass Factory) | 194 | 2.00 |
| 10 | Improvements to Road and Drain from Jamboo Savari Dinne Road to Kembattahalli | 194 | 1.00 |
| 11 | Improvements to Link Road from Harlur road to Kudlu road | 191 | 2.50 |
| 12 | Improvements to Arakere- Hulimavu road (from Arakere towards Hulimavu via Paramount Apartment) | 193 | 1.3 |
| 13 | Improvements to Road towards Devarachikkanahalli (from Vijaya Enclave, Kodichikkenhalli BWSSB) | 188 | 1.00 |
| | | ಒಟ್ಟು | 18.00 |

ಸಾರ್ವಜನಿಕರ ಹಿತದೃಷ್ಟಿಯಿಂದ ಮೇಲ್ಕಂಡ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳುವುದು ಅತ್ಯಾವಶ್ಯಕವಾಗಿರುವುದರಿಂದ, 2012-13ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ-ಪಿ2902(ಪುಟ-172) ಅಡಿಯಲ್ಲಿ ಆರ್ಟಿರಿಯಲ್/ ಸಬ್ ಆರ್ಟಿರಿಯಲ್ ರಸ್ತೆಗಳನ್ನು 8 ವಲಯಗಳಲ್ಲಿ ರಸ್ತೆ ಮೂಲ ಭೂತ ಸೌಕರ್ಯ ಯೋಜನಾ ವಲಯದಿಂದ ಅಭಿವೃದ್ಧಿಗೊಳಿಸಲು ಮೀಸಲಿಟ್ಟಿರುವ ರೂ.3000.00 ಲಕ್ಷಗಳ (ಅಂದಾಜು ವೆಚ್ಚ ರೂ.300.00 ಕೋಟಿಗಳು) ಅನುದಾನದಲ್ಲಿ ಮತ್ತು ಲೆಕ್ಕ ಶೀರ್ಷಿಕೆ-ಪಿ2019 (ಪುಟ-174) ಮುಖ್ಯ ರಸ್ತೆಗಳ ವಿಭಾಗಕ್ಕೆ ಮೀಸಲಿಟ್ಟಿರುವ ರೂ.2500.00 ಲಕ್ಷಗಳ ಅನುದಾನದಲ್ಲಿ ಆದ್ಯತೆ ಮೇಲೆ, ಮೇಲಿನಂತೆ ವಲಯವಾರು ಸೂಚಿಸಿರುವ ಕಾಮಗಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಿ ಸದರಿ ಕಾಮಗಾರಿಗಳಿಗೆ, ಕಾಮಗಾರಿ ಸಂಖ್ಯೆಗಳನ್ನು ನೀಡಿ ಸದರಿ ಕಾಮಗಾರಿಗಳಿಗೆ ಟೆಂಡರ್ ಕರೆದು ಕಾರ್ಯಗತಗೊಳಿಸುವ ಹಿನ್ನಲೆಯಲ್ಲಿ ತೀರ್ಮಾನ ಕೈಗೊಳ್ಳುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 28-11-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 31 (410)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕ ವಿಷಯದ ಸಂಖ್ಯೆ:195/2010-11 ರಲ್ಲಿ ಓ.ಎಫ್.ಸಿ. ಕೇಬಲ್ ಅಳವಡಿಕೆಗೆ ಪ್ರತಿ ಮೀಟರ್‌ಗೆ ಕೇಬಲ್ ಅಳವಡಿಸಲು ಆರಂಭಿಕ ವೆಚ್ಚ ರೂ.135/- ರಿಂದ ಪ್ರತಿ ಮೀಟರ್‌ಗೆ ರೂ.300/- ಗೆ ಹೆಚ್ಚಿಸಿ ದರವನ್ನು ನಿಗಧಿಪಡಿಸಲಾಗಿರುತ್ತದೆ.

ದಿನಾಂಕ:11-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ವಿಷಯದ ಸಂಖ್ಯೆ:152/2012-13 ರಲ್ಲಿ ಕೆಳಕಂಡಂತೆ ನಿರ್ಣಯ ಮಾಡಲಾಗಿರುತ್ತದೆ.

> ***"ಓ.ಎಫ್.ಸಿ. ಕೇಬಲ್‌ಗೆ ಸಂಬಂಧಿಸಿದಂತೆ, ತೆರಿಗೆಯೇತರ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಗೆದ ರಸ್ತೆಯನ್ನು ದುರಸ್ಥಿ ಪಡಿಸಲು ಈಗಿನ ಪ್ರತಿ ಮೀಟರ್‌ಗೆ ರೂ.300.00 ರಿಂದ ರೂ.600.00 ಕ್ಕೆ ಹೆಚ್ಚಿಸಲಾಗುವುದು".***

ಹಾಲಿ ರಸ್ತೆ ದುರಸ್ಥಿ ಕೆಲಸವನ್ನು ಸಂಬಂಧಪಟ್ಟ ಏಜೆನ್ಸಿಗಳು ಅವರದೇ ವೆಚ್ಚದಲ್ಲಿ ನಿರ್ವಹಿಸುತ್ತಿದ್ದು, ಪ್ರತಿ ಮೀಟರ್‌ಗೆ ವಿಧಿಸುತ್ತಿರುವ ದರವು ಶುಲ್ಕದ ಭಾಗವಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ದಿನಾಂಕ:11-07-2012 ರಂದು ನಡೆದ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ:152/2012-13 ರಲ್ಲಿ ಓ.ಎಫ್.ಸಿ.ಗೆ ಸಂಬಂಧಿಸಿದಂತೆ ತೆರಿಗೆಯೇತರ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೇಬಲ್ ಅಳವಡಿಕೆಗೆ ಅಗೆದ ರಸ್ತೆಯನ್ನು ದುರಸ್ಥಿ ಪಡಿಸಲು ಪ್ರತಿ ಮೀಟರ್‌ಗೆ ರೂ.300/- ರಿಂದ ರೂ.600/- ಗೆ ಹೆಚ್ಚಿಸಲಾಗಿರುತ್ತದೆ. ಇದನ್ನು ತಿದ್ದುಪಡಿ ಮಾಡಿ "ಅಗೆದ ರಸ್ತೆ ದುರಸ್ಥಿ ಪಡಿಸಲು" ಎಂಬುದರ ಬದಲಾಗಿ "ಕೇಬಲ್ ಅಳವಡಿಸಲು ಆರಂಭಿಕ ಶುಲ್ಕ" ಎಂದು ತಿದ್ದುಪಡಿ ಮಾಡುವ ಬಗ್ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 22-02-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:22-02-2013ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:22-02-2013ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 32 (435)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಡಿವಾಳ ಸುತ್ತಲಿನ ಪ್ರದೇಶದಲ್ಲಿ **DULT** ರವರ ಸಹಯೋಗದೊಂದಿಗೆ ಬೈಸಿಕಲ್ ಟ್ರಾಕ್ ನಿರ್ಮಾಣ ಮಾಡಲು ಉದ್ದೇಶಿಸಲಾಗಿದ್ದು, ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, (ಟಿ.ಇ.ಸಿ ವಿಭಾಗ) ರವರು ರೂ.390.00 ಲಕ್ಷಗಳ ಮೊತ್ತಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಈ ಕಾಮಗಾರಿಯನ್ನು ಒಳಗೊಂಡಂತೆ ಒಟ್ಟು ಕಾಮಗಾರಿಗಳ ಮೊತ್ತ ರೂ.755.00 ಲಕ್ಷಗಳ ಪೈಕಿ **DULT** ರವರು ರೂ.350.00 ಲಕ್ಷಗಳನ್ನು ಭರಿಸುವುದಾಗಿ ಒಪ್ಪಿಗೆ ಪತ್ರ ನೀಡಿದ್ದು, ಸದರಿ ಕಾಮಗಾರಿಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯು ಅನುಮೋದನೆ ನೀಡಿರುತ್ತದೆ.

ಈ ಮೇರೆಗೆ ಕಾರ್ಯಪಾಲಕ ಅಭಿಯಂತರರು, ಟಿ.ಇ.ಸಿ. ವಿಭಾಗದವರು **e-Procurement** ದ್ವಿ-ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ್ದು, ಇವರುಗಳ ಆರ್ಥಿಕ ಬಿಡ್ ತೆರೆಯಲಾಗಿ ಶ್ರೀ. ಜೆ.ಸಿ.ಪ್ರಕಾಶ್ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ವಿವರಗಳು ಕೆಳಕಂಡಂತಿರುತ್ತದೆ.

| ಕ್ರ. ಸಂ. | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ) | ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂ. ಗಳಲ್ಲಿ) | 2011-12ನೇ ಸಾಲಿನ ದರಗಳಿಗೆ ಹೋಲಿಸಿದಾಗ | 2012-13ನೇ ಸಾಲಿನ ಪರಿಷ್ಕೃತ ದರಪಟ್ಟಿಗೆ ಹೋಲಿಸಿದಾಗ | ಷರಾ |
|---|---|---|---|---|---|---|
| 1 | ಶ್ರೀ. ಜೆ.ಸಿ.ಪ್ರಕಾಶ್ | 3,56,62,489.71 | 4,04,50,857.12 | 13.71% ಹೆಚ್ಚುವರಿ | 3.25% ಹೆಚ್ಚುವರಿ | L1 |
| 2 | ಮೆ॥ ಆರ್.ಎನ್.ಎಸ್. ಇನ್‌ಫ್ರಾಸ್ಟ್ರಕ್ಚರ್ ಪ್ರೈ. ಲಿಮಿಟೆಡ್ | | 4,45,48,562.05 | 24.92% ಹೆಚ್ಚುವರಿ | 13.43% ಹೆಚ್ಚುವರಿ | L2 |

ಸದರಿ ಟೆಂಡರ್‌ನಲ್ಲಿ ಕನಿಷ್ಠ ದರ ನಮೂದಿಸಿರುವ **(L-1)** ಗುತ್ತಿಗೆದಾರಾದ ಶ್ರೀ. ಜೆ.ಸಿ.ಪ್ರಕಾಶ್ ರವರ ಟೆಂಡರ್‌ನ್ನು 2011-12ನೇ ಸಾಲಿನ ಬೆಂಗಳೂರು ವೃತ್ತದ ಲೋಕೋಪಯೋಗಿ ದರಗಳಿಗೆ ಹೋಲಿಸಿದಾಗ ಟೆಂಡರ್ ದರವು 13.71% ಹೆಚ್ಚುವರಿ ಇದ್ದು, 2012-13ನೇ ಸಾಲಿನ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಟೆಂಡರ್ ದರವು 3.25% ಹೆಚ್ಚುವರಿ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಕಾಮಗಾರಿಗೆ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾದ ಶ್ರೀ. ಜೆ.ಸಿ.ಪ್ರಕಾಶ್ ರವರ ಟೆಂಡರ್ ಮೊತ್ತ ರೂ.4,04,50,857/- ಗಳ ಟೆಂಡರ್ ಬಗ್ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 17-02-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:27-02-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:27-02-2013ರ ನಿರ್ಣಯವನ್ನು ಒಪ್ಪುವುದು".

........................2

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 27-02-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 33 (436)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಡಿವಾಳ ಸುತ್ತಲಿನ ಪ್ರದೇಶದಲ್ಲಿ DULT ರವರ ಸಹಯೋಗದೊಂದಿಗೆ ಬೈಸಿಕಲ್ ಟ್ರಾಕ್ ನಿರ್ಮಾಣ ಮಾಡಲು ಉದ್ದೇಶಿಸಲಾಗಿದ್ದು, ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, (ಟಿ.ಇ.ಸಿ ವಿಭಾಗ) ರವರು ರೂ.365.00 ಲಕ್ಷಗಳ ಮೊತ್ತಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಈ ಕಾಮಗಾರಿಯನ್ನು ಒಳಗೊಂಡಂತೆ ಒಟ್ಟು ಕಾಮಗಾರಿಗಳ ಮೊತ್ತ ರೂ.755.00 ಲಕ್ಷಗಳ ಪೈಕಿ DULT ರವರು ರೂ.350.00 ಲಕ್ಷಗಳನ್ನು ಭರಿಸುವುದಾಗಿ ಒಪ್ಪಿಗೆ ಪತ್ರ ನೀಡಿದ್ದು, ಸದರಿ ಕಾಮಗಾರಿಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯು ಅನುಮೋದನೆ ನೀಡಿರುತ್ತದೆ.

ಈ ಮೇರೆಗೆ ಕಾರ್ಯಪಾಲಕ ಅಭಿಯಂತರರು, ಟಿ.ಇ.ಸಿ. ವಿಭಾಗದವರು e-Procurement ದ್ವಿ-ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ್ದು, ಇವರುಗಳ ಆರ್ಥಿಕ ಬಿಡ್ ತೆರೆಯಲಾಗಿ ಶ್ರೀ. ಜೆ.ಸಿ.ಪ್ರಕಾಶ್ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ವಿವರಗಳು ಕೆಳಕಂಡಂತಿರುತ್ತದೆ.

| ಕ್ರ. ಸಂ. | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ) | ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂ. ಗಳಲ್ಲಿ) | 2011-12ನೇ ಸಾಲಿನ ದರಗಳಿಗೆ ಹೋಲಿಸಿದಾಗ | 2012-13ನೇ ಸಾಲಿನ ಪರಿಷ್ಕೃತ ದರಪಟ್ಟಿಗೆ ಹೋಲಿಸಿದಾಗ | ಷರಾ |
|---|---|---|---|---|---|---|
| 1 | ಶ್ರೀ. ಜೆ.ಸಿ.ಪ್ರಕಾಶ್ | 3,02,13,141.06 | 3,48,78,242.00 | 15.44% ಹೆಚ್ಚುವರಿ | 6.74% ಹೆಚ್ಚುವರಿ | L1 |
| 2 | ಮೆ॥ ಆರ್.ಎನ್.ಎಸ್. ಇನ್‌ಫ್ರಾಸ್ಟಕ್ಚರ್ ಪ್ರೈ. ಲಿಮಿಟೆಡ್ | | 3,77,37,369.10 | 24.97% ಹೆಚ್ಚುವರಿ | 15.55% ಹೆಚ್ಚುವರಿ | L2 |

ಸದರಿ ಟೆಂಡರ್‌ನಲ್ಲಿ ಕನಿಷ್ಠ ದರ ನಮೂದಿಸಿರುವ (L-1) ಗುತ್ತಿಗೆದಾರರಾದ ಶ್ರೀ. ಜೆ.ಸಿ.ಪ್ರಕಾಶ್ ರವರ ಟೆಂಡರ್‌ನ್ನು 2011-12ನೇ ಸಾಲಿನ ಬೆಂಗಳೂರು ವೃತ್ತದ ಲೋಕೋಪಯೋಗಿ ದರಗಳಿಗೆ ಹೋಲಿಸಿದಾಗ ಟೆಂಡರ್ ದರವು 15.44% ಹೆಚ್ಚುವರಿ ಇದ್ದು, 2012-13ನೇ ಸಾಲಿನ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಟೆಂಡರ್ ದರವು 6.74% ಹೆಚ್ಚುವರಿ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಕಾಮಗಾರಿಗೆ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾದ ಶ್ರೀ. ಜೆ.ಸಿ.ಪ್ರಕಾಶ್ ರವರ ಟೆಂಡರ್ ಮೊತ್ತ ರೂ.3,48,78,242/- ಗಳ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 17-02-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:27-02-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:27-02-2013ರ ನಿರ್ಣಯವನ್ನು ಒಪ್ಪುವುದು".

.........................2

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 27-02-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 34 (437)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಯಲಹಂಕ ವಲಯದ ಯಲಹಂಕ ಕೆರೆಯ ಅಭಿವೃದ್ಧಿ ಕಾಮಗಾರಿಯನ್ನು ಮುಖ್ಯ ಅಭಿಯಂತರರು (ಕೆರೆಗಳು)ರವರ ಕಛೇರಿಯ ವತಿಯಿಂದ ಕೈಗೆತ್ತಿಕೊಂಡು ನಿರ್ವಹಿಸಲಾಗುತ್ತಿದೆ. ಸದರಿ ಕೆರೆಯ ಅಭಿವೃದ್ಧಿಪಡಿಸುವ ಸಲುವಾಗಿ ಮೆ॥ ಸ್ಟೆಮ್ ಕನ್ಸಲ್ಟೆಂಟ್ಸ್‌ರವರು ವಿವರವಾಗಿ ತಯಾರಿಸಿದ ಯೋಜನಾ ವರದಿಯ (DPR) ಅನುಸಾರವಾಗಿ ಹಂತ-1 ಅಭಿವೃದ್ಧಿ ಕಾಮಗಾರಿಯನ್ನು ರೂ.59.99 ಲಕ್ಷಗಳು ಹಾಗೂ ಹಂತ-2ರ ಅಭಿವೃದ್ಧಿ ಕಾಮಗಾರಿಯನ್ನು ರೂ.1615.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೆತ್ತಿಕೊಂಡು ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದ್ದು, ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ.

ಮುಂದುವರೆದಂತೆ, ಉಳಿಕೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಈಗಾಗಲೇ ತಯಾರಿಸಲಾಗಿರುವ ವಿವರವಾದ ಯೋಜನಾ ವರದಿಯ ಅನುಸಾರವಾಗಿ ಯಲಹಂಕ ಕೆರೆಯ ಹಂತ-3ರ ಅಭಿವೃದ್ಧಿ ಕಾಮಗಾರಿಯ ರೂ.495.00 ಲಕ್ಷಗಳ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯ 2012-13ನೇ ಸಾಲಿನ ದರಪಟ್ಟಿಯ ಹಾಗೂ ಸಣ್ಣ ನೀರಾವರಿ ಇಲಾಖೆಯ 2010-11ನೇ ಸಾಲಿನ ದರಪಟ್ಟಿಯ ಅನ್ವಯ ತಯಾರಿಸಿ ಅನುಮೋದನೆಗಾಗಿ ಸಲ್ಲಿಸಿದ್ದು, ಸದರಿ ಕಾಮಗಾರಿಯ ಅಡಿಯಲ್ಲಿ ಈ ಕೆಳಗಿನ ಕಾಮಗಾರಿಗಳನ್ನು ಕೈಗೊಳ್ಳುವ ಪ್ರಸ್ತಾವನೆಯಿರುತ್ತದೆ.

1. ವಾಕ್‌ವೇ ಅಭಿವೃದ್ಧಿ
2. ಒಳಹರಿವು ಕಾಲುವೆ
3. ಹೊರಹರಿವು ಕಾಲುವೆಗಳ ಅಭಿವೃದ್ಧಿ
4. ಕಾವಲುಗಾರರ ಕೊಠಡಿ
5. ಮಕ್ಕಳ ಆಟದ ಮೈದಾನ
6. ಸಿಲ್ಟ್ ಟ್ರಾಪ್
7. ಕ್ಯಾಚ್ ಡ್ರೈನ್ ನಿರ್ಮಾಣ ಮತ್ತಿತರೆ ಕಾಮಗಾರಿಗಳು

ಪಾಲಿಕೆಯ 2012-13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ-2099 ರ ಅಡಿಯಲ್ಲಿ ಯಲಹಂಕ ಕೆರೆಯ ಅಭಿವೃದ್ಧಿಗಾಗಿ ರೂ.200.00 ಲಕ್ಷಗಳ ಸಾಂಕೇತಿಕ ಅನುದಾನವು ಲಭ್ಯವಿದ್ದು, ಪ್ರಸಕ್ತ ಸಾಲಿನಲ್ಲಿ ಸದರಿ ಅನುದಾನಕ್ಕೆ ಮಾತ್ರ ವೆಚ್ಚ ಭರಿಸಲಾಗುವುದು. ಇನ್ನುಳಿದ ರೂ.295.00 ಲಕ್ಷಗಳ ಮೊತ್ತವನ್ನು ಪಾಲಿಕೆಯ 2013-14ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲಾಗುವುದು.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಯಲಹಂಕ ಕೆರೆಯ ಹಂತ-3ರ ಸಮಗ್ರ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ರೂ.495.00 ಲಕ್ಷಗಳ ಅಂದಾಜು ಪಟ್ಟಿಗೆ ಈಗಾಗಲೇ ತೋಟಗಾರಿಕೆ ಸ್ಥಾಯಿ ಸಮಿತಿಯಿಂದ ಅನುಮೋದನೆ ಪಡೆಯಲಾಗಿದ್ದು, ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಕರೆಯಲು ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:03-03-2013ರ ಟಿಪ್ಪಣಿ

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:03-03-2013ರ ಟಿಪ್ಪಣಿಯನ್ನು ಒಪ್ಪುವುದು".

.......................2

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>**ನಿರ್ಣಯ:**</u> "ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:03-03-2013ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 01 (443)/2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಮಂಜೂರಾದ 4,000 ಪೌರಕಾರ್ಮಿಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡಿಕೊಳ್ಳಲು ಈ ಕೆಳಕಂಡ ಷರತ್ತಿನನ್ವಯ ಸರ್ಕಾರವು ದಿನಾಂಕ:13.01.2010ರಂದು ಅನುಮೋದನೆ ನೀಡಿರುತ್ತದೆ.

ಷರತ್ತುಗಳು:

1. ಹುದ್ದೆಗಳ ನೇಮಕಾತಿಯಿಂದ ತಗಲುವ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಪನ್ಮೂಲದಿಂದಲೇ ಭರಿಸತಕ್ಕದ್ದು.
2. ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವಾಗ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ವಿಧಿವಿಧಾನಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಸಂಬಂಧ ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆರವರಿಗೆ ವಿದ್ಯಾರ್ಹತೆಯನ್ನು (5ನೇ ತರಗತಿ ಉತ್ತೀರ್ಣ ಅಥವಾ 7ನೇ ತರಗತಿ ಅನುತ್ತೀರ್ಣ) ನಿಗಧಿಪಡಿಸುವಂತೆ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ತಿದ್ದುಪಡಿ ತರುವ ಬಗ್ಗೆ ದಿನಾಂಕ:05.09.2012ರಂದು ಪತ್ರವನ್ನು ಬರೆಯಲಾಗಿರುತ್ತದೆ.

ಈ ಬಗ್ಗೆ ದಿನಾಂಕ:26-12-2012ರ ಸರ್ಕಾರದ ಪತ್ರದಲ್ಲಿ ಪೌರಕಾರ್ಮಿಕರ ಸಂಘದ ಕೋರಿಕೆಯನ್ನು ಪರಿಗಣಿಸುವ ಕುರಿತಾದ ಅಗತ್ಯತೆಯನ್ನು ಪರಿಶೀಲಿಸಿ, ಜರೂರಾಗಿ ದಿನಾಂಕ:10-09-2012 ರಂದು ತಿಳಿಸಿರುವಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತರಬೇಕಾಗಿರುವ ತಿದ್ದುಪಡಿಯ ಕರಡನ್ನು ಜರೂರಾಗಿ ಕಳುಹಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ ಎಂದು ತಿಳಿಸಿರುತ್ತಾರೆ. ಇದರಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ಈ ಕೆಳಕಂಡಂತೆ ತಿದ್ದುಪಡಿ ಮಾಡಲು ಅನುಮೋದನೆ ಕೋರಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:01.02.2013ರ ಟಿಪ್ಪಣಿ.

| ಹುದ್ದೆಯ ಹೆಸರು | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ | ನೇಮಕಾತಿ ಪ್ರಾಧಿಕಾರದ ಅಧಿಕಾರಿ |
|---|---|---|---|
| ಸ್ಪೆಷಲ್ ಗ್ಯಾಂಗ್‌ಮೆನ್<br>ಎಂ.ಸಿ. ಗ್ಯಾಂಗ್‌ಮೆನ್<br>ಎ.ಎಲ್.ಓ. ಗ್ಯಾಂಗ್‌ಮೆನ್<br>ಸೈನೋಸೀಸ್ ಗ್ಯಾಂಗ್‌ಮೆನ್<br>ಡಿಸ್‌ಇನ್‌ಫೆಕ್ಟೆಂಟ್ ಗ್ಯಾಂಗ್‌ಮೆನ್<br>ಸ್ವೀಪರ್ಸ್ (ಪೌರಕಾರ್ಮಿಕರು) | ನೇರ ನೇಮಕಾತಿ | 5ನೇ ತರಗತಿ ಉತ್ತೀರ್ಣ ಅಥವಾ 7ನೇ ತರಗತಿ ಅನುತ್ತೀರ್ಣ.<br>ಕನ್ನಡ ಭಾಷೆ ಪರಿಜ್ಞಾನವಿರಬೇಕು. | ಆಯುಕ್ತರು (ಕಾರ್ಪೊರೇಷನ್ ಕಾಯ್ದೆ 89ರಡಿಯಲ್ಲಿ) |

ಹಾಗೂ ಪ್ರಸ್ತಾವನೆ ಕುರಿತು ಈ ಕೆಳಕಂಡಂತೆ ನಿರ್ಣಯ ಕೈಗೊಂಡಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:25-02-2013ರ ನಿರ್ಣಯ.

.......................2

(1) ಪೌರಕಾರ್ಮಿಕರ ವೃಂದದ ಹುದ್ದೆಗಳಿಗೆ ನೇರ ನೇಮಕಾತಿ ಕುರಿತಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ಅಗತ್ಯ ವಿದ್ಯಾರ್ಹತೆ ನಿಗಧಿಪಡಿಸುವ ಕುರಿತಂತೆ ಕಾನೂನು ಕೋಶದ ಮುಖ್ಯಸ್ಥರ ದಿನಾಂಕ:13-02-2013ರ ಅಭಿಪ್ರಾಯವನ್ನು ಪರಿಗಣಿಸಿ, ಈ ಸಂಬಂಧ ದಿನಾಂಕ:01-02-2013ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

(2) 4000 ಮಂದಿ ಪೌರಕಾರ್ಮಿಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳುವ ಕುರಿತಂತೆ ನೇಮಕಾತಿ ಸಮಿತಿಯ ರಚನೆ ಬಗ್ಗೆ ಸರ್ಕಾರದ ಹಂತದಲ್ಲಿ ಕೂಡಲೇ ವ್ಯವಹರಿಸಿ ಸೂಕ್ತ ಆದೇಶವನ್ನು ಪಡೆಯಲು ಆಯುಕ್ತರನ್ನು ಕೋರಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿದೆ.

ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 11-03-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-03-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-03-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 02 (444)/2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಸೆಕ್ಷನ್ 166, 167, 168 ಮತ್ತು 169ರ ಅನುಸಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2012-13ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2013-14ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಕೌನ್ಸಿಲ್ ಸಭೆ ಮತ್ತು ಘನ ಸರ್ಕಾರದ ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆ. ಕರಡು ಆಯವ್ಯಯದ ಅಂದಾಜುಗಳ ಅನುಮೋದನೆಗಾಗಿ ಮುಖ್ಯ ಲೆಕ್ಕಾಧಿಕಾರಿಯವರ ಕಛೇರಿ ಪತ್ರ ಸಂಖ್ಯೆ:ಮುಲೆಅ/ಪಿಆರ್/14493/12-13, ದಿನಾಂಕ:06-03-2013 ರಂತೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ದಿನಾಂಕ:06-03-2013 ರಂದು ಮಂಡಿಸಲಾಗಿರುತ್ತದೆ ಹಾಗೂ ದಿನಾಂಕ:01-04-2013 ರಿಂದ 2013-14ನೇ ಸಾಲಿನ ಆಯವ್ಯಯದಡಿಯಲ್ಲಿ ಪಾಲಿಕೆಯ ಎಲ್ಲಾ ವೆಚ್ಚಗಳನ್ನು ಭರಿಸಬೇಕಾಗಿರುತ್ತದೆ.

2013-14ನೇ ಸಾಲಿನ ಆಯವ್ಯಯದ ಅನುಮೋದನೆ ನಿರೀಕ್ಷಿಸಿ, ಕರ್ನಾಟಕ ಬಜೆಟ್ ಕೈಪಿಡಿ ಕಂಡಿಕೆ ಸಂಖ್ಯೆ:81 ಮತ್ತು 205 ರಂತೆ ಲೇಖಾನುದಾನ ಪಡೆಯಲು ಅವಕಾಶವಿರುತ್ತದೆ.

2012-13ನೇ ಸಾಲಿನ ಆರ್ಥಿಕ ವರ್ಷ ಅಂತಿಮ ಘಟ್ಟದಲ್ಲಿದ್ದು, ಏಪ್ರಿಲ್ 2013 ರಿಂದ ಜೂನ್ 2013 ರವರೆಗೆ ಮುಂದಿನ ಮೂರು ತಿಂಗಳುಗಳಿಗೆ ಅಥವಾ ಆಯವ್ಯಯ ಅನುಮೋದನೆಗೊಳ್ಳುವವರೆಗೆ, 2013-14ನೇ ಸಾಲಿನ ಅಯವ್ಯಯಕ್ಕೆ ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ಅನುಮೋದನೆ ನಿರೀಕ್ಷಿಸಿ ಆಯವ್ಯಯದ ಶೇ.30 ರಷ್ಟು ಅನುದಾನವನ್ನು ಆಡಳಿತಾತ್ಮಕ ಮತ್ತು ಅವಶ್ಯಕ ವೆಚ್ಚಗಳಾದ ವೇತನ ಪಾವತಿ, ಪಿಂಚಣಿ ಪಾವತಿ, ಕಛೇರಿ ಸಾದಿಲ್ವಾರು ವೆಚ್ಚ, ಶಾಸನಬದ್ಧ ಕಟಾವಣೆಗಳ ಪಾವತಿ, ನಿರ್ವಹಣಾ ವೆಚ್ಚಗಳಾದ ದೂರವಾಣಿ, ಇಂಧನ, ವಿದ್ಯುತ್, ನೀರು, ಭದ್ರತಾ ಹಾಗೂ ಇತರೆ ಅಗತ್ಯ ವೆಚ್ಚಗಳು, ಕಸ ವಿಲೇವಾರಿಯ ಘನತ್ಯಾಜ್ಯ ನಿರ್ವಹಣೆ ಮತ್ತು ಅತೀ ಅವಶ್ಯಕ ಕಾಮಗಾರಿ ಬಿಲ್ಲುಗಳ ಪಾವತಿ (ಯೋಜನಾ ಕಾಮಗಾರಿ ಬಿಲ್ಲುಗಳು ಹಾಗೂ ಶೇ.22.75ರ ಅನುದಾನದಲ್ಲಿ ನಿರ್ವಹಿಸುತ್ತಿರುವ ಕಾಮಗಾರಿ ಬಿಲ್ಲುಗಳು ಸೇರಿದಂತೆ) ವೆಚ್ಚವನ್ನು ಭರಿಸುವ ಬಗ್ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:14-03-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:14-03-2013ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:14-03-2013ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16–03–2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 03 (445) / 2012–13

ಟಿಪ್ಪಣಿಯಲ್ಲಿ ವಿವರಿಸುವಂತೆ, ಕರ್ನಾಟಕ ರತ್ನ ಡಾ|| ರಾಜ್‌ಕುಮಾರ್ ರವರ ಕಂಚಿನ ಪುತ್ಥಳಿಯನ್ನು ನಗರದ ಪುರಭವನದ ಮುಂದೆ ಪ್ರತಿಷ್ಠಾಪಿಸಲು 2006–07ರಲ್ಲಿ ತೀರ್ಮಾನ ಕೈಗೊಳ್ಳಲಾಗಿತ್ತು. ಆದರೆ, ಪುರಭವನದ ಮುಂದೆ ಯಾವುದೇ ಪ್ರತಿಮೆಯನ್ನು ಪ್ರತಿಷ್ಠಾಪಿಸಲು ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ, ಸದರಿ ಪುತ್ಥಳಿಯನ್ನು ವಾಡ್ ಸಂಖ್ಯೆ:167 ಸೌತ್ ಎಂಡ್ ವೃತ್ತದ ಬಳಿ ಇರುವ ಪೋಲೀಸ್ ಉಪ ಆಯುಕ್ತರ ಕಛೇರಿಯ ಪಕ್ಕದ ಉದ್ಯಾನವನದಲ್ಲಿ ಪ್ರತಿಷ್ಠಾಪಿಸಲು ಅನುಮತಿ ಕೋರಿ ಸ್ಥಳೀಯ ಪಾಲಿಕೆ ಸದಸ್ಯರು ಪತ್ರವನ್ನು ನೀಡಿರುತ್ತಾರೆ.

ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ. ಎನ್.ಆರ್.ರಮೇಶ್ ರವರು ಕೋರಿರುವಂತೆ ವಾರ್ಡ್ ಸಂಖ್ಯೆ:167 ಸೌತ್ ಎಂಡ್ ವೃತ್ತದ ಬಳಿ ಇರುವ ಪೋಲೀಸ್ ಉಪ ಆಯುಕ್ತರ ಕಛೇರಿಯ ಪಕ್ಕದ ಉದ್ಯಾನವನದಲ್ಲಿ ಡಾ|| ರಾಜ್‌ಕುಮಾರ್ ರವರ ಕಂಚಿನ ಪುತ್ಥಳಿಯನ್ನು ಪ್ರತಿಷ್ಠಾಪಿಸುವ ಬಗ್ಗೆ ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27–02–2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11–03–2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11–03–2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 11–03–2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 04 (446)/2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ಜಯನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ:168ರ ವ್ಯಾಪ್ತಿಯಲ್ಲಿ ಜಯನಗರ 4ನೇ ಟಿ ಬ್ಲಾಕ್, 12ನೇ ಮುಖ್ಯರಸ್ತೆಯಲ್ಲಿ ಪಾಲಿಕೆ ವತಿಯಿಂದ ನಿರ್ಮಾಣಗೊಂಡು ಮುಕ್ತಾಯದ ಹಂತದಲ್ಲಿರುವ E-Library ಕಟ್ಟಡದಲ್ಲಿ (1) "ನೆಲ ಮಹಡಿಯಲ್ಲಿ ಸುಮಾರು 420 ಚ.ಮೀ. ವಿಸ್ತೀರ್ಣ ಹೊಂದಿದ್ದು, ಇದರಲ್ಲಿ ಭಾಗಶಃ ವಾಹನ ನಿಲುಗಡೆ, ವಿಚಾರಣೆ ಕೊಠಡಿ, ಕಛೇರಿ ಕೊಠಡಿಗಳಿಗೆ ಅವಕಾಶ ಕಲ್ಪಿಸಲಾಗಿದೆ. (2) ಒಂದನೇ ಮಹಡಿಯ ಸುಮಾರು 420 ಚ.ಮೀ. ವಿಸ್ತೀರ್ಣ ಹೊಂದಿದ್ದು, E-Library ಚಟುವಟಿಕೆಗೆ ಸ್ಥಳಾವಕಾಶ ಕಲ್ಪಿಸಲಾಗಿದೆ ಮತ್ತು (3) ಎರಡನೇ ಮಹಡಿಯಲ್ಲಿ ಸುಮಾರು 420 ಚ.ಮೀ. ವಿಸ್ತೀರ್ಣ ಹೊಂದಿದ್ದು, ಬಡ ಮತ್ತು ಮಧ್ಯಮ ವರ್ಗದವರ ಮಕ್ಕಳ ಅನುಕೂಲಕ್ಕಾಗಿ ತರಬೇತಿ, ಕೌಶಲ್ಯ ತರಬೇತಿ ಮತ್ತು ಇತರೆ ಉಚಿತ ಶೈಕ್ಷಣಿಕ ಚಟುವಟಿಕೆ ನಡೆಸಲು ಸ್ಥಳಾವಕಾಶ ಕಲ್ಪಿಸಲಾಗಿದೆ.

ಅದರಂತೆ ಜಯನಗರ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರ ಪತ್ರದಲ್ಲಿ E-Library ಕಟ್ಟಡದ ಮೊದಲನೇ ಅಂತಸ್ತನ್ನು ಉಚಿತ ವಾಚನಾಲಯ, ದಿನಪತ್ರಿಕೆ ಹಾಗೂ ನಿಯತಕಾಲಿಕೆಗಳ ವಿಭಾಗ, ಮಕ್ಕಳ ವಿಭಾಗ, ಎರವಲು ವಿಭಾಗ E-Library ಹಾಗೂ ಅಂತರ್‌ಜಾಲ ವಿಭಾಗಗಳನ್ನು ಪ್ರಾರಂಭಿಸಲು ಗ್ರಂಥಾಲಯ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ಹಸ್ತಾಂತರಿಸಲು ಹಾಗೂ ಉಳಿದಂತೆ ಶೈಕ್ಷಣಿಕವಾಗಿ ವಿಧ್ಯಾಭ್ಯಾಸ ಮಾಡುವ ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಅನುಕೂಲವಾಗುವ ಕೌಶಲ್ಯ ತರಬೇತಿ ತರಗತಿಗಳನ್ನು ಕೌನ್ಸಿಲಿಂಗ್ ಕೇಂದ್ರ ಹಾಗೂ ಶೈಕ್ಷಣಿಕ ಸಮಿತಿಗೆ ವಹಿಸಿಕೊಡುವಂತೆ ಕೋರಿ ಮಾನ್ಯ ಆಯುಕ್ತರವರಿಗೆ ಪತ್ರವನ್ನು ನೀಡಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳಂತೆ ಜಯನಗರ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರ ಪತ್ರದಲ್ಲಿ ಮಾನ್ಯ ಆಯುಕ್ತರವರ "ಒಪ್ಪಬಹುದು" ಎಂಬ ಒಕ್ಕಣಿಯನ್ನು ನೀಡಿದ್ದು, ಅದರಂತೆ ಈ ಕೆಳಕಂಡ ಅಂಶಗಳ ಬಗ್ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:14-03-2013ರ ಟಿಪ್ಪಣಿ.

1. ಪ್ರಸ್ತಾಪಿತ ಕಟ್ಟಡದ ಮೊದಲನೇ ಅಂತಸ್ತನ್ನು, ಪುಸ್ತಕ ಎರವಲು ಸೇವೆ, ಪರಾಮರ್ಶನ ಸೇವೆ, ದಿನಪತ್ರಿಕೆ ಮತ್ತು ನಿಯತಕಾಲಿಕ ವಿಭಾಗ, ಮಕ್ಕಳ ವಿಭಾಗ, ಇ-ಗ್ರಂಥಾಲಯ ಪ್ರಾರಂಭಿಸಿ, ಗ್ರಂಥಾಲಯಕ್ಕೆ ಬೇಕಾಗುವ ಪುಸ್ತಕ, ಪೀಠೋಪಕರಣ, ನಿಯತಕಾಲಿಕ, ದಿನಪತ್ರಿಕೆ, ಸಿಬ್ಬಂದಿ ಹಾಗೂ ಇತರೆ ವೆಚ್ಚಗಳಾದ ಲ್ಯಾನ್ ವರ್ಕ್, ಎಲೆಕ್ಟ್ರಿಕಲ್ ವರ್ಕ್, ಯು.ಪಿ.ಎಸ್., ಸ್ಕ್ಯಾನರ್, ಪ್ರಿಂಟರ್, ಜೆರಾಕ್ಸ್ ಯಂತ್ರ, ವಿದ್ಯುತ್ ಹಾಗೂ ನೀರಿನ ವೆಚ್ಚವನ್ನು ಗ್ರಂಥಾಲಯ ಇಲಾಖೆಯಿಂದ ಭರಿಸಿಕೊಳ್ಳುವ ಹಾಗೂ ಸಂಪೂರ್ಣ ಕಟ್ಟಡದ ನಿರ್ವಹಣೆಯನ್ನು ಗ್ರಂಥಾಲಯ ಇಲಾಖೆಯೇ ನೋಡಿಕೊಳ್ಳಲು ಷರತ್ತಿಗೊಳಪಟ್ಟ ಬಾಡಿಗೆ ರಹಿತವಾಗಿ MOU ಮಾಡಿಕೊಂಡು ಹಸ್ತಾಂತರಿಸಲು ಅನುಮೋದನೆ.

2. ಪ್ರಸ್ತಾಪಿತ ಕಟ್ಟಡದ ಉಳಿಕೆ ಅಂತಸ್ತುಗಳನ್ನು ಶೈಕ್ಷಣಿಕವಾಗಿ ವಿದ್ಯಾಭ್ಯಾಸ ಮಾಡುವ ಬಡ ಮತ್ತು ಮಾಧ್ಯಮ ವರ್ಗದ ಮಕ್ಕಳಿಗೆ ಅನುಕೂಲವಾಗುವಂತೆ, ಉಚಿತವಾಗಿ ತರಬೇತಿ, ಕೌಶಲ್ಯ ತರಬೇತಿ, ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ತರಗತಿಯ ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ತರಗತಿಗಳನ್ನು ನಡೆಸಲು ಕೌನ್ಸಿಲಿಂಗ್ ಕೇಂದ್ರ ನಡೆಸಲು ಹಾಗೂ ಇತರೆ ಉಚಿತ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲು ಅನುವಾಗುವಂತೆ ಪಾಲಿಕೆಯ ಷರತ್ತು ಮತ್ತು ನಿಬಂಧನೆಗೊಳಪಟ್ಟಂತೆ ಜಯನಗರ ಶೈಕ್ಷಣಿಕ ಸಮಿತಿಗೆ ವಹಿಸಿಕೊಡಲು ಅನುಮೋದನೆ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

.......................2

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 05 (447)/2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಸಂಖ್ಯೆ:180ರ ವ್ಯಾಪ್ತಿಯ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಮಾನ್ಯ ಆರ್. ಅಶೋಕ್, ಉಪ ಮುಖ್ಯ ಮಂತ್ರಿಗಳು ಆಯುಕ್ತರಿಗೆ ಪತ್ರ ನೀಡಿ ಕೋರಿರುವ ಮೇರೆಗೆ ಸದರಿ ಕಾಮಗಾರಿಯನ್ನು 2012-13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ2434 ರಲ್ಲಿನ ಬೆಂಗಳೂರು ನಗರ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿಟ್ಟಿರುವ ಅನುದಾನದ ಅಡಿಯಲ್ಲಿ ರೂ.295-00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಜಾಬ್ ಕೋಡ್ ಹಾಗೂ ಆಡಳಿತಾತ್ಮಕ ಅನುಮೋದನೆ ಹಾಗೂ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ನಿರ್ವಹಿಸಲು ಕೋರಿ ಕಾರ್ಯಪಾಲಕ ಅಭಿಯಂತರರು (ಪದ್ಮನಾಭನಗರ) ರವರು ಕಡತವನ್ನು ಸಲ್ಲಿಸಿರುತ್ತಾರೆ.

| ಕ್ರ.ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | Improvements and construction of play ground near Tamil School Field Banashankari in Ward No.180 | 295-00 |
| | **TOTAL** | **295-00** |

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.295-00 ಲಕ್ಷಗಳಿಗೆ ಜಾಬ್ ಕೋಡ್, ಆಡಳಿತಾತ್ಮಕ ಅನುಮೋದನೆ ಹಾಗೂ ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸುವ ಬಗ್ಗೆ ಅನುಮೋದನೆ ಕೋರಿ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12-03-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:12-03-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:12-03-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 12-03-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 06 (448)/2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಹಾರೋಹಳ್ಳಿ ಕೆರೆ ಹಂತ-1ರ ಸಮಗ್ರ ಅಭಿವೃದ್ಧಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು-3, ಕೆರೆಗಳು ರವರು ಮೊದಲನೇ ಕರೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 (ಎರಡು) ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಇಬ್ಬರು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತಾರೆ. ಕಾರ್ಯಪಾಲಕ ಅಭಿಯಂತರರು-3, ಕೆರೆಗಳು ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ. ಜೆ.ಸಿ.ಪ್ರಕಾಶ್, ಗುತ್ತಿಗೆದಾರರ ಟೆಂಡರ್‌ನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ರೂ.320 ಲಕ್ಷಗಳ ಅಂದಾಜುಪಟ್ಟಿಗೆ 2012-13ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಮುಖ್ಯ ಅಭಿಯಂತರರು, ಕೆರೆಗಳು ರವರು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿದ್ದು, ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.3,14,67,570.54 ಗಳಾಗಿರುತ್ತದೆ. ಈ ಕಾಮಗಾರಿ ನಮೂದಿಸಿದ ಟೆಂಡರ್ ಮೊತ್ತ ರೂ.3,38,57,401.45 ಗಳನ್ನು ಗುತ್ತಿಗೆದಾರರಾದ ಶ್ರೀ. ಜೆ.ಸಿ.ಪ್ರಕಾಶ್ ರವರು ಟೆಂಡರ್‌ಗಿಟ್ಟ ಮೊತ್ತವಾದ ರೂ.3,14,67,570.54 (2012-13ನೇ ಸಾಲಿನ ಲೋಕೋಪಯೋಗಿ ಹಾಗೂ ಸಣ್ಣ ನೀರಾವರಿ ಇಲಾಖೆಯ ದರಸೂಚಿಯನ್ವಯ) ಗಳಿಗೆ ಹೋಲಿಸಿದಾಗ ಶೇಕಡಾ 7.59% ರಷ್ಟು ಹೆಚ್ಚು ಇರುತ್ತದೆ. ಸದರಿ ಟೆಂಡರ್‌ನ್ನು ಅನುಮೋದಿಸಲು ಮುಖ್ಯ ಅಭಿಯಂತರರು, ಕೆರೆಗಳು ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.3,38,57,401.45 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/335/ಎಮ್ಎನ್‌ವೈ/2007 (ಭಾ) ದಿನಾಂಕ:11-05-2009ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯ ಬಾಕಿ ಇಟ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/636/ಎಂಎನ್‌ವೈ/2010 ಬೆಂಗಳೂರು ದಿನಾಂಕ:02-04-2011ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ನೀಡಲಾದ ತಿದ್ದುಪಡಿಯನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ವ್ಯಾಪ್ತಿಯಲ್ಲಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ. ಜೆ.ಸಿ.ಪ್ರಕಾಶ್ ರವರು ನಮೂದಿಸಿರುವ ಮೊತ್ತ ರೂ.3,38,57,401.45 (ರೂಪಾಯಿ ಮೂರು ಕೋಟಿ ಮೂವತ್ತೆಂಟು ಲಕ್ಷದ ಐವತ್ತೇಳು ಸಾವಿರದ ನಾಲ್ಕು ನೂರ ಒಂದು ರೂಪಾಯಿ ನಲವತ್ತೈದು ಪೈಸೆ ಮಾತ್ರ) ಗಳಾಗಿದ್ದು, ಇದು 2012-13ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇಕಡ 7.59% ರಷ್ಟು ಹೆಚ್ಚು ಇದ್ದು, ಸದರಿ ಟೆಂಡರ್‌ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:13-03-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:15-03-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:15-03-2013ರ ನಿರ್ಣಯವನ್ನು ಒಪ್ಪುವುದು".

.......................2

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:15-03-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 07 (449)/2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 10,000 ಕಿ.ಮೀ. ಉದ್ದದ ರಸ್ತೆಗಳು ಇದ್ದು, ಇವುಗಳ ಪೈಕಿ ಸುಮಾರು 2000 ಕಿ.ಮೀ. ಉದ್ದದ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳು ಇರುತ್ತವೆ. ಈ ರಸ್ತೆಗಳ ಗುಂಡಿಗಳನ್ನು ಹೊಸ ತಾಂತ್ರಿಕತೆಯ ಸ್ವಯಂಚಾಲಿತ ಯಂತ್ರಗಳ ಮೂಲಕ ದುರಸ್ಥಿಗೊಳಿಸಲು ದಿನಾಂಕ:28-09-2012 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನವಾಗಿರುತ್ತದೆ. ಸದರಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಗಿದ್ದು, ಪಾಲಿಕೆ ವ್ಯಾಪ್ತಿಯ ಆರ್ಟಿರಿಯಲ್ / ಸಬ್-ಆರ್ಟೀರಿಯಲ್ ರಸ್ತೆಗಳ (923 ಕಿ.ಮೀ. ಉದ್ದದ ಆರ್ಟೀರಿಯಲ್ ಮತ್ತು 1017 ಕಿ.ಮೀ. ಉದ್ದದ ಸಬ್-ಆರ್ಟೀರಿಯಲ್) ರಸ್ತೆಗಳ ಗುಂಡಿಗಳನ್ನು ವೈಜ್ಞಾನಿಕ ರೀತಿಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿ ಸ್ವಯಂಚಾಲಿತ ಯಂತ್ರಗಳ ಮೂಲಕ ಮುಚ್ಚಿ ಒಂದು ವರ್ಷದ ಅವಧಿಗೆ ನಿರ್ವಹಣೆ ಮಾಡಲು ಯೋಜಿಸಲಾಗಿರುತ್ತದೆ.

ಈ ಆರ್ಟೀರಿಯಲ್ / ಸಬ್-ಆರ್ಟೀರಿಯಲ್ ರಸ್ತೆಯಲ್ಲಿ ಉಂಟಾಗುವ ರಸ್ತೆ ಗುಂಡಿಗಳನ್ನು ವೈಜ್ಞಾನಿಕವಾಗಿ ಹೊಸ ತಂತ್ರಜ್ಞಾನವನ್ನು ಅಳವಡಿಸಿ ಸ್ವಯಂಚಾಲಿತ ಯಂತ್ರಗಳ ಮೂಲಕ ಮುಚ್ಚಲು ಹಾಗೂ ಒಂದು ವರ್ಷಗಳ ಮಟ್ಟಿಗೆ ನಿರ್ವಹಣೆ ಮಾಡಲು **Expression of Interest-cum-RFP** ಅನ್ನು ಕರೆಯಲಾಗಿರುತ್ತದೆ. ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 8 ವಲಯಗಳ ಆರ್ಟೀರಿಯಲ್ / ಸಬ್-ಆರ್ಟೀರಿಯಲ್ ರಸ್ತೆಗಳನ್ನು 7 ಪ್ಯಾಕೇಜ್‌ಗಳನ್ನಾಗಿ ವಿಂಗಡಿಸಿ 1 ವರ್ಷದ ಮಟ್ಟಿಗೆ ಆಯಾ ಪ್ಯಾಕೇಜ್‌ಗಳ ಅಡಿಯಲ್ಲಿ ರಸ್ತೆಗಳನ್ನು ನಿರ್ವಹಣೆ, ಅಂದರೆ **pothole filling** ಮಾಡಲು **RFP** ಅನ್ನು ಸಿದ್ಧಪಡಿಸಿ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲಾಗಿತ್ತು.

ಮೇಲಿನ ಟೆಂಡರ್ ಪ್ರಕಟಣೆಯು ರಾಜ್ಯ ಮಟ್ಟದ ಆಂಗ್ಲ ದೈನಿಕ ಮತ್ತು ಕನ್ನಡ ದೈನಿಕ ಪತ್ರಿಕೆಗಳಲ್ಲಿ, ಜಿಲ್ಲಾ ಟೆಂಡರ್ ಬುಲೆಟಿನ್ ಹಾಗೂ ರಾಜ್ಯ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲಾಗಿರುತ್ತದೆ.

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಎರಡು ಸಂಸ್ಥೆಗಳು ಭಾಗವಹಿಸಿದ್ದು, ಇವರ ತಾಂತ್ರಿಕ ಬಿಡ್‌ಗಳನ್ನು ಕಾರ್ಯನಿರ್ವಾಹಕ ಅಭಿಯಂತರರವರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತೆರೆದಿರುತ್ತಾರೆ. ಟೆಂಡರ್ ಪರಿಶೀಲನೆಯ ನಂತರ ಒಟ್ಟಾರೆ ಬಂದಿದ್ದ 2 ಬಿಡ್‌ದಾರರಲ್ಲಿ ಇಬ್ಬರು ಅರ್ಹರಿದ್ದು, ಸದರಿ ಬಿಡ್‌ದಾರರ ಆರ್ಥಿಕ ಬಿಡ್‌ಗಳ ವಿವರ ಈ ಕೆಳಕಂಡಂತಿದೆ;

| Sl. No. | Item Name | Qty | Unit | M/s. American Road Technology & Solutions Pvt. Ltd. | | M/s. PJB Engineers Pvt. Ltd. | |
|---|---|---|---|---|---|---|---|
| | | | | Rate quoted | Amount | Rate quoted | Amount |
| 1 | Filling of Potholes and Patch repairs with Bituminous concrete using 60/70 grade Bitumen with removal of all failed materials, cleaning of surface, applying tack coat, compacting and finishing the surface to form a smooth continuous surface and filling of cracks with Bituminous Emulsion using POTHOLE FILLING MACHINE AS SPECIFIED IN SECTION '5' - TERMS OF REFERENCE INDICATED IN THE RFP DOCUMENT UPLOADED IN THE E-PORTAL (inclusive of all Taxes applicable)-FOR PACKAGE 'E'- 475 KMS | 475 | KMS | 85,000/- | 40375000.00 | 93500/- | 44412500.00 |

.......................2

ಮೇಲಿನ ಬಿಡ್‌ದಾರರಲ್ಲಿ ಕನಿಷ್ಠ ಮೊತ್ತ ನಮೂದಿಸಿರುವ ಮೆ॥ ಅಮೇರಿಕನ್ ರೋಡ್ ಟೆಕ್ನಾಲಜಿ & ಸಲ್ಯೂಶನ್ಸ್ ಪ್ರೈ. ಲಿ. ರವರು ಟೆಂಡರ್ ಮೊತ್ತ ರೂ.4,03,75,000.00 (ರೂ. ನಾಲ್ಕು ಕೋಟಿ ಮೂರು ಲಕ್ಷದ ಎಪ್ಪತ್ತೈದು ಸಾವಿರಗಳು ಮಾತ್ರ) ಗಳನ್ನು ನಮೂದಿಸಿರುತ್ತಾರೆ. ಈ ಮೊತ್ತವು ದುಬಾರಿ ಮೊತ್ತವೆಂದು ಕಂಡು ಬಂದ ಹಿನ್ನಲೆಯಲ್ಲಿ ಸದರಿ ಸಂಸ್ಥೆಯೊಂದಿಗೆ ಸಂಧಾನ ನಡೆಸಲಾಗಿ, ಅಂತಿಮವಾಗಿ ಸಂಧಾನದ ದರ ರೂ.82,500/- ನೀಡಿದ್ದು, ಅದರಂತೆ ಒಟ್ಟು ಸಂಧಾನಿತ ಮೊತ್ತ ರೂ.3,91,87,500.00 (ರೂ. ಮೂರು ಕೋಟಿ ತೊಂಭತ್ತೊಂದು ಲಕ್ಷದ ಎಂಭತ್ತೇಳು ಸಾವಿರದ ಐನೂರು ರೂಪಾಯಿಗಳು ಮಾತ್ರ) ಆಳಿಗೆ ಆಗುತ್ತದೆ. ವಿವರಗಳು ಕೆಳಕಂಡಂತಿದೆ;

| Sl. No. | Item Name | Qty | Unit | Negotiated offer as per letter dated: 08-02-2013 of M/s. American Road Technology & Solutions Pvt. Ltd. | |
|---|---|---|---|---|---|
| | | | | Negotiated Rate | Amount |
| 1 | Filling of Potholes and Patch repairs with Bituminous concrete using 60/70 grade Bitumen with removal of all failed materials, cleaning of surface, applying tack coat, compacting and finishing the surface to form a smooth continuous surface and filling of cracks with Bituminous Emulsion using POTHOLE FILLING MACHINE AS SPECIFIED IN SECTION '5' - TERMS OF REFERENCE INDICATED IN THE RFP DOCUMENT UPLOADED IN THE E-PORTAL (inclusive of all Taxes applicable)-FOR PACKAGE 'E'-475 KMS | 475 | KMS | 82,500/- | 39187500.00 |

ಬೆಂಗಳೂರು ನಗರದ ರಸ್ತೆಗಳ ಗುಂಡಿಗಳನ್ನು ಪ್ರತಿವರ್ಷವೂ ಮುಚ್ಚಿ ನಿರ್ವಹಣೆ ಮಾಡುವುದು ಒಂದು ಪ್ರಮುಖ ಜವಾಬ್ದಾರಿಯಾಗಿದ್ದು, ಇದನ್ನು ಸಮರ್ಥ ರೀತಿಯಲ್ಲಿ ಮತ್ತು ಹೊಸ ತಾಂತ್ರಿಕತೆಯನ್ನು ಉಪಯೋಗಿಸಿಕೊಂಡು ವಾರ್ಷಿಕ ಗುತ್ತಿಗೆ ನೀಡುವುದರಿಂದ ಪಾಲಿಕೆಗೆ ಆಗಾಗ್ಗೆ ಆಗುವ ಆರ್ಥಿಕ ನಷ್ಟವನ್ನು ಉಳಿತಾಯ ಮಾಡಿದಂತಾಗುತ್ತದೆ. ಆಗಾಗ್ಗೆ ಗುಂಡಿ ಮುಚ್ಚುವ ಕಾರ್ಯಕ್ಕೆ ವೆಚ್ಚ ಮಾಡುವುದನ್ನು ತಡೆಗಟ್ಟಿ ಶಿಸ್ತುಬದ್ಧವಾಗಿ ಪುನರಾವರ್ತನೆಯಾಗದಂತೆ ಮಾಡುವಲ್ಲಿ ಈ ಪದ್ಧತಿಯು ಅನುಕೂಲಕರವಾಗಿದೆ.

ಈ ಮೇರೆಗೆ ಸದರಿ ರಸ್ತೆ ಗುಂಡಿ ಮುಚ್ಚುವ ವಾರ್ಷಿಕ ಗುತ್ತಿಗೆಯನ್ನು ಕನಿಷ್ಠ ಮೊತ್ತ ನಮೂದಿಸಿರುವ ಮೆ॥ ಅಮೆರಿಕನ್ ರೋಡ್ ಟೆಕ್ನಾಲಜಿ & ಸಲ್ಯೂಶನ್ಸ್ ಪ್ರೈ.ಲಿ. ರವರಿಗೆ ಸಂಧಾನಿತ ದರ ರೂ.82,500/- ಗಳನ್ನು ಪ್ರತಿ ಕಿ.ಮೀ.ಗೆ ನೀಡಲು, ಅದರಂತೆ ಒಟ್ಟು 475 ಕಿ.ಮೀ. ರಸ್ತೆಯ ಪ್ಯಾಕೇಜ್ ಮೊತ್ತ ರೂ.3,91,87,500.00 (ರೂ. ಮೂರು ಕೋಟಿ ತೊಂಭತ್ತೊಂದು ಲಕ್ಷದ ಎಂಭತ್ತೇಳು ಸಾವಿರದ ಐನೂರು ರೂಪಾಯಿಗಳು ಮಾತ್ರ) ಗಳಿಗೆ ನೀಡುವ ಬಗ್ಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26-02-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13-03-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13–03–2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13–03–2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 08 (450)/2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 10,000 ಕಿ.ಮೀ. ಉದ್ದದ ರಸ್ತೆಗಳು ಇದ್ದು, ಇವುಗಳ ಪೈಕಿ ಸುಮಾರು 2000 ಕಿ.ಮೀ. ಉದ್ದದ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳು ಇರುತ್ತವೆ. ಈ ರಸ್ತೆಗಳ ಗುಂಡಿಗಳನ್ನು ಹೊಸ ತಾಂತ್ರಿಕತೆಯ ಸ್ವಯಂಚಾಲಿತ ಯಂತ್ರಗಳ ಮೂಲಕ ದುರಸ್ಥಿಗೊಳಿಸಲು ದಿನಾಂಕ:28-09-2012 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನವಾಗಿರುತ್ತದೆ. ಸದರಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಗಿದ್ದು, ಪಾಲಿಕೆ ವ್ಯಾಪ್ತಿಯ ಆರ್ಟಿರಿಯಲ್ / ಸಬ್-ಆರ್ಟೀರಿಯಲ್ ರಸ್ತೆಗಳ (923 ಕಿ.ಮೀ. ಉದ್ದದ ಆರ್ಟೀರಿಯಲ್ ಮತ್ತು 1017 ಕಿ.ಮೀ. ಉದ್ದದ ಸಬ್-ಆರ್ಟೀರಿಯಲ್) ರಸ್ತೆಗಳ ಗುಂಡಿಗಳನ್ನು ವೈಜ್ಞಾನಿಕ ರೀತಿಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿ ಸ್ವಯಂಚಾಲಿತ ಯಂತ್ರಗಳ ಮೂಲಕ ಮುಚ್ಚಿ ಒಂದು ವರ್ಷದ ಅವಧಿಗೆ ನಿರ್ವಹಣೆ ಮಾಡಲು ಯೋಜಿಸಲಾಗಿರುತ್ತದೆ.

ಈ ಆರ್ಟೀರಿಯಲ್ / ಸಬ್-ಆರ್ಟೀರಿಯಲ್ ರಸ್ತೆಯಲ್ಲಿ ಉಂಟಾಗುವ ರಸ್ತೆ ಗುಂಡಿಗಳನ್ನು ವೈಜ್ಞಾನಿಕವಾಗಿ ಹೊಸ ತಂತ್ರಜ್ಞಾನವನ್ನು ಅಳವಡಿಸಿ ಸ್ವಯಂಚಾಲಿತ ಯಂತ್ರಗಳ ಮೂಲಕ ಮುಚ್ಚಲು ಹಾಗೂ ಒಂದು ವರ್ಷಗಳ ಮಟ್ಟಿಗೆ ನಿರ್ವಹಣೆ ಮಾಡಲು **Expression of Interest-cum-RFP** ಅನ್ನು ಕರೆಯಲಾಗಿರುತ್ತದೆ. ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 8 ವಲಯಗಳ ಆರ್ಟೀರಿಯಲ್ / ಸಬ್-ಆರ್ಟೀರಿಯಲ್ ರಸ್ತೆಗಳನ್ನು 6 ಪ್ಯಾಕೇಜ್‌ಗಳನ್ನಾಗಿ ವಿಂಗಡಿಸಿ 1 ವರ್ಷದ ಮಟ್ಟಿಗೆ ಆಯಾ ಪ್ಯಾಕೇಜ್‌ಗಳ ಅಡಿಯಲ್ಲಿ ರಸ್ತೆಗಳನ್ನು ನಿರ್ವಹಣೆ, ಅಂದರೆ **pothole filling** ಮಾಡಲು **RFP** ಅನ್ನು ಸಿದ್ಧಪಡಿಸಿ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲಾಗಿತ್ತು.

ಮೇಲಿನ ಟೆಂಡರ್ ಪ್ರಕಟಣೆಯು ರಾಜ್ಯ ಮಟ್ಟದ ಆಂಗ್ಲ ದೈನಿಕ ಮತ್ತು ಕನ್ನಡ ದೈನಿಕ ಪತ್ರಿಕೆಗಳಲ್ಲಿ, ಜಿಲ್ಲಾ ಟೆಂಡರ್ ಬುಲೆಟಿನ್ ಹಾಗೂ ರಾಜ್ಯ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲಾಗಿರುತ್ತದೆ.

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಎರಡು ಸಂಸ್ಥೆಗಳು ಭಾಗವಹಿಸಿದ್ದು, ಇವರ ತಾಂತ್ರಿಕ ಬಿಡ್‌ಗಳನ್ನು ಕಾರ್ಯನಿರ್ವಾಹಕ ಅಭಿಯಂತರರವರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತೆರೆದಿರುತ್ತಾರೆ. ಟೆಂಡರ್ ಪರಿಶೀಲನೆಯ ನಂತರ ಒಟ್ಟಾರೆ ಬಂದಿದ್ದ 2 ಬಿಡ್‌ದಾರರಲ್ಲಿ ಇಬ್ಬರು ಅರ್ಹರಿದ್ದು, ಸದರಿ ಬಿಡ್‌ದಾರರ ಆರ್ಥಿಕ ಬಿಡ್‌ಗಳ ವಿವರ ಈ ಕೆಳಕಂಡಂತಿದೆ;

| Sl. No. | Item Name | Qty | Unit | M/s. American Road Technology & Solutions Pvt. Ltd. | | M/s. PJB Engineers Pvt. Ltd. | |
|---|---|---|---|---|---|---|---|
| | | | | Rate quoted | Amount | Rate quoted | Amount |
| 1 | Filling of Potholes and Patch repairs with Bituminous concrete using 60/70 grade Bitumen with removal of all failed materials, cleaning of surface, applying tack coat, compacting and finishing the surface to form a smooth continuous surface and filling of cracks with Bituminous Emulsion using POTHOLE FILLING MACHINE AS SPECIFIED IN SECTION '5' - TERMS OF REFERENCE INDICATED IN THE RFP DOCUMENT UPLOADED IN THE E-PORTAL (inclusive of all Taxes applicable)-FOR PACKAGE 'A'-295 KMS | 295 | KMS | 98,000/- | 28910000.00 | 104300/- | 30768500.00 |

.......................2

ಮೇಲಿನ ಬಿಡ್‌ದಾರರಲ್ಲಿ ಕನಿಷ್ಠ ಮೊತ್ತ ನಮೂದಿಸಿರುವ ಮೆ॥ ಅಮೇರಿಕನ್ ರೋಡ್ ಟೆಕ್ನಾಲಜಿ & ಸಲ್ಯೂಶನ್ಸ್ ಪ್ರೈ. ಲಿ. ರವರು ಟೆಂಡರ್ ಮೊತ್ತ ರೂ.2,89,10,0000.00 (ರೂ. ಎರಡು ಕೋಟಿ ಎಂಭತ್ತೊಂಭತ್ತು ಲಕ್ಷದ ಹತ್ತು ಸಾವಿರಗಳು ಮಾತ್ರ) ಗಳನ್ನು ನಮೂದಿಸಿರುತ್ತಾರೆ. ಈ ಮೊತ್ತವು ದುಬಾರಿ ಮೊತ್ತವೆಂದು ಕಂಡು ಬಂದ ಹಿನ್ನಲೆಯಲ್ಲಿ ಸದರಿ ಸಂಸ್ಥೆಯೊಂದಿಗೆ ಸಂಧಾನ ನಡೆಸಲಾಗಿ, ಅಂತಿಮವಾಗಿ ಸಂಧಾನದ ದರ ರೂ.96,000/- ನೀಡಿದ್ದು, ಅದರಂತೆ ಒಟ್ಟು ಸಂಧಾನಿತ ಮೊತ್ತ ರೂ.2,83,20,000.00 (ರೂ. ಎರಡು ಕೋಟಿ ಎಂಭತ್ತೂರು ಲಕ್ಷದ ಇಪ್ಪತ್ತು ಸಾವಿರಗಳು ಮಾತ್ರ) ಗಳಿಗೆ ಆಗುತ್ತದೆ. ವಿವರಗಳು ಕೆಳಕಂಡಂತಿದೆ;

| Sl. No. | Item Name | Qty | Unit | Negotiated offer as per letter dated: 08-02-2013 of M/s. American Road Technology & Solutions Pvt. Ltd. | |
|---|---|---|---|---|---|
| | | | | Negotiated Rate | Amount |
| 1 | Filling of Potholes and Patch repairs with Bituminous concrete using 60/70 grade Bitumen with removal of all failed materials, cleaning of surface, applying tack coat, compacting and finishing the surface to form a smooth continuous surface and filling of cracks with Bituminous Emulsion using POTHOLE FILLING MACHINE AS SPECIFIED IN SECTION '5' - TERMS OF REFERENCE INDICATED IN THE RFP DOCUMENT UPLOADED IN THE E-PORTAL (inclusive of all Taxes applicable)-FOR PACKAGE 'A'-295 KMS | 295 | KMS | 96,000/- | 28320000.00 |

ಬೆಂಗಳೂರು ನಗರದ ರಸ್ತೆಗಳ ಗುಂಡಿಗಳನ್ನು ಪ್ರತಿವರ್ಷವೂ ಮುಚ್ಚಿ ನಿರ್ವಹಣೆ ಮಾಡುವುದು ಒಂದು ಪ್ರಮುಖ ಜವಾಬ್ದಾರಿಯಾಗಿದ್ದು, ಇದನ್ನು ಸಮರ್ಥ ರೀತಿಯಲ್ಲಿ ಮತ್ತು ಹೊಸ ತಾಂತ್ರಿಕತೆಯನ್ನು ಉಪಯೋಗಿಸಿಕೊಂಡು ವಾರ್ಷಿಕ ಗುತ್ತಿಗೆ ನೀಡುವುದರಿಂದ ಪಾಲಿಕೆಗೆ ಆಗಾಗ್ಗೆ ಆಗುವ ಆರ್ಥಿಕ ನಷ್ಟವನ್ನು ಉಳಿತಾಯ ಮಾಡಿದಂತಾಗುತ್ತದೆ. ಆಗಾಗ್ಗೆ ಗುಂಡಿ ಮುಚ್ಚುವ ಕಾರ್ಯಕ್ಕೆ ವೆಚ್ಚ ಮಾಡುವುದನ್ನು ತಡೆಗಟ್ಟಿ ಶಿಸ್ತುಬದ್ಧವಾಗಿ ಮನರಾವರ್ತನೆಯಾಗದಂತೆ ಮಾಡುವಲ್ಲಿ ಈ ಪದ್ಧತಿಯು ಅನುಕೂಲಕರವಾಗಿದೆ.

ಈ ಮೇರೆಗೆ ಸದರಿ ರಸ್ತೆ ಗುಂಡಿ ಮುಚ್ಚುವ ವಾರ್ಷಿಕ ಗುತ್ತಿಗೆಯನ್ನು ಕನಿಷ್ಠ ಮೊತ್ತ ನಮೂದಿಸಿರುವ ಮೆ॥ ಅಮೆರಿಕನ್ ರೋಡ್ ಟೆಕ್ನಾಲಜಿ & ಸಲ್ಯೂಶನ್ಸ್ ಪ್ರೈ.ಲಿ. ರವರಿಗೆ ಸಂಧಾನಿತ ದರ ರೂ.96,000/- ಗಳನ್ನು ಪ್ರತಿ ಕಿ.ಮೀ.ಗೆ ನೀಡಲು, ಅದರಂತೆ ಒಟ್ಟು 295 ಕಿ.ಮೀ. ರಸ್ತೆಯ ಪ್ಯಾಕೇಜ್ ಮೊತ್ತ ರೂ.2,83,20,000.00 (ರೂ. ಎರಡು ಕೋಟಿ ಎಂಭತ್ತೂರು ಲಕ್ಷದ ಇಪ್ಪತ್ತು ಸಾವಿರಗಳು ಮಾತ್ರ) ಗಳಿಗೆ ನೀಡುವ ಬಗ್ಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:25-02-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13-03-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13-03-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13–03–2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 09 (451)/2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 10,000 ಕಿ.ಮೀ. ಉದ್ದದ ರಸ್ತೆಗಳು ಇದ್ದು, ಇವುಗಳ ಪೈಕಿ ಸುಮಾರು 2000 ಕಿ.ಮೀ. ಉದ್ದದ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳು ಇರುತ್ತವೆ. ಈ ರಸ್ತೆಗಳ ಗುಂಡಿಗಳನ್ನು ಹೊಸ ತಾಂತ್ರಿಕತೆಯ ಸ್ವಯಂಚಾಲಿತ ಯಂತ್ರಗಳ ಮೂಲಕ ದುರಸ್ಥಿಗೊಳಿಸಲು ದಿನಾಂಕ:28-09-2012 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನವಾಗಿರುತ್ತದೆ. ಸದರಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಗಿದ್ದು, ಪಾಲಿಕೆ ವ್ಯಾಪ್ತಿಯ ಆರ್ಟಿರಿಯಲ್ / ಸಬ್-ಆರ್ಟೀರಿಯಲ್ ರಸ್ತೆಗಳ (923 ಕಿ.ಮೀ. ಉದ್ದದ ಆರ್ಟೀರಿಯಲ್ ಮತ್ತು 1017 ಕಿ.ಮೀ. ಉದ್ದದ ಸಬ್-ಆರ್ಟೀರಿಯಲ್) ರಸ್ತೆಗಳ ಗುಂಡಿಗಳನ್ನು ವೈಜ್ಞಾನಿಕ ರೀತಿಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿ ಸ್ವಯಂಚಾಲಿತ ಯಂತ್ರಗಳ ಮೂಲಕ ಮುಚ್ಚಿ ಒಂದು ವರ್ಷದ ಅವಧಿಗೆ ನಿರ್ವಹಣೆ ಮಾಡಲು ಯೋಜಿಸಲಾಗಿರುತ್ತದೆ.

ಈ ಆರ್ಟೀರಿಯಲ್ / ಸಬ್-ಆರ್ಟೀರಿಯಲ್ ರಸ್ತೆಯಲ್ಲಿ ಉಂಟಾಗುವ ರಸ್ತೆ ಗುಂಡಿಗಳನ್ನು ವೈಜ್ಞಾನಿಕವಾಗಿ ಹೊಸ ತಂತ್ರಜ್ಞಾನವನ್ನು ಅಳವಡಿಸಿ ಸ್ವಯಂಚಾಲಿತ ಯಂತ್ರಗಳ ಮೂಲಕ ಮುಚ್ಚಲು ಹಾಗೂ ಒಂದು ವರ್ಷಗಳ ಮಟ್ಟಿಗೆ ನಿರ್ವಹಣೆ ಮಾಡಲು **Expression of Interest-cum-RFP** ಅನ್ನು ಕರೆಯಲಾಗಿರುತ್ತದೆ. ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 8 ವಲಯಗಳ ಆರ್ಟೀರಿಯಲ್ / ಸಬ್-ಆರ್ಟೀರಿಯಲ್ ರಸ್ತೆಗಳನ್ನು 6 ಪ್ಯಾಕೇಜ್‌ಗಳನ್ನಾಗಿ ವಿಂಗಡಿಸಿ 1 ವರ್ಷದ ಮಟ್ಟಿಗೆ ಆಯಾ ಪ್ಯಾಕೇಜ್‌ಗಳ ಅಡಿಯಲ್ಲಿ ರಸ್ತೆಗಳನ್ನು ನಿರ್ವಹಣೆ, ಅಂದರೆ **pothole filling** ಮಾಡಲು **RFP** ಅನ್ನು ಸಿದ್ಧಪಡಿಸಿ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲಾಗಿತ್ತು.

ಮೇಲಿನ ಟೆಂಡರ್ ಪ್ರಕಟಣೆಯು ರಾಜ್ಯ ಮಟ್ಟದ ಆಂಗ್ಲ ದೈನಿಕ ಮತ್ತು ಕನ್ನಡ ದೈನಿಕ ಪತ್ರಿಕೆಗಳಲ್ಲಿ, ಜಿಲ್ಲಾ ಟೆಂಡರ್ ಬುಲೆಟಿನ್ ಹಾಗೂ ರಾಜ್ಯ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲಾಗಿರುತ್ತದೆ.

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಎರಡು ಸಂಸ್ಥೆಗಳು ಭಾಗವಹಿಸಿದ್ದು, ಇವರ ತಾಂತ್ರಿಕ ಬಿಡ್‌ಗಳನ್ನು ಕಾರ್ಯನಿರ್ವಾಹಕ ಅಭಿಯಂತರರವರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತೆರೆದಿರುತ್ತಾರೆ. ಟೆಂಡರ್ ಪರಿಶೀಲನೆಯ ನಂತರ ಒಟ್ಟಾರೆ ಬಂದಿದ್ದ 2 ಬಿಡ್‌ದಾರರಲ್ಲಿ ಇಬ್ಬರು ಅರ್ಹರಿದ್ದು, ಸದರಿ ಬಿಡ್‌ದಾರರ ಆರ್ಥಿಕ ಬಿಡ್‌ಗಳ ವಿವರ ಈ ಕೆಳಕಂಡಂತಿದೆ;

| Sl. No. | Item Name | Qty | Unit | M/s. American Road Technology & Solutions Pvt. Ltd. | | M/s. PJB Engineers Pvt. Ltd. | |
|---|---|---|---|---|---|---|---|
| | | | | Rate quoted | Amount | Rate quoted | Amount |
| 1 | Filling of Potholes and Patch repairs with Bituminous concrete using 60/70 grade Bitumen with removal of all failed materials, cleaning of surface, applying tack coat, compacting and finishing the surface to form a smooth continuous surface and filling of cracks with Bituminous Emulsion using POTHOLE FILLING MACHINE AS SPECIFIED IN SECTION '5' - TERMS OF REFERENCE INDICATED IN THE RFP DOCUMENT UPLOADED IN THE E-PORTAL (inclusive of all Taxes applicable)-FOR PACKAGE 'D'-385 KMS | 385 | KMS | 87,000/- | 33495000.00 | 98600/- | 37961000.00 |

ಮೇಲಿನ ಬಿಡ್‌ದಾರರಲ್ಲಿ ಕನಿಷ್ಠ ಮೊತ್ತ ನಮೂದಿಸಿರುವ ಮೆ॥ ಅಮೇರಿಕನ್ ರೋಡ್ ಟೆಕ್ನಾಲಜಿ & ಸಲ್ಯೂಶನ್ಸ್ ಪ್ರೈ. ಲಿ. ರವರು ಟೆಂಡರ್ ಮೊತ್ತ ರೂ.3,34,95,000.00 (ರೂ. ಮೂರು ಕೋಟಿ ಮೂವತ್ನಾಲ್ಕು ಲಕ್ಷದ ತೊಂಭತ್ತೈದು ಸಾವಿರಗಳು ಮಾತ್ರ) ಗಳನ್ನು ನಮೂದಿಸಿರುತ್ತಾರೆ. ಈ ಮೊತ್ತವು ದುಬಾರಿ ಮೊತ್ತವೆಂದು ಕಂಡು ಬಂದ ಹಿನ್ನಲೆಯಲ್ಲಿ ಸದರಿ ಸಂಸ್ಥೆಯೊಂದಿಗೆ ಸಂಧಾನ ನಡೆಸಲಾಗಿ, ಅಂತಿಮವಾಗಿ ಸಂಧಾನದ ದರ ರೂ.86,000/- ನೀಡಿದ್ದು, ಅದರಂತೆ ಒಟ್ಟು ಸಂಧಾನಿತ ಮೊತ್ತ ರೂ.3,31,10,000.00 (ರೂ. ಮೂರು ಕೋಟಿ ಮೂವತ್ತೊಂದು ಲಕ್ಷದ ಹತ್ತು ಸಾವಿರಗಳು ಮಾತ್ರ) ಗಳಿಗೆ ಆಗುತ್ತದೆ. ವಿವರಗಳು ಕೆಳಕಂಡಂತಿದೆ;

| **Sl. No.** | **Item Name** | **Qty** | **Unit** | **Negotiated offer as per letter dated:08-02-2013 of M/s. American Road Technology & Solutions Pvt. Ltd.** | |
|---|---|---|---|---|---|
| | | | | Negotiated Rate | Amount |
| 1 | Filling of Potholes and Patch repairs with Bituminous concrete using 60/70 grade Bitumen with removal of all failed materials, cleaning of surface, applying tack coat, compacting and finishing the surface to form a smooth continuous surface and filling of cracks with Bituminous Emulsion using POTHOLE FILLING MACHINE AS SPECIFIED IN SECTION '5' - TERMS OF REFERENCE INDICATED IN THE RFP DOCUMENT UPLOADED IN THE E-PORTAL (inclusive of all Taxes applicable)-FOR PACKAGE 'D'-385 KMS | 385 | KMS | 86,000/- | 33110000.00 |

ಬೆಂಗಳೂರು ನಗರದ ರಸ್ತೆಗಳ ಗುಂಡಿಗಳನ್ನು ಪ್ರತಿವರ್ಷವೂ ಮುಚ್ಚಿ ನಿರ್ವಹಣೆ ಮಾಡುವುದು ಒಂದು ಪ್ರಮುಖ ಜವಾಬ್ದಾರಿಯಾಗಿದ್ದು, ಇದನ್ನು ಸಮರ್ಥ ರೀತಿಯಲ್ಲಿ ಮತ್ತು ಹೊಸ ತಾಂತ್ರಿಕತೆಯನ್ನು ಉಪಯೋಗಿಸಿಕೊಂಡು ವಾರ್ಷಿಕ ಗುತ್ತಿಗೆ ನೀಡುವುದರಿಂದ ಪಾಲಿಕೆಗೆ ಆಗಾಗ್ಗೆ ಆಗುವ ಆರ್ಥಿಕ ನಷ್ಟವನ್ನು ಉಳಿತಾಯ ಮಾಡಿದಂತಾಗುತ್ತದೆ. ಆಗಾಗ್ಗೆ ಗುಂಡಿ ಮುಚ್ಚುವ ಕಾರ್ಯಕ್ಕೆ ವೆಚ್ಚ ಮಾಡುವುದನ್ನು ತಡೆಗಟ್ಟಿ ಶಿಸ್ತುಬದ್ಧವಾಗಿ ಪುನರಾವರ್ತನೆಯಾಗದಂತೆ ಮಾಡುವಲ್ಲಿ ಈ ಪದ್ಧತಿಯು ಅನುಕೂಲಕರವಾಗಿದೆ.

ಈ ಮೇರೆಗೆ ಸದರಿ ರಸ್ತೆ ಗುಂಡಿ ಮುಚ್ಚುವ ವಾರ್ಷಿಕ ಗುತ್ತಿಗೆಯನ್ನು ಕನಿಷ್ಠ ಮೊತ್ತ ನಮೂದಿಸಿರುವ ಮೆ॥ ಅಮೇರಿಕನ್ ರೋಡ್ ಟೆಕ್ನಾಲಜಿ & ಸಲ್ಯೂಶನ್ಸ್ ಪ್ರೈ.ಲಿ. ರವರಿಗೆ ಸಂಧಾನಿತ ದರ ರೂ.86,000/- ಗಳನ್ನು ಪ್ರತಿ ಕಿ.ಮೀ.ಗೆ ನೀಡಲು, ಅದರಂತೆ ಒಟ್ಟು 385 ಕಿ.ಮೀ. ರಸ್ತೆಯ ಪ್ಯಾಕೇಜ್ ಮೊತ್ತ ರೂ.3,31,10,000.00 (ರೂ. ಮೂರು ಕೋಟಿ ಮೂವತ್ತೊಂದು ಲಕ್ಷದ ಹತ್ತು ಸಾವಿರಗಳು ಮಾತ್ರ) ಗಳಿಗೆ ನೀಡುವ ಬಗ್ಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:26-02-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13-03-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13-03-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

.......................3

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13–03–2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 10 (452)/2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 10,000 ಕಿ.ಮೀ. ಉದ್ದದ ರಸ್ತೆಗಳು ಇದ್ದು, ಇವುಗಳ ಪೈಕಿ ಸುಮಾರು 2000 ಕಿ.ಮೀ. ಉದ್ದದ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳು ಇರುತ್ತವೆ. ಈ ರಸ್ತೆಗಳ ಗುಂಡಿಗಳನ್ನು ಹೊಸ ತಾಂತ್ರಿಕತೆಯ ಸ್ವಯಂಚಾಲಿತ ಯಂತ್ರಗಳ ಮೂಲಕ ದುರಸ್ತಿಗೊಳಿಸಲು ದಿನಾಂಕ:28-09-2012 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನವಾಗಿರುತ್ತದೆ. ಸದರಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಗಿದ್ದು, ಪಾಲಿಕೆ ವ್ಯಾಪ್ತಿಯ ಆರ್ಟಿರಿಯಲ್ / ಸಬ್-ಆರ್ಟೀರಿಯಲ್ ರಸ್ತೆಗಳ (923 ಕಿ.ಮೀ. ಉದ್ದದ ಆರ್ಟೀರಿಯಲ್ ಮತ್ತು 1017 ಕಿ.ಮೀ. ಉದ್ದದ ಸಬ್-ಆರ್ಟೀರಿಯಲ್) ರಸ್ತೆಗಳ ಗುಂಡಿಗಳನ್ನು ವೈಜ್ಞಾನಿಕ ರೀತಿಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿ ಸ್ವಯಂಚಾಲಿತ ಯಂತ್ರಗಳ ಮೂಲಕ ಮುಚ್ಚಿ ಒಂದು ವರ್ಷದ ಅವಧಿಗೆ ನಿರ್ವಹಣೆ ಮಾಡಲು ಯೋಜಿಸಲಾಗಿರುತ್ತದೆ.

ಈ ಆರ್ಟೀರಿಯಲ್ / ಸಬ್-ಆರ್ಟೀರಿಯಲ್ ರಸ್ತೆಯಲ್ಲಿ ಉಂಟಾಗುವ ರಸ್ತೆ ಗುಂಡಿಗಳನ್ನು ವೈಜ್ಞಾನಿಕವಾಗಿ ಹೊಸ ತಂತ್ರಜ್ಞಾನವನ್ನು ಅಳವಡಿಸಿ ಸ್ವಯಂಚಾಲಿತ ಯಂತ್ರಗಳ ಮೂಲಕ ಮುಚ್ಚಲು ಹಾಗೂ ಒಂದು ವರ್ಷಗಳ ಮಟ್ಟಿಗೆ ನಿರ್ವಹಣೆ ಮಾಡಲು **Expression of Interest-cum-RFP** ಅನ್ನು ಕರೆಯಲಾಗಿರುತ್ತದೆ. ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 8 ವಲಯಗಳ ಆರ್ಟೀರಿಯಲ್ / ಸಬ್-ಆರ್ಟೀರಿಯಲ್ ರಸ್ತೆಗಳನ್ನು 6 ಪ್ಯಾಕೇಜ್‌ಗಳನ್ನಾಗಿ ವಿಂಗಡಿಸಿ 1 ವರ್ಷದ ಮಟ್ಟಿಗೆ ಆಯಾ ಪ್ಯಾಕೇಜ್‌ಗಳ ಅಡಿಯಲ್ಲಿ ರಸ್ತೆಗಳನ್ನು ನಿರ್ವಹಣೆ, ಅಂದರೆ **pothole filling** ಮಾಡಲು **RFP** ಅನ್ನು ಸಿದ್ಧಪಡಿಸಿ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲಾಗಿತ್ತು.

ಮೇಲಿನ ಟೆಂಡರ್ ಪ್ರಕಟಣೆಯು ರಾಜ್ಯ ಮಟ್ಟದ ಆಂಗ್ಲ ದೈನಿಕ ಮತ್ತು ಕನ್ನಡ ದೈನಿಕ ಪತ್ರಿಕೆಗಳಲ್ಲಿ, ಜಿಲ್ಲಾ ಟೆಂಡರ್ ಬುಲೆಟಿನ್ ಹಾಗೂ ರಾಜ್ಯ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲಾಗಿರುತ್ತದೆ.

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಎರಡು ಸಂಸ್ಥೆಗಳು ಭಾಗವಹಿಸಿದ್ದು, ಇವರ ತಾಂತ್ರಿಕ ಬಿಡ್‌ಗಳನ್ನು ಕಾರ್ಯನಿರ್ವಾಹಕ ಅಭಿಯಂತರರವರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತೆರೆದಿರುತ್ತಾರೆ. ಟೆಂಡರ್ ಪರಿಶೀಲನೆಯ ನಂತರ ಒಟ್ಟಾರೆ ಬಂದಿದ್ದ 2 ಬಿಡ್‌ದಾರರಲ್ಲಿ ಇಬ್ಬರು ಅರ್ಹರಿದ್ದು, ಸದರಿ ಬಿಡ್‌ದಾರರ ಆರ್ಥಿಕ ಬಿಡ್‌ಗಳ ವಿವರ ಈ ಕೆಳಕಂಡಂತಿದೆ:

| Sl. No. | Item Name | Qty | Unit | M/s. American Road Technology & Solutions Pvt. Ltd. | | M/s. PJB Engineers Pvt. Ltd. | |
|---|---|---|---|---|---|---|---|
| | | | | Rate quoted | Amount | Rate quoted | Amount |
| 1 | Filling of Potholes and Patch repairs with Bituminous concrete using 60/70 grade Bitumen with removal of all failed materials, cleaning of surface, applying tack coat, compacting and finishing the surface to form a smooth continuous surface and filling of cracks with Bituminous Emulsion using POTHOLE FILLING MACHINE AS SPECIFIED IN SECTION '5' - TERMS OF REFERENCE INDICATED IN THE RFP DOCUMENT UPLOADED IN THE E-PORTAL (inclusive of all Taxes applicable)-FOR PACKAGE 'B'-310 KMS | 310 | KMS | 95,000/- | 29450000.00 | 102500/- | 31775000.00 |

......................2

ಮೇಲಿನ ಬಿಡ್‌ದಾರರಲ್ಲಿ ಕನಿಷ್ಠ ಮೊತ್ತ ನಮೂದಿಸಿರುವ ಮೆ॥ ಅಮೇರಿಕನ್ ರೋಡ್ ಟೆಕ್ನಾಲಜಿ & ಸಲ್ಯೂಶನ್ಸ್ ಪ್ರೈ. ಲಿ. ರವರು ಟೆಂಡರ್ ಮೊತ್ತ ರೂ.2,94,50,000.00 (ರೂ. ಎರಡು ಕೋಟಿ ತೊಂಭತ್ನಾಲ್ಕು ಲಕ್ಷದ ಐವತ್ತು ಸಾವಿರಗಳು ಮಾತ್ರ) ಗಳನ್ನು ನಮೂದಿಸಿರುತ್ತಾರೆ. ಈ ಮೊತ್ತವು ದುಬಾರಿ ಮೊತ್ತವೆಂದು ಕಂಡು ಬಂದ ಹಿನ್ನಲೆಯಲ್ಲಿ ಸದರಿ ಸಂಸ್ಥೆಯೊಂದಿಗೆ ಸಂಧಾನ ನಡೆಸಲಾಗಿ, ಅಂತಿಮವಾಗಿ ಸಂಧಾನದ ದರ ರೂ.93,000/- ನೀಡಿದ್ದು, ಅದರಂತೆ ಒಟ್ಟು ಸಂಧಾನಿತ ಮೊತ್ತ ರೂ.2,88,30,000.00 (ರೂ. ಎರಡು ಕೋಟಿ ಎಂಭತ್ತೆಂಟು ಲಕ್ಷದ ಮೂವತ್ತು ಸಾವಿರಗಳು ಮಾತ್ರ) ಗಳಿಗೆ ಆಗುತ್ತದೆ. ವಿವರಗಳು ಕೆಳಕಂಡಂತಿದೆ;

| Sl. No. | Item Name | Qty | Unit | Negotiated offer as per letter dated:08-02-2013 of M/s. American Road Technology & Solutions Pvt. Ltd. | |
|---|---|---|---|---|---|
| | | | | Negotiated Rate | Amount |
| 1 | Filling of Potholes and Patch repairs with Bituminous concrete using 60/70 grade Bitumen with removal of all failed materials, cleaning of surface, applying tack coat, compacting and finishing the surface to form a smooth continuous surface and filling of cracks with Bituminous Emulsion using POTHOLE FILLING MACHINE AS SPECIFIED IN SECTION '5' - TERMS OF REFERENCE INDICATED IN THE RFP DOCUMENT UPLOADED IN THE E-PORTAL (inclusive of all Taxes applicable)-FOR PACKAGE 'B'-310 KMS | 310 | KMS | 93,000/- | 28830000.00 |

ಬೆಂಗಳೂರು ನಗರದ ರಸ್ತೆಗಳ ಗುಂಡಿಗಳನ್ನು ಪ್ರತಿವರ್ಷವೂ ಮುಚ್ಚಿ ನಿರ್ವಹಣೆ ಮಾಡುವುದು ಒಂದು ಪ್ರಮುಖ ಜವಾಬ್ದಾರಿಯಾಗಿದ್ದು, ಇದನ್ನು ಸಮರ್ಥ ರೀತಿಯಲ್ಲಿ ಮತ್ತು ಹೊಸ ತಾಂತ್ರಿಕತೆಯನ್ನು ಉಪಯೋಗಿಸಿಕೊಂಡು ವಾರ್ಷಿಕ ಗುತ್ತಿಗೆ ನೀಡುವುದರಿಂದ ಪಾಲಿಕೆಗೆ ಆಗಾಗ್ಗೆ ಆಗುವ ಆರ್ಥಿಕ ನಷ್ಟವನ್ನು ಉಳಿತಾಯ ಮಾಡಿದಂತಾಗುತ್ತದೆ. ಆಗಾಗ್ಗೆ ಗುಂಡಿ ಮುಚ್ಚುವ ಕಾರ್ಯಕ್ಕೆ ವೆಚ್ಚ ಮಾಡುವುದನ್ನು ತಡೆಗಟ್ಟಿ ಶಿಸ್ತುಬದ್ಧವಾಗಿ ಪುನರಾವರ್ತನೆಯಾಗದಂತೆ ಮಾಡುವಲ್ಲಿ ಈ ಪದ್ಧತಿಯು ಅನುಕೂಲಕರವಾಗಿದೆ.

ಈ ಮೇರೆಗೆ ಸದರಿ ರಸ್ತೆ ಗುಂಡಿ ಮುಚ್ಚುವ ವಾರ್ಷಿಕ ಗುತ್ತಿಗೆಯನ್ನು ಕನಿಷ್ಠ ಮೊತ್ತ ನಮೂದಿಸಿರುವ ಮೆ॥ ಅಮೇರಿಕನ್ ರೋಡ್ ಟೆಕ್ನಾಲಜಿ & ಸಲ್ಯೂಶನ್ಸ್ ಪ್ರೈ.ಲಿ. ರವರಿಗೆ ಸಂಧಾನಿತ ದರ ರೂ.93,000/- ಗಳನ್ನು ಪ್ರತಿ ಕಿ.ಮೀ.ಗೆ ನೀಡಲು, ಅದರಂತೆ ಒಟ್ಟು 310 ಕಿ.ಮೀ. ರಸ್ತೆಯ ಪ್ಯಾಕೇಜ್ ಮೊತ್ತ ರೂ.2,88,30,000.00 (ರೂ. ಎರಡು ಕೋಟಿ ಎಂಭತ್ತೆಂಟು ಲಕ್ಷದ ಮೂವತ್ತು ಸಾವಿರಗಳು ಮಾತ್ರ) ಗಳಿಗೆ ನೀಡುವ ಬಗ್ಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:26-02-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13-03-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13-03-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

.........................3

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 13-03-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 11 (453)/2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 10,000 ಕಿ.ಮೀ. ಉದ್ದದ ರಸ್ತೆಗಳು ಇದ್ದು, ಇವುಗಳ ಪೈಕಿ ಸುಮಾರು 2000 ಕಿ.ಮೀ. ಉದ್ದದ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳು ಇರುತ್ತವೆ. ಈ ರಸ್ತೆಗಳ ಗುಂಡಿಗಳನ್ನು ಹೊಸ ತಾಂತ್ರಿಕತೆಯ ಸ್ವಯಂಚಾಲಿತ ಯಂತ್ರಗಳ ಮೂಲಕ ದುರಸ್ಥಿಗೊಳಿಸಲು ದಿನಾಂಕ:28-09-2012 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನವಾಗಿರುತ್ತದೆ. ಸದರಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಗಿದ್ದು, ಪಾಲಿಕೆ ವ್ಯಾಪ್ತಿಯ ಆರ್ಟೀರಿಯಲ್ / ಸಬ್-ಆರ್ಟೀರಿಯಲ್ ರಸ್ತೆಗಳ (923 ಕಿ.ಮೀ. ಉದ್ದದ ಆರ್ಟೀರಿಯಲ್ ಮತ್ತು 1017 ಕಿ.ಮೀ. ಉದ್ದದ ಸಬ್-ಆರ್ಟೀರಿಯಲ್) ರಸ್ತೆಗಳ ಗುಂಡಿಗಳನ್ನು ವೈಜ್ಞಾನಿಕ ರೀತಿಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿ ಸ್ವಯಂಚಾಲಿತ ಯಂತ್ರಗಳ ಮೂಲಕ ಮುಚ್ಚಿ ಒಂದು ವರ್ಷದ ಅವಧಿಗೆ ನಿರ್ವಹಣೆ ಮಾಡಲು ಯೋಜಿಸಲಾಗಿರುತ್ತದೆ.

ಈ ಆರ್ಟೀರಿಯಲ್ / ಸಬ್-ಆರ್ಟೀರಿಯಲ್ ರಸ್ತೆಯಲ್ಲಿ ಉಂಟಾಗುವ ರಸ್ತೆ ಗುಂಡಿಗಳನ್ನು ವೈಜ್ಞಾನಿಕವಾಗಿ ಹೊಸ ತಂತ್ರಜ್ಞಾನವನ್ನು ಅಳವಡಿಸಿ ಸ್ವಯಂಚಾಲಿತ ಯಂತ್ರಗಳ ಮೂಲಕ ಮುಚ್ಚಲು ಹಾಗೂ ಒಂದು ವರ್ಷಗಳ ಮಟ್ಟಿಗೆ ನಿರ್ವಹಣೆ ಮಾಡಲು **Expression of Interest-cum-RFP** ಅನ್ನು ಕರೆಯಲಾಗಿರುತ್ತದೆ. ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 8 ವಲಯಗಳ ಆರ್ಟೀರಿಯಲ್ / ಸಬ್-ಆರ್ಟೀರಿಯಲ್ ರಸ್ತೆಗಳನ್ನು 6 ಪ್ಯಾಕೇಜ್‌ಗಳನ್ನಾಗಿ ವಿಂಗಡಿಸಿ 1 ವರ್ಷದ ಮಟ್ಟಿಗೆ ಆಯಾ ಪ್ಯಾಕೇಜ್‌ಗಳ ಅಡಿಯಲ್ಲಿ ರಸ್ತೆಗಳನ್ನು ನಿರ್ವಹಣೆ, ಅಂದರೆ **pothole filling** ಮಾಡಲು **RFP** ಅನ್ನು ಸಿದ್ಧಪಡಿಸಿ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲಾಗಿತ್ತು.

ಮೇಲಿನ ಟೆಂಡರ್ ಪ್ರಕಟಣೆಯು ರಾಜ್ಯ ಮಟ್ಟದ ಆಂಗ್ಲ ದೈನಿಕ ಮತ್ತು ಕನ್ನಡ ದೈನಿಕ ಪತ್ರಿಕೆಗಳಲ್ಲಿ, ಜಿಲ್ಲಾ ಟೆಂಡರ್ ಬುಲೆಟಿನ್ ಹಾಗೂ ರಾಜ್ಯ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲಾಗಿರುತ್ತದೆ.

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಎರಡು ಸಂಸ್ಥೆಗಳು ಭಾಗವಹಿಸಿದ್ದು, ಇವರ ತಾಂತ್ರಿಕ ಬಿಡ್‌ಗಳನ್ನು ಕಾರ್ಯನಿರ್ವಾಹಕ ಅಭಿಯಂತರರವರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತೆರೆದಿರುತ್ತಾರೆ. ಟೆಂಡರ್ ಪರಿಶೀಲನೆಯ ನಂತರ ಒಟ್ಟಾರೆ ಬಂದಿದ್ದ 2 ಬಿಡ್‌ದಾರರಲ್ಲಿ ಇಬ್ಬರು ಅರ್ಹರಿದ್ದು, ಸದರಿ ಬಿಡ್‌ದಾರರ ಆರ್ಥಿಕ ಬಿಡ್‌ಗಳ ವಿವರ ಈ ಕೆಳಕಂಡಂತಿದೆ;

| Sl. No. | Item Name | Qty | Unit | M/s. American Road Technology & Solutions Pvt. Ltd. | | M/s. PJB Engineers Pvt. Ltd. | |
|---|---|---|---|---|---|---|---|
| | | | | Rate quoted | Amount | Rate quoted | Amount |
| 1 | Filling of Potholes and Patch repairs with Bituminous concrete using 60/70 grade Bitumen with removal of all failed materials, cleaning of surface, applying tack coat, compacting and finishing the surface to form a smooth continuous surface and filling of cracks with Bituminous Emulsion using POTHOLE FILLING MACHINE AS SPECIFIED IN SECTION '5' - TERMS OF REFERENCE INDICATED IN THE RFP DOCUMENT UPLOADED IN THE E-PORTAL (inclusive of all Taxes applicable)-FOR PACKAGE 'F'-265 KMS | 265 | KMS | 95,000/- | 25175000.00 | 101600/- | 26924000.00 |

......................2

ಮೇಲಿನ ಬಿಡ್‌ದಾರರಲ್ಲಿ ಕನಿಷ್ಠ ಮೊತ್ತ ನಮೂದಿಸಿರುವ ಮೆ॥ ಅಮೇರಿಕನ್ ರೋಡ್ ಟೆಕ್ನಾಲಜಿ & ಸಲ್ಯೂಶನ್ಸ್ ಪ್ರೈ. ಲಿ. ರವರು ಟೆಂಡರ್ ಮೊತ್ತ ರೂ.2,51,75,000.00 (ರೂ. ಎರಡು ಕೋಟಿ ಐವತ್ತೊಂದು ಲಕ್ಷದ ಎಪ್ಪತ್ತೈದು ಸಾವಿರಗಳು ಮಾತ್ರ) ಗಳನ್ನು ನಮೂದಿಸಿರುತ್ತಾರೆ. ಈ ಮೊತ್ತವು ದುಬಾರಿ ಮೊತ್ತವೆಂದು ಕಂಡು ಬಂದ ಹಿನ್ನಲೆಯಲ್ಲಿ ಸದರಿ ಸಂಸ್ಥೆಯೊಂದಿಗೆ ಸಂಧಾನ ನಡೆಸಲಾಗಿ, ಅಂತಿಮವಾಗಿ ಸಂಧಾನದ ದರ ರೂ.94,000/- ನೀಡಿದ್ದು, ಅದರಂತೆ ಒಟ್ಟು ಸಂಧಾನಿತ ಮೊತ್ತ ರೂ.2,49,10,000 (ರೂ. ಎರಡು ಕೋಟಿ ನಲವತ್ತೊಂಭತ್ತು ಲಕ್ಷದ ಹತ್ತು ಸಾವಿರಗಳು ಮಾತ್ರ) ಗಳಿಗೆ ಆಗುತ್ತುದೆ. ವಿವರಗಳು ಕೆಳಕಂಡಂತಿದೆ;

| Sl. No. | Item Name | Qty | Unit | Negotiated offer as per letter dated:08-02-2013 of M/s. American Road Technology & Solutions Pvt. Ltd. | |
|---|---|---|---|---|---|
| | | | | Negotiated Rate | Amount |
| 1 | Filling of Potholes and Patch repairs with Bituminous concrete using 60/70 grade Bitumen with removal of all failed materials, cleaning of surface, applying tack coat, compacting and finishing the surface to form a smooth continuous surface and filling of cracks with Bituminous Emulsion using POTHOLE FILLING MACHINE AS SPECIFIED IN SECTION '5' - TERMS OF REFERENCE INDICATED IN THE RFP DOCUMENT UPLOADED IN THE E-PORTAL (inclusive of all Taxes applicable)-FOR PACKAGE 'F'-265 KMS | 265 | KMS | 94,000/- | 24910000.00 |

ಬೆಂಗಳೂರು ನಗರದ ರಸ್ತೆಗಳ ಗುಂಡಿಗಳನ್ನು ಪ್ರತಿವರ್ಷವೂ ಮುಚ್ಚಿ ನಿರ್ವಹಣೆ ಮಾಡುವುದು ಒಂದು ಪ್ರಮುಖ ಜವಾಬ್ದಾರಿಯಾಗಿದ್ದು, ಇದನ್ನು ಸಮರ್ಥ ರೀತಿಯಲ್ಲಿ ಮತ್ತು ಹೊಸ ತಾಂತ್ರಿಕತೆಯನ್ನು ಉಪಯೋಗಿಸಿಕೊಂಡು ವಾರ್ಷಿಕ ಗುತ್ತಿಗೆ ನೀಡುವುದರಿಂದ ಪಾಲಿಕೆಗೆ ಆಗಾಗ್ಗೆ ಆಗುವ ಆರ್ಥಿಕ ನಷ್ಟವನ್ನು ಉಳಿತಾಯ ಮಾಡಿದಂತಾಗುತ್ತದೆ. ಆಗಾಗ್ಗೆ ಗುಂಡಿ ಮುಚ್ಚುವ ಕಾರ್ಯಕ್ಕೆ ವೆಚ್ಚ ಮಾಡುವುದನ್ನು ತಡೆಗಟ್ಟಿ ಶಿಸ್ತುಬದ್ಧವಾಗಿ ಪುನರಾವರ್ತನೆಯಾಗದಂತೆ ಮಾಡುವಲ್ಲಿ ಈ ಪದ್ಧತಿಯು ಅನುಕೂಲಕರವಾಗಿದೆ.

ಈ ಮೇರೆಗೆ ಸದರಿ ರಸ್ತೆ ಗುಂಡಿ ಮುಚ್ಚುವ ವಾರ್ಷಿಕ ಗುತ್ತಿಗೆಯನ್ನು ಕನಿಷ್ಠ ಮೊತ್ತ ನಮೂದಿಸಿರುವ ಮೆ॥ ಅಮೆರಿಕನ್ ರೋಡ್ ಟೆಕ್ನಾಲಜಿ & ಸಲ್ಯೂಶನ್ಸ್ ಪ್ರೈ.ಲಿ. ರವರಿಗೆ ಸಂಧಾನಿತ ದರ ರೂ.94,000/- ಗಳನ್ನು ಪ್ರತಿ ಕಿ.ಮೀ.ಗೆ ನೀಡಲು, ಅದರಂತೆ ಒಟ್ಟು 265 ಕಿ.ಮೀ. ರಸ್ತೆಯ ಪ್ಯಾಕೇಜ್ ಮೊತ್ತ ರೂ.2,49,10,000.00 (ರೂ. ಎರಡು ಕೋಟಿ ನಲವತ್ತೊಂಭತ್ತು ಲಕ್ಷದ ಹತ್ತು ಸಾವಿರಗಳು ಮಾತ್ರ) ಗಳಿಗೆ ನೀಡುವ ಬಗ್ಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:26-02-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13-03-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13-03-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 13–03–2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 12 (454)/2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಗೋರಿಪಾಳ್ಯ ಹತ್ತಿರವಿರುವ ನರಸಿಂಹಯ್ಯ ಕಾಂಪೌಂಡ್ ಬಳಿ ರೈಲ್ವೆ ಕಿ.ಮೀ. 2/800-900 ಬಳಿ ನೈರುತ್ಯ ರೈಲ್ವೆ ಇಲಾಖೆ ಹಾಗೂ ಪಾಲಿಕೆ ವತಿಯಿಂದ ಜಂಟಿಯಾಗಿ ಠೇವಣಿ ಕೊಡುಗೆ ಆಧಾರದಲ್ಲಿ **(Deposit Contribution)** ರಸ್ತೆ ಕೆಳಸೇತುವೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿರುತ್ತದೆ. ಈ ಮೇರೆಗೆ ಸದರಿ ಯೋಜನೆಯನ್ನು ರೈಲ್ವೆ ನಿಯಮಾವಳಿಗನುಗುಣವಾಗಿ ಡಿ.ಪಿ.ಆರ್ ತಯಾರಿಸಿ ಜಿ.ಎ.ಡಿ. ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ.

ಸದರಿ ಅಂದಾಜು ಪಟ್ಟಿಯು ರೈಲ್ವೆ ಇಲಾಖೆಯಿಂದ ನಿರ್ಮಿಸಬೇಕಾದ ಆರ್.ಸಿ.ಸಿ ಬಾಕ್ಸ್ ಕಾಮಗಾರಿ ಮತ್ತು ಪಾಲಿಕೆ ವತಿಯಿಂದ ಕೈಗೊಳ್ಳಬೇಕಾದ ಕಾಮಗಾರಿಗಳಾದ ಅಪ್ರೋಚ್ ರಸ್ತೆ ನಿರ್ಮಾಣ, ಸರ್ವೀಸ್ ರಸ್ತೆ ನಿರ್ಮಾಣ, ಅವಶ್ಯವಿರುವ ಖಾಸಗಿ ಸ್ವತ್ತುಗಳ ಭೂ ಪರಿಹಾರದ ಮೊತ್ತ, ಮೂಲಭೂತ ಸೌಕರ್ಯಗಳ ಸ್ಥಳಾಂತರಕ್ಕೆ ಹೆಚ್ಚುವರಿ ಅನುದಾನ ಹಾಗೂ ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡಿದ್ದು, ಅಂದಾಜು ಮೊತ್ತವು ರೂ.11.55 ಕೋಟಿಗಳಾಗಿರುತ್ತದೆ.

ಸದರಿ ಅಂಶಗಳ ಯೋಜನೆಯನ್ನು ಕಾರ್ಯಗತಗೊಳಿಸಲು ಸುಮಾರು 3113.73 ಚ.ಮೀ. (33504 ಚ.ಅಡಿ) ಗಳನ್ನು ಖಾಸಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದ್ದು, ಪಾಲಿಕೆ ಸಭೆಯು ವಿಷಯ ಸಂಖ್ಯೆ:128(125)/2012-13 ರಲ್ಲಿ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲು ಅನುಮೋದನೆ ನೀಡಿರುತ್ತದೆ.

ಸದರಿ ಯೋಜನೆಯ ಅಂದಾಜು ಪಟ್ಟಿಯ ಮೊತ್ತವನ್ನು ಪಾಲಿಕೆಯ 2012-13ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ:151ರ ಲೆಕ್ಕಶೀರ್ಷಿಕೆ ಪಿ-2108ರ ಗಂಗಮ್ಮ ಲೇಔಟ್, ನರಸಿಂಹಯ್ಯ ಕಾಂಪೌಂಡ್ ಕೆಳಸೇತುವೆ ನಿರ್ಮಾಣ ಕಾಮಗಾರಿಗೆ ಮೀಸಲಿಟ್ಟಿರುವ ರೂ.400.00 ಲಕ್ಷಗಳ ಅನುದಾನದಲ್ಲಿ ಭರಿಸಬಹುದಾಗಿದೆ.

ಈ ಮೇರೆಗೆ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. ಸದರಿ ಯೋಜನೆಯನ್ನು ಠೇವಣಿ ಆಧಾರದ ಮೇಲೆ ನಿರ್ವಹಿಸಲು ಅನುಮೋದನೆ.

2. ಠೇವಣಿ ಆಧಾರದ ಮೇಲೆ ರೈಲ್ವೆ ಇಲಾಖೆಯಿಂದ ಕೈಗೊಳ್ಳಬೇಕಾಗಿರುವ ಆರ್.ಸಿ.ಸಿ ಬಾಕ್ಸ್ ಕಾಮಗಾರಿಯ ಮೊತ್ತವಾದ ರೂ.1.93 ಕೋಟಿಗಳಿಗೆ ಅನುಮೋದನೆ ಹಾಗೂ ಪಾಲಿಕೆ ವತಿಯಿಂದ ಕೈಗೊಳ್ಳಬೇಕಾದ ಅಪ್ರೋಚ್ ರಸ್ತೆ ಹಾಗೂ ಸರ್ವೀಸ್ ರಸ್ತೆ ನಿರ್ಮಾಣ, ಸದರಿ ರಸ್ತೆಗಳನ್ನು ನಿರ್ಮಿಸಲು ಅವಶ್ಯವಿರುವ ಭೂ ಪರಿಹಾರ, ಮೂಲಭೂತ ಸೌಕರ್ಯಗಳನ್ನು ಸ್ಥಳಾಂತರಿಸುವ ವೆಚ್ಚ ಮತ್ತು ವಿದ್ಯುದ್ಧೀಕರಣ ಕಾಮಗಾರಿಗಳಿಗಾಗಿ ಅವಕಾಶ ಕಲ್ಪಿಸಲಾದ ಮೊತ್ತವಾದ ರೂ.9.62 ಕೋಟಿ, ಹೀಗೆ ಒಟ್ಟಾರೆ ಯೋಜನೆಯ ಅಂದಾಜು ಮೊತ್ತವಾದ ರೂ.11.55 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ.

3. ಸರ್ವೀಸ್ ರಸ್ತೆ ನಿರ್ಮಾಣಕ್ಕೆ ಅವಶ್ಯವಿರುವ ಸುಮಾರು 3113.73 ಚ.ಮೀ. ಖಾಸಗಿ ಸ್ವತ್ತುಗಳಿಗೆ ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಅನುಮೋದನೆ.

4. ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ.

.........................2

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 13 (455)/2012-13

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಮಾಳಗಾಳು ಗ್ರಾಮದ ಸರ್ವೆ ನಂ. 52 ರ 34 ಎಕರೆ 33 ಗುಂಟೆ ಪ್ರದೇಶದಲ್ಲಿ 618 ನಿವೇಶನಗಳನ್ನಾಗಿ ವಿಂಗಡಿಸಿ (ಪಂಚಶೀಲಾನಗರ, ಹಳೇ ವಾರ್ಡ್ ಸಂಖ್ಯೆ:37 ಮತ್ತು 38 ಹಾಲಿ ವಾರ್ಡ್ ಸಂಖ್ಯೆ:127), 1974 ರಲ್ಲಿ 25ನೇ ವರ್ಷದ ಸ್ವಾತಂತ್ರೋತ್ಸವದ ಅಂಗವಾಗಿ ಫಲಾನುಭವಿಗಳಿಗೆ ಷರತ್ತು ನಿಬಂಧನೆಗಳನ್ನು ವಿಧಿಸಿ, ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್ ರವರು ಹಕ್ಕು ಪತ್ರಗಳನ್ನು ಹಂಚಿಕೆ ಮಾಡಿರುತ್ತಾರೆ.

1985 ನೇ ಇಸವಿಯಲ್ಲಿ ಸರ್ವೆ ನಂ. 52 ನ್ನು ಬಿಡಿಎ ರವರು ಭೂಸ್ವಾಧೀನ ಪಡಿಸಿಕೊಂಡಿರುತ್ತಾರೆ. ನಂತರ ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು ರವರು ದಿನಾಂಕ 25.5.1998 ರಲ್ಲಿ ಸರ್ವೆ ನಂ. 52 ರಲ್ಲಿ ನೀಡಿದ್ದ ಹಕ್ಕು ಪತ್ರಗಳನ್ನು ರದ್ದು ಪಡಿಸಿರುತ್ತಾರೆ.

ತಹಶೀಲ್ದಾರ್ ರವರ ಕ್ರಮದ ವಿರುದ್ಧ, ಪಂಚಶೀಲ ನಗರ ನಿವಾಸಿಗಳು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, (WP No. 2816/1998), ನ್ಯಾಯಾಲಯ ತಹಶೀಲ್ದಾರರು ನೀಡಿದ್ದ ಹಕ್ಕು ಪತ್ರ ರದ್ದು ಪಡಿಸುವ ಆದೇಶವನ್ನು ರದ್ದುಗೊಳಿಸಿರುತ್ತಾರೆ. (ನ್ಯಾಯಾಲಯದ ಆದೇಶ ದಿನಾಂಕ 27.6.1999).

ಸದರಿ ಪ್ರದೇಶವು ಮಹಾನಗರ ಪಾಲಿಕೆಗೆ ದಿನಾಂಕ 01.10.1995 ರಲ್ಲಿ ಹಸ್ತಾಂತರವಾಗಿದ್ದು, ಪಾಲಿಕೆಯು ಈಗಾಗಲೇ ಸಾಕಷ್ಟು ಅಭಿವೃದ್ಧಿಪಡಿಸಿರುವ ಕಾರಣ ಮತ್ತು ಸದರಿ ಪ್ರದೇಶದ ನಿವಾಸಿಗಳಿಗೆ ಅನುಕೂಲ ಮಾಡುವ ಹಿತದೃಷ್ಟಿಯಿಂದ ಮೇಲ್ಪಾಟು ವೆಚ್ಚ ಪಡೆದು ಖಾತಾ ನೊಂದಾಯಿಸುವ ಕುರಿತು ಪಾಲಿಕೆ ಸಭೆ ಮುಂದೆ ಪ್ರಸ್ತಾವನೆ ಸಲ್ಲಿಸಿದ್ದರ ಹಿನ್ನಲೆಯಲ್ಲಿ ದಿನಾಂಕ:12-07-2001ರಂದು ನಡೆದ ಪಾಲಿಕೆಯ ಸಭೆಯಲ್ಲಿ ವಿಷಯದ ಸಂಖ್ಯೆ 183 ರಂತೆ ಈ ಕೆಳಕಂಡಂತೆ ನಿರ್ಣಯವಾಗಿರುತ್ತದೆ.

> "ವಾರ್ಡ್-37, ಪಂಚಶೀಲನಗರದಲ್ಲಿ ಸುಮಾರು 27 ವರ್ಷಗಳಿಂದ ವಾಸಿಸುತ್ತಿರುವ 618 ನಿವಾಸಿಗಳಿರುವ ಪ್ರದೇಶವನ್ನು ಪಾಲಿಕೆಯು ಈಗಾಗಲೇ ಸಾಕಷ್ಟು ಅಭಿವೃದ್ಧಿಪಡಿಸಿರುವ ಕಾರಣ, ಹಾಲಿ ವಾಸಿಸುತ್ತಿರುವ ನಿವಾಸಿಗಳಿಂದ ಸರ್ಕಾರದ ಇತ್ತೀಚಿನ ಆದೇಶದಂತೆ ಪ್ರತಿ ನಿವೇಶನಕ್ಕೆ ರೂ.500=00 ಗಳ ಮೇಲ್ಪಟ್ಟು ವೆಚ್ಚ ಪಡೆದು 15 ದಿನಗಳೊಳಗೆ ಖಾತಾ ಕಂದಾಯ ಮಾಡುವ ಬಗ್ಗೆ ಆಯುಕ್ತರು ಕ್ರಮ ಜರುಗಿಸುವುದು".

ಸದರಿ ಪ್ರದೇಶದಲ್ಲಿ ಹಕ್ಕು ಪತ್ರ ವಿತರಿಸಿರುವ ಬಗ್ಗೆ ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು ರವರ ಕಛೇರಿಯಿಂದ ಯಾವುದೇ ದಾಖಲೆಗಳು ಹಸ್ತಾಂತರವಾಗಿರುವುದಿಲ್ಲ. ಈ ಬಗ್ಗೆ ಅನೇಕ ಬಾರಿ ಪತ್ರಗಳನ್ನು ಸಹ ಬರೆದಿದ್ದರೂ, ಸಹ ದಾಖಲೆಗಳನ್ನು ನೀಡಿರುವುದಿಲ್ಲ. ಬದಲಾಗಿ ದಿನಾಂಕ 08.06.2004 ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯಿಂದ ಉಪ ಆಯುಕ್ತರು (ದಕ್ಷಿಣ) ರವರಿಗೆ ಪತ್ರ ಬರೆದಿದ್ದು, ಸದರಿ ಸ್ವತ್ತುಗಳಿಗೆ ಖಾತೆ ನೊಂದಾಯಿಸುವ ಬಗ್ಗೆ ನಿವೇಶನಗಳ ಫಲಾನುಭವಿಗಳ ಬಳಿ ಇರುವ ದಾಖಲೆಗಳನ್ನು ಪಡೆದು ಈ ಬಗ್ಗೆ ಮುಂದಿನ ಕ್ರಮ ಜರುಗಿಸಲು ಸೂಚಿಸಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಮುಂದುವರೆದಂತೆ ತಹಶೀಲ್ದಾರ್ ಕಛೇರಿಯಿಂದ ಸಹ ಪಲಾನುಭವಿಗಳ ಪಟ್ಟಿ ಇರುತ್ತದೆ. ಪಾಲಿಕೆಯ ವತಿಯಿಂದ ಜೂನ್ 2010 ನೇ ಸಾಲಿನಲ್ಲಿ ಸರ್ವೆ ಮಾಡಿಸಿ ಫಲಾನುಭವಿಗಳ ಪಟ್ಟಿ ಮಾಡಿಸಲಾಗಿದೆ. ಆ ಪಟ್ಟಿಯೂ ಸಹ ಕಡತದಲ್ಲಿ ಲಗತ್ತಿಸಿದೆ. ಆದರೆ ಈ ಎರಡು ಪಟ್ಟಿಗಳನ್ನು ಹೋಲಿಸಿದಾಗ ಬಹಳ ವ್ಯತ್ಯಾಸಗಳು

......................2

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 456 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬಾಣಸವಾಡಿ ವಾರ್ಡ್ 27ರ ವ್ಯಾಪ್ತಿಯಲ್ಲಿ 100 ಅಡಿ ರಸ್ತೆಯಲ್ಲಿ ನಾಲ್ಕು ಮುಖ್ಯ ರಸ್ತೆಗಳು ಸೇರುವ ವೃತ್ತವಿದ್ದು, ಈ ಮಾರ್ಗವಾಗಿ ಬಾಣಸವಾಡಿ ಮುಖ್ಯ ರಸ್ತೆ, ರಾಮಮೂರ್ತಿನಗರ ಮುಖ್ಯ ರಸ್ತೆ ಹಾಗೂ ಹೊರಮಾವು ಜಂಕ್ಷನ್ ಮತ್ತು ಹೊರಮಾವು ರಸ್ತೆಗಳು ಒಂದು ಕಡೆ ಸೇರುವ ವಿಶಾಲವಾದ ವೃತ್ತಕ್ಕೆ "ಶ್ರೀ ಪರಂಜ್ಯೋತಿ ವೇಮನ ವೃತ್ತ" ಎಂದು ನಾಮಕರಣ ಮಾಡುವುದು ಹಾಗೂ ಸದರಿ ವೃತ್ತದಲ್ಲಿ "ಶ್ರೀ ಪರಂಜ್ಯೋತಿ ವೇಮನ" ರವರ ಪುತ್ಥಳಿಯನ್ನು ಸ್ಥಳೀಯರು ಪ್ರತಿಷ್ಠಾಪಿಸಲು ಅನುಮತಿ ಕೋರಿದ್ದು, ಈ ಬಗ್ಗೆ ಆಯುಕ್ತರವರು ಕ್ರಮಕೈಗೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬಾಣಸವಾಡಿ ವಾರ್ಡ್ 27ರ ವ್ಯಾಪ್ತಿಯಲ್ಲಿ 100 ಅಡಿ ರಸ್ತೆಯಲ್ಲಿ ನಾಲ್ಕು ಮುಖ್ಯ ರಸ್ತೆಗಳು ಸೇರುವ ವೃತ್ತವಿದ್ದು, ಈ ಮಾರ್ಗವಾಗಿ ಬಾಣಸವಾಡಿ ಮುಖ್ಯ ರಸ್ತೆ, ರಾಮಮೂರ್ತಿನಗರ ಮುಖ್ಯ ರಸ್ತೆ ಹಾಗೂ ಹೊರಮಾವು ಜಂಕ್ಷನ್ ಮತ್ತು ಹೊರಮಾವು ರಸ್ತೆಗಳು ಒಂದು ಕಡೆ ಸೇರುವ ವಿಶಾಲವಾದ ವೃತ್ತಕ್ಕೆ "ಶ್ರೀ ಪರಂಜ್ಯೋತಿ ವೇಮನ ವೃತ್ತ" ಎಂದು ನಾಮಕರಣ ಮಾಡುವುದು ಹಾಗೂ ಸದರಿ ವೃತ್ತದಲ್ಲಿ "ಶ್ರೀ ಪರಂಜ್ಯೋತಿ ವೇಮನ" ರವರ ಪುತ್ಥಳಿಯನ್ನು ಸ್ಥಳೀಯರು ಪ್ರತಿಷ್ಠಾಪಿಸಲು ಅನುಮತಿ ಕೋರಿದ್ದು, ಈ ಬಗ್ಗೆ ಆಯುಕ್ತರವರು ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 457 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ವಾಡ್ ಸಂಖ್ಯೆ:126, ಮಾರುತಿ ಮಂದಿರ ವ್ಯಾಪ್ತಿಯ ಕೆನರಾ ಬ್ಯಾಂಕ್ ಕಾಲೋನಿಯಲ್ಲಿರುವ ಉದ್ಯಾನವನಕ್ಕೆ ಕೆನರಾ ಬ್ಯಾಂಕ್ ಸಂಸ್ಥಾಪಕರು ಹಾಗೂ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಶ್ರೀ ಅಮ್ಮೆಮ್ಬಾಲ್ ಸುಬ್ಬರಾವ್ ಪೈ ರವರ ಹೆಸರನ್ನು ನಾಮಕರಣ ಮಾಡಲು ಆಯುಕ್ತರವರು ಕ್ರಮಕೈಗೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ವಾಡ್ ಸಂಖ್ಯೆ:126, ಮಾರುತಿ ಮಂದಿರ ವ್ಯಾಪ್ತಿಯ ಕೆನರಾ ಬ್ಯಾಂಕ್ ಕಾಲೋನಿಯಲ್ಲಿರುವ ಉದ್ಯಾನವನಕ್ಕೆ ಕೆನರಾ ಬ್ಯಾಂಕ್ ಸಂಸ್ಥಾಪಕರು ಹಾಗೂ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಶ್ರೀ ಅಮ್ಮೆಮ್ಬಾಲ್ ಸುಬ್ಬರಾವ್ ಪೈ ರವರ ಹೆಸರನ್ನು ನಾಮಕರಣ ಮಾಡಲು ಆಯುಕ್ತರವರು ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 458 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಶ್ರೀ ಕೆಂಪೇಗೌಡ ರವರ ಹೆಸರನ್ನು ನಾಮಕರಣ ಮಾಡುವ ಸಂಬಂಧ ಹಾಗೂ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 18 ಅಡಿಯ ಅಶ್ವಾರೂಢ ನಾಡಪ್ರಭು ಶ್ರೀ ಕೆಂಪೇಗೌಡರವರ ಪ್ರತಿಮೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸ್ಥಾಪಿಸಲು ಮಾನ್ಯ ಆಯುಕ್ತರವರು ಬಿ.ಐ.ಎ.ಎಲ್. ಪ್ರಾಧಿಕಾರ ಹಾಗೂ ಕೇಂದ್ರ ಸರ್ಕಾರದೊಂದಿಗೆ ವ್ಯವಹರಿಸಿ ಅಗತ್ಯ ಕ್ರಮ ಕೈಗೊಳ್ಳುವುದೆಂದು ಈ ಸಭೆಯು ತೀರ್ಮಾನಿಸಿತು ಹಾಗೂ ಶ್ರೀ ಕೆಂಪೇಗೌಡರವರ ಪ್ರತಿಮೆ ತಯಾರಿಸಲು ಮತ್ತು ಇದಕ್ಕೆ ಸಂಬಂಧಪಟ್ಟ ಕಾಮಗಾರಿಗೆ ತಗಲುವ ವೆಚ್ಚದ ಬಗ್ಗೆ ಕೂಡಲೇ ಅಂದಾಜು ಪಟ್ಟಿ ತಯಾರಿಸಿ ಪ್ರಸ್ತಾವನೆಯನ್ನು ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ಆಯುಕ್ತರು ಕ್ರಮಕೈಗೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಶ್ರೀ ಕೆಂಪೇಗೌಡ ರವರ ಹೆಸರನ್ನು ನಾಮಕರಣ ಮಾಡುವ ಸಂಬಂಧ ಹಾಗೂ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 18 ಅಡಿಯ ಅಶ್ವಾರೂಢ ನಾಡಪ್ರಭು ಶ್ರೀ ಕೆಂಪೇಗೌಡರವರ ಪ್ರತಿಮೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸ್ಥಾಪಿಸಲು ಮಾನ್ಯ ಆಯುಕ್ತರವರು ಬಿ.ಐ.ಎ.ಎಲ್. ಪ್ರಾಧಿಕಾರ ಹಾಗೂ ಕೇಂದ್ರ ಸರ್ಕಾರದೊಂದಿಗೆ ವ್ಯವಹರಿಸಿ ಅಗತ್ಯ ಕೈಗೊಳ್ಳುವುದೆಂದು ಈ ಸಭೆಯು ತೀರ್ಮಾನಿಸಿತು ಹಾಗೂ ಶ್ರೀ ಕೆಂಪೇಗೌಡರವರ ಪ್ರತಿಮೆ ತಯಾರಿಸಲು ಮತ್ತು ಇದಕ್ಕೆ ಸಂಬಂಧಪಟ್ಟ ಕಾಮಗಾರಿಗೆ ತಗಲುವ ವೆಚ್ಚದ ಬಗ್ಗೆ ಕೂಡಲೇ ಅಂದಾಜು ಪಟ್ಟಿ ತಯಾರಿಸಿ ಪ್ರಸ್ತಾವನೆಯನ್ನು ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ಆಯುಕ್ತರು ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 459 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಪೂಜ್ಯ ಮಹಾಪೌರರು ನೀಡುವ ವೈದ್ಯಕೀಯ ಪರಿಹಾರದ ನಿಧಿಗೆ ಈ ಕೂಡಲೇ ರೂ.2.00 ಕೋಟಿ ಹಣವನ್ನು ಬಿಡುಗಡೆ ಮಾಡಲು ಮಾನ್ಯ ಆಯುಕ್ತರವರು ಕ್ರಮ ತೆಗೆದುಕೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಪೂಜ್ಯ ಮಹಾಪೌರರು ನೀಡುವ ವೈದ್ಯಕೀಯ ಪರಿಹಾರದ ನಿಧಿಗೆ ಈ ಕೂಡಲೇ ರೂ.2.00 ಕೋಟಿ ಹಣವನ್ನು ಬಿಡುಗಡೆ ಮಾಡಲು ಮಾನ್ಯ ಆಯುಕ್ತರವರು ಕ್ರಮ ತೆಗೆದುಕೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 460 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೆಂಗಳೂರು ನಗರದ 8 ವಲಯಗಳಲ್ಲಿರುವ ರುದ್ರಭೂಮಿಗಳಲ್ಲಿ ಮರಣ ಹೊಂದಿದವರನ್ನು ಸಮಾಧಿ ಮಾಡಲು ಸ್ಥಳಗಳ ಅಭಾವವಾಗಿದ್ದು, ಇದು ಮುಂದಿನ ದಿನಗಳಲ್ಲಿ ದೊಡ್ಡ ಸಮಸ್ಯೆಯಾಗುವ ಹಿನ್ನಲೆಯಲ್ಲಿ ವಲಯ ಒಂದಕ್ಕೆ ಕನಿಷ್ಠ 10 ಎಕರೆಯಂತೆ 8 ವಲಯಗಳಲ್ಲಿ ಸ್ಥಳವನ್ನು ನೀಡುವಂತೆ ಘನ ಸರ್ಕಾರವನ್ನು ಕೋರುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೆಂಗಳೂರು ನಗರದ 8 ವಲಯಗಳಲ್ಲಿರುವ ರುದ್ರಭೂಮಿಗಳಲ್ಲಿ ಮರಣ ಹೊಂದಿದವರನ್ನು ಸಮಾಧಿ ಮಾಡಲು ಸ್ಥಳಗಳ ಅಭಾವವಾಗಿದ್ದು, ಇದು ಮುಂದಿನ ದಿನಗಳಲ್ಲಿ ದೊಡ್ಡ ಸಮಸ್ಯೆಯಾಗುವ ಹಿನ್ನಲೆಯಲ್ಲಿ ವಲಯ ಒಂದಕ್ಕೆ ಕನಿಷ್ಠ 10 ಎಕರೆಯಂತೆ 8 ವಲಯಗಳಲ್ಲಿ ಸ್ಥಳವನ್ನು ನೀಡುವಂತೆ ಘನ ಸರ್ಕಾರವನ್ನು ಕೋರುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 461 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ, ಕರ್ನಾಟಕ ಸರ್ಕಾರದ ಅನುದಾನ, ಆಯವ್ಯಯದಲ್ಲಿ ಬೆಂಗಳೂರು ನಗರದ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿಟ್ಟಿರುವ ಅನುದಾನ, ಪೂಜ್ಯ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳು, ಮಾನ್ಯ ಉಪ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮೀಸಲು ನಿಧಿಯಿಂದ ಕೈಗೊಳ್ಳುವ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಮುಖಾಂತರ ನಿರ್ವಹಿಸಲು ಆಯುಕ್ತರವರು ಕ್ರಮ ಕೈಗೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ, ಕರ್ನಾಟಕ ಸರ್ಕಾರದ ಅನುದಾನ, ಆಯವ್ಯಯದಲ್ಲಿ ಬೆಂಗಳೂರು ನಗರದ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿಟ್ಟಿರುವ ಅನುದಾನ, ಪೂಜ್ಯ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳು, ಮಾನ್ಯ ಉಪ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮೀಸಲು ನಿಧಿಯಿಂದ ಕೈಗೊಳ್ಳುವ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಮುಖಾಂತರ ನಿರ್ವಹಿಸಲು ಆಯುಕ್ತರವರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:16–03–2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

**ವಿಷಯದ ಸಂಖ್ಯೆ : 462 / 2012–13**

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೆಂಗಳೂರಿನ ಪ್ರತಿಷ್ಠಿತ ಬಸ್ ನಿಲ್ದಾಣಗಳಲ್ಲಿ ಒಂದಾದ ಕಲಾಸಿ ಪಾಳ್ಯಂ ಬಸ್ ನಿಲ್ದಾಣಕ್ಕೆ ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಮಹಾಪೌರರು, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು ಆದ ಜಿ.ನಾರಾಯಣ್ ರವರ ಹೆಸರನ್ನು ನಾಮಕರಣ ಮಾಡಲು ಆಯುಕ್ತರವರು ಕ್ರಮಕೈಗೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೆಂಗಳೂರಿನ ಪ್ರತಿಷ್ಠಿತ ಬಸ್ ನಿಲ್ದಾಣಗಳಲ್ಲಿ ಒಂದಾದ ಕಲಾಸಿ ಪಾಳ್ಯಂ ಬಸ್ ನಿಲ್ದಾಣಕ್ಕೆ ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಮಹಾಪೌರರು, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು ಆದ ಜಿ.ನಾರಾಯಣ್ ರವರ ಹೆಸರನ್ನು ನಾಮಕರಣ ಮಾಡಲು ಆಯುಕ್ತರವರು ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 463 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಶ್ರೀ ದಶವಂತ್, ಉಪ ಆಯುಕ್ತರು (ಕಂದಾಯ) (ನಿವೃತ್ತ) ಇವರನ್ನು ಹಾಲಿ ಪೂಜ್ಯ ಮಹಾಪೌರರ ಅವಧಿಗೆ ಮಾತ್ರ ನಿಯೋಜಿಸಿಕೊಳ್ಳಲು ಪಾಲಿಕೆ ಸಭೆಯಲ್ಲಿ ತೀರ್ಮಾನವಾಗಿದ್ದು, ಸದರಿ ಅವಧಿಯು ಮುಂದಿನ ಏಪ್ರಿಲ್ ತಿಂಗಳ ಅವಧಿಗೆ ಪೂರ್ಣಗೊಳ್ಳಲಿದೆ. ಸದರಿ ಅಧಿಕಾರಿರವರು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಇವರ ಸೇವೆಯು ಪಾಲಿಕೆಗೆ ಅವಶ್ಯವಾಗಿರುವ ಹಿನ್ನಲೆಯಲ್ಲಿ ಅವರನ್ನು ಒಂದು ವರ್ಷದ ಅವಧಿಗೆ ಮುಂದುವರೆಸಲು ಆಯುಕ್ತರವರು ಕ್ರಮ ಕೈಗೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಶ್ರೀ ದಶವಂತ್, ಉಪ ಆಯುಕ್ತರು (ಕಂದಾಯ) (ನಿವೃತ್ತ) ಇವರನ್ನು ಹಾಲಿ ಪೂಜ್ಯ ಮಹಾಪೌರರ ಅವಧಿಗೆ ಮಾತ್ರ ನಿಯೋಜಿಸಿಕೊಳ್ಳಲು ಪಾಲಿಕೆ ಸಭೆಯಲ್ಲಿ ತೀರ್ಮಾನವಾಗಿದ್ದು, ಸದರಿ ಅವಧಿಯು ಮುಂದಿನ ಏಪ್ರಿಲ್ ತಿಂಗಳ ಅವಧಿಗೆ ಪೂರ್ಣಗೊಳ್ಳಲಿದೆ. ಸದರಿ ಅಧಿಕಾರಿರವರು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಇವರ ಸೇವೆಯು ಪಾಲಿಕೆಗೆ ಅವಶ್ಯವಾಗಿರುವ ಹಿನ್ನಲೆಯಲ್ಲಿ ಅವರನ್ನು ಒಂದು ವರ್ಷದ ಅವಧಿಗೆ ಮುಂದುವರೆಸಲು ಆಯುಕ್ತರವರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 464 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ವಾರ್ಡ್-182, ಪದ್ಮನಾಭನಗರ ವಾರ್ಡಿನ ವ್ಯಾಪ್ತಿಯಲ್ಲಿರುವ ಕಾರ್ಮೆಲ್ ಶಾಲೆಯ ಪಕ್ಕದಲ್ಲಿರುವ ನಗರ ಪಾಲಿಕೆಯ ಆಟದ ಮೈದಾನಕ್ಕೆ "ಎಂ.ಕೆ.ಪುಟ್ಟಲಿಂಗಯ್ಯ ಆಟದ ಮೈದಾನ" ಎಂದು ನಾಮಕರಣ ಮಾಡಲು ಆಯುಕ್ತರವರು ಕ್ರಮಕೈಗೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್-182, ಪದ್ಮನಾಭನಗರ ವಾರ್ಡಿನ ವ್ಯಾಪ್ತಿಯಲ್ಲಿರುವ ಕಾರ್ಮೆಲ್ ಶಾಲೆಯ ಪಕ್ಕದಲ್ಲಿರುವ ನಗರ ಪಾಲಿಕೆಯ ಆಟದ ಮೈದಾನಕ್ಕೆ "ಎಂ.ಕೆ.ಪುಟ್ಟಲಿಂಗಯ್ಯ ಆಟದ ಮೈದಾನ" ಎಂದು ನಾಮಕರಣ ಮಾಡಲು ಆಯುಕ್ತರವರು ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 465 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಫೆಬ್ರವರಿ 2013ರ ಮಾಸಿಕ ಸಭೆಯಲ್ಲಿ ಮಾನ್ಯ ಆಯುಕ್ತರವರು ಸಭೆಗೆ ತಿಳಿಸಿರುವಂತೆ, ವಾರ್ಡ್‌ಗಳಲ್ಲಿ ಇರುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಹೊಸ ವಾರ್ಡ್‌ಗಳಿಗೆ ರೂ.30 ಲಕ್ಷಗಳು, ಹಳೆ ವಾರ್ಡ್‌ಗಳಿಗೆ ರೂ.10 ಲಕ್ಷಗಳನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದ್ದು, ಸದರಿ ಹಣವನ್ನು ಆಯಾಯ ವಾರ್ಡ್‌ಗಳಿಗೆ ಈ ಕೂಡಲೇ ಬಿಡುಗಡೆ ಮಾಡಲು ಆಯುಕ್ತರವರು ಕ್ರಮಕೈಗೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಫೆಬ್ರವರಿ 2013ರ ಮಾಸಿಕ ಸಭೆಯಲ್ಲಿ ಮಾನ್ಯ ಆಯುಕ್ತರವರು ಸಭೆಗೆ ತಿಳಿಸಿರುವಂತೆ, ವಾರ್ಡ್‌ಗಳಲ್ಲಿ ಇರುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಹೊಸ ವಾರ್ಡ್‌ಗಳಿಗೆ ರೂ.30 ಲಕ್ಷಗಳು, ಹಳೆ ವಾರ್ಡ್‌ಗಳಿಗೆ ರೂ.10 ಲಕ್ಷಗಳನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದ್ದು, ಸದರಿ ಹಣವನ್ನು ಆಯಾಯ ವಾರ್ಡ್‌ಗಳಿಗೆ ಈ ಕೂಡಲೇ ಬಿಡುಗಡೆ ಮಾಡಲು ಆಯುಕ್ತರವರು ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 466 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಕೆಂಗೇರಿ ಉಪ ನಗರದ ಯಾವುದಾದರು ಒಂದು ವೃತ್ತಕ್ಕೆ ರಾಷ್ಟ್ರಸಂತ, ಜೈನಾಚಾರ್ಯ, "ಆಚಾರ್ಯ ಶ್ರೀ ತುಳಸಿಜೀ" ರವರ ಹೆಸರನ್ನು ನಾಮಕರಣ ಮಾಡಲು ಆಯುಕ್ತರವರು ಕ್ರಮಕೈಗೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಕೆಂಗೇರಿ ಉಪ ನಗರದ ಯಾವುದಾದರು ಒಂದು ವೃತ್ತಕ್ಕೆ ರಾಷ್ಟ್ರಸಂತ, ಜೈನಾಚಾರ್ಯ, "ಆಚಾರ್ಯ ಶ್ರೀ ತುಳಸಿಜೀ" ರವರ ಹೆಸರನ್ನು ನಾಮಕರಣ ಮಾಡಲು ಆಯುಕ್ತರವರು ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 467/ 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಗೌರವಧನದ ಆಧಾರದ ಮೇಲೆ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊಲಿಗೆ ತರಬೇತಿಯ ಮೇಲ್ವಿಚಾರಕರು, ಶಿಕ್ಷಕರು ಮತ್ತು ಹೊಲಿಗೆ ಯಂತ್ರದ ದುರಸ್ಥಿಗಾರರಿಗೆ, ಹಾಲಿ ನೀಡುತ್ತಿರುವ ಗೌರವಧನಕ್ಕೆ 2013ರ ಮಾರ್ಚ್ ತಿಂಗಳಿನಿಂದ ಜಾರಿಗೆ ಬರುವಂತೆ ರೂ.1,000/- (ಒಂದು ಸಾವಿರ ರೂಪಾಯಿ ಮಾತ್ರ) ಗಳನ್ನು ಸೇರಿಸಿ ಗೌರವಧನವನ್ನು ನೀಡಲು ಆಯುಕ್ತರವರು ಕ್ರಮ ಕೈಗೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಗೌರವಧನದ ಆಧಾರದ ಮೇಲೆ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊಲಿಗೆ ತರಬೇತಿಯ ಮೇಲ್ವಿಚಾರಕರು, ಶಿಕ್ಷಕರು ಮತ್ತು ಹೊಲಿಗೆ ಯಂತ್ರದ ದುರಸ್ಥಿಗಾರರಿಗೆ, ಹಾಲಿ ನೀಡುತ್ತಿರುವ ಗೌರವಧನಕ್ಕೆ 2013ರ ಮಾರ್ಚ್ ತಿಂಗಳಿನಿಂದ ಜಾರಿಗೆ ಬರುವಂತೆ ರೂ.1,000/- (ಒಂದು ಸಾವಿರ ರೂಪಾಯಿ ಮಾತ್ರ) ಗಳನ್ನು ಸೇರಿಸಿ ಗೌರವಧನವನ್ನು ನೀಡಲು ಆಯುಕ್ತರವರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 468 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ವಾರ್ಡ್-69ರ ಈಜಿಪುರ ಕೋರಮಂಗಲ ರಸ್ತೆಯಲ್ಲಿರುವ 120x128 ಅಡಿಗಳ ಜಾಗವನ್ನು ಶ್ರೀಮತಿ.ವಸುಮತಿ ರೆಡ್ಡಿ, ಆರ್.ಆರ್. ಎಂಟರ್‌ಪ್ರೈಸಸ್ ರವರಿಗೆ ಗುತ್ತಿಗೆಗೆ ನೀಡಿದ್ದು, ಸದರಿ ಸ್ವತ್ತನ್ನು ಸದರಿ ಸಂಸ್ಥೆಯವರಿಗೆ ಕ್ರಯಕ್ಕೆ ನೀಡಲು ಆಯುಕ್ತರವರು ಕ್ರಮಕೈಗೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್-69ರ ಈಜಿಪುರ ಕೋರಮಂಗಲ ರಸ್ತೆಯಲ್ಲಿರುವ 120x128 ಅಡಿಗಳ ಜಾಗವನ್ನು ಶ್ರೀಮತಿ.ವಸುಮತಿ ರೆಡ್ಡಿ, ಆರ್.ಆರ್. ಎಂಟರ್‌ಪ್ರೈಸಸ್ ರವರಿಗೆ ಗುತ್ತಿಗೆಗೆ ನೀಡಿದ್ದು, ಸದರಿ ಸ್ವತ್ತನ್ನು ಸದರಿ ಸಂಸ್ಥೆಯವರಿಗೆ ಕ್ರಯಕ್ಕೆ ನೀಡಲು ಆಯುಕ್ತರವರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 469 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಗಿರಿನಗರ ವಾರ್ಡ್-162ರ ವ್ಯಾಪ್ತಿಯಲ್ಲಿರುವ ಬನಶಂಕರಿ 3ನೇ ಹಂತ, 2ನೇ ಘಟ್ಟ, 7ನೇ ಬ್ಲಾಕ್, 1ನೇ ಬಿ ಮುಖ್ಯರಸ್ತೆಯಲ್ಲಿರುವ ಉದ್ಯಾನವನಕ್ಕೆ ಪ್ರೋ॥ ಡಿ.ಲಿಂಗಯ್ಯ ಉದ್ಯಾನವನ ಎಂದು ನಾಮಕರಣ ಮಾಡಲು ಆಯುಕ್ತರವರು ಕ್ರಮಕೈಗೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಗಿರಿನಗರ ವಾರ್ಡ್-162ರ ವ್ಯಾಪ್ತಿಯಲ್ಲಿರುವ ಬನಶಂಕರಿ 3ನೇ ಹಂತ, 2ನೇ ಘಟ್ಟ, 7ನೇ ಬ್ಲಾಕ್, 1ನೇ ಬಿ ಮುಖ್ಯರಸ್ತೆಯಲ್ಲಿರುವ ಉದ್ಯಾನವನಕ್ಕೆ ಪ್ರೋ॥ ಡಿ.ಲಿಂಗಯ್ಯ ಉದ್ಯಾನವನ ಎಂದು ನಾಮಕರಣ ಮಾಡಲು ಆಯುಕ್ತರವರು ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 470/ 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಶ್ರೀ. ಕೆ.ಎಸ್.ನಾಗರಾಜ್ ರವರನ್ನು ಪೂಜ್ಯ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಲು ಆಯುಕ್ತರು ಕ್ರಮಕೈಗೊಳ್ಳುವುದು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಶ್ರೀ. ಕೆ.ಎಸ್.ನಾಗರಾಜ್ ರವರನ್ನು ಪೂಜ್ಯ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಲು ಆಯುಕ್ತರು ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 05 (416)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯದ ಪೈಕಿ ಪ್ರತಿ ದಿನ 600 ಮೆ.ಟನ್ ಘನತ್ಯಾಜ್ಯವನ್ನು ಸ್ವೀಕರಿಸಿ ಸಂಸ್ಕರಿಸುವ ಘಟಕವನ್ನು ಬಿ.ಓ.ಓ.ಟಿ ಆಧಾರದಲ್ಲಿ ಸ್ಥಾಪಿಸಲು ಪಾಲಿಕೆಯು ಮೆ|| ರಾಮ್ಕಿ ಎನರ್ಜಿ ಅಂಡ್ ಎನವಿರಾನಮೆಂಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ದಿನಾಂಕ: 11-08-2004 ರಲ್ಲಿ ಕರಾರನ್ನು ಮಾಡಿಕೊಂಡಿದ್ದು, ಅದರಂತೆ ಮಾವಳ್ಳಿಪುರ ಸರ್ವೆ ನಂ.08ರ ಪಾಲಿಕೆಯ ಜಾಗದಲ್ಲಿ ಘನತ್ಯಾಜ್ಯದಿಂದ ಗೊಬ್ಬರ ತಯಾರಿಸುವ ಘಟಕವನ್ನು ಸದರಿ ಮೆ|| ರಾಮ್ಕಿ ಎನರ್ಜಿ ಅಂಡ್ ಎನವಿರಾನಮೆಂಟ್ ಲಿಮಿಟೆಡ್ ಸಂಸ್ಥೆಯವರು 29-01-2007ರಲ್ಲಿ ಸ್ಥಾಪಿಸಿ, ಪ್ರತಿದಿನ ಘನತ್ಯಾಜ್ಯವನ್ನು ಸ್ವೀಕರಿಸಿ ಸಂಸ್ಕರಿಸುತ್ತಿರುತ್ತಾರೆ. ಘನತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರ ತಯಾರಿಸುವಾಗ ವಾಸನೆ ಹೊರಹೊಮ್ಮುತ್ತಿದ್ದು ಇದರಿಂದ ನೊಣ, ಸೊಳ್ಳೆಗಳು, ಹದ್ದುಗಳ ಹಾವಳಿ ಮತ್ತು ನಾಯಿಗಳ ಹಾವಳಿ ಉಂಟಾಗಿ ಇದರಿಂದಾಗಿ ಸ್ಥಳೀಯರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವುದಾಗಿ ಸ್ಥಳೀಯರು ಪ್ರತಿಭಟಿಸಿ ತ್ಯಾಜ್ಯ ವಿಲೇವಾರಿಗೆ ಅಡ್ಡಿಪಡಿಸಿರುತ್ತಾರೆ.

ಮುಂದುವರೆದು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಘಟಕದಲ್ಲಿ ತ್ಯಾಜ್ಯವು ಪೂರ್ಣವಾಗಿ ಸಂಸ್ಕರಣೆಯಾಗುತ್ತಿರುವುದಿಲ್ಲವೆಂದು ಹಾಗೂ ಲೀಚೆಟ್ ಅನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸದರಿ ಮಾವಳ್ಳಿಪುರ ಘಟಕದಲ್ಲಿ ತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸುವಂತೆ ಸೂಚಿಸಿದ್ದರ ಮೇರೆಗೆ ದಿನಾಂಕ:12-07-2012 ರಿಂದ ಸದರಿ ಘಟಕದಲ್ಲಿ ತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ. ಇದರಿಂದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿಯಲ್ಲಿ ವ್ಯತ್ಯಯ ಉಂಟಾಗಿ ತ್ಯಾಜ್ಯ ವಿಲೇವಾರಿಯು ಒಂದು ಸಮಸ್ಯೆಯಾಗಿರುತ್ತದೆ.

ಸದರಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಪುನರಾರಂಭಿಸುವ ನಿಟ್ಟಿನಲ್ಲಿ ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರು ದಿನಾಂಕ: 22-08-2012 ರಂದು ಪಾಲಿಕೆಯ ಸಭಾಂಗಣದಲ್ಲಿ ಪೂಜ್ಯ ಮಹಾಪೌರರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು, ಯಲಹಂಕ ಕ್ಷೇತ್ರದ ಶಾಸಕರು ಹಾಗೂ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಸೂಕ್ತವಾಗಿ ಅಭಿವೃದ್ಧಿಗೊಳಿಸಿ ಪುನರಾರಂಭಿಸಲು ಹಾಗೂ ಸದರಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಘಟಕದ ಸುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳನ್ನು ರೂ.800.00 ಲಕ್ಷಗಳ ಅನುದಾನದಲ್ಲಿ ಕೈಗೊಳ್ಳಲು ಸೂಚಿಸಿರುತ್ತಾರೆ.

ಅದರಂತೆ ವಿಷಯ ಸಂಖ್ಯೆ: 230/2012-13 ದಿನಾಂಕ: 30-08-2012 ರಲ್ಲಿ ಪಾಲಿಕೆಯ ಸಭೆಯಲ್ಲಿ ನಿರ್ಣಯವೊಂದನ್ನು ಕೈಗೊಂಡು ದಿನಾಂಕ:22-08-2012 ರ ಮಾನ್ಯ ಉಪ ಮುಖ್ಯ ಮಂತ್ರಿಗಳು ಸೂಚಿಸಿದಂತೆ ರೂ.800.00 ಲಕ್ಷಗಳ ಅನುದಾನ ಒದಗಿಸಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಲಿನ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸೂಚಿಸಿರುತ್ತಾರೆ.

ಮೇಲೆ ವಿವರಿಸಿರುವಂತೆ, ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಲಿನ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು, ಮಾವಳ್ಳಿಪುರ ಘಟಕದ ಸುತ್ತಲಿನ ಗ್ರಾಮಗಳ ವ್ಯಾಪ್ತಿಯನ್ನೊಳಗೊಂಡ ಯಲಹಂಕ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರು ಒಟ್ಟು ರೂ.800.00 ಲಕ್ಷಗಳ ಹದಿಮೂರು ಅಭಿವೃದ್ಧಿ ಕಾಮಗಾರಿಗಳ ಪ್ರಸ್ತಾವನೆಯನ್ನು ಪಾಲಿಕೆಗೆ ನೀಡಿರುತ್ತಾರೆ.

.......................2

ಸದರಿ ಪ್ರಸ್ತಾವನೆಯ ಕೆಳಗಿನ ಕ್ರಮ ಸಂಖ್ಯೆ-(1) ರಿಂದ (8) ಕಾಮಗಾರಿ ಸ್ಥಳಗಳನ್ನು ಪರಿಶೀಲಿಸಿ ಸ್ಥಳದ ಅವಶ್ಯಕತೆಗೆ ಅನುಗುಣವಾಗಿ ಅಂದಾಜು ಪಟ್ಟಿಯನ್ನು ಪ್ರಸಕ್ತ 2012-13ನೇ ಸಾಲಿನ ಬೆಂಗಳೂರು ವೃತ್ತ ಲೋಕೋಪಯೋಗಿ ಇಲಾಖೆ ಮತ್ತು 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಗಳ ದರಪಟ್ಟಿಯನ್ನು ಆಧರಿಸಿ ತಯಾರಿಸಲಾಗಿರುತ್ತದೆ.

| ಕ್ರ. ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 1 | ಮಾವಳ್ಳಿಪುರದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ | 15.00 |
| 2 | ಕುರುಬರಹಳ್ಳಿ ಗ್ರಾಮದ ಉಳಿಕೆ ರಸ್ತೆಗಳ ಮತ್ತು ಚರಂಡಿ ನಿರ್ಮಾಣ ಕಾಮಗಾರಿ | 17.00 |
| 3 | ರಾಮಗೊಂಡನಹಳ್ಳಿ ಗ್ರಾಮದ ರಸ್ತೆಗಳ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ | 105.00 |
| 4 | ವಡೇರಹಳ್ಳಿ ಗ್ರಾಮದ ಅಂಬಾಭವಾನಿ ಮುಖ್ಯ ರಸ್ತೆಯ ಕೆರೆಯ ಮೂಲೆಯವರೆಗಿನ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ | 21.00 |
| 5 | ವಡೇರಹಳ್ಳಿ ಮುಖ್ಯ ರಸ್ತೆಯಿಂದ ಮುನೇಶ್ವರ ನಗರದ ಮುಖ್ಯ ರಸ್ತೆ ಮತ್ತು ಮುನೇಶ್ವರ ನಗರದ ಒಳರಸ್ತೆಗಳ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ | 96.00 |
| 6 | ಮಾವಳ್ಳಿಪುರ ರಸ್ತೆಯಿಂದ ಲಿಂಗರಾಜಪುರ ಮತ್ತು ಮೈಲಪ್ಪನಹಳ್ಳಿ ಗ್ರಾಮದವರೆಗೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ | 70.00 |
| 7 | ದೊಡ್ಡಬ್ಯಾಲಕೆರೆ ಗ್ರಾಮದ ರಸ್ತೆಗಳ ಅಭಿವೃದ್ಧಿ ಕಾಮಗಾರಿ | 73.00 |
| 8 | ಹೆಸರಘಟ್ಟ ರಸ್ತೆಯಿಂದ ಸುಬೇದಾರ ಪಾಳ್ಯ ಮೂಲಕ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ರಸ್ತೆವರೆಗೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ | 233.00 |
| 9 | ಮಾವಳ್ಳಿಪುರ ಮತ್ತು ಕುರುಬರಹಳ್ಳಿ ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ ಕಾಮಗಾರಿ | 51.00 |
| 10 | ಮಾವಳ್ಳಿಪುರ ಗ್ರಾಮದಲ್ಲಿ ಕೆರೆ ಅಭಿವೃದ್ಧಿ ಕಾಮಗಾರಿ | 35.00 |
| 11 | ಮಾವಳ್ಳಿಪುರ ಗ್ರಾಮದಲ್ಲಿ ಹಿರಿಯ ಮಹಿಳಾ ಆರೋಗ್ಯ ಸಹಾಯಕಿ ಕೇಂದ್ರ **(ANM Centre)** ಅನ್ನು ನಿರ್ಮಾಣ ಕಾಮಗಾರಿ | 22.00 |
| 12 | ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಲಿನ 07 ಗ್ರಾಮಗಳಲ್ಲಿ (07 ಸಂಖ್ಯೆ) ಕುಡಿಯುವ ನೀರಿಗಾಗಿ ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸುವ ಕಾಮಗಾರಿ | 91.00 |
| | ಒಟ್ಟು | **829.00** |

ಮೇಲೆ ವಿವರಿಸಿರುವಂತೆ, ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಪುನರಾರಂಭಿಸುವ ಮೊದಲು ಮೇಲಿನ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಈಗಾಗಲೇ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಪ್ರಕ್ರಿಯೆಯಲ್ಲಿರುತ್ತದೆ.

ಒಟ್ಟಾರೆ 12 ಕಾಮಗಾರಿಗಳಲ್ಲಿ ಮೇಲ್ಕಂಡಂತೆ ಕ್ರಮ ಸಂಖ್ಯೆ-1, 2, 4, 10 ಮತ್ತು 11 ರಲ್ಲಿನ ಕಾಮಗಾರಿಗಳಲ್ಲಿ ಅಂದಾಜು ಮೊತ್ತ ರೂ.50.00 ಲಕ್ಷಗಳ ಒಳಗೆ ಇರುತ್ತದೆ. ಅದರಂತೆ ರೂ.50.00 ಲಕ್ಷಗಳ ಒಳಗೆ ಇರುವ ಕಾಮಗಾರಿಗಳಿಗೆ ಮಾನ್ಯ ಆಯುಕ್ತರವರಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಅಧಿಕಾರ ಪ್ರತ್ಯಾಯೋಜನೆ ಇರುವುದರಿಂದ, ಮಾನ್ಯ ಆಯುಕ್ತರವರು ಕ್ರಮ ಸಂಖ್ಯೆ-1, 2, 4, 10 ಮತ್ತು 11 ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ ಹಾಗೂ ಪ್ರತ್ಯೇಕ ಕಡತಗಳನ್ನು ಸೃಜಿಸಿ ಮುಂದಿನ ಪ್ರಕ್ರಿಯೆ ಚಾಲ್ತಿಗೊಳಿಸಲಾಗಿದ್ದು, ಕಾಮಗಾರಿಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 1 | ಮಾವಳ್ಳಿಪುರದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ | 15.00 |
| 2 | ಕುರುಬರಹಳ್ಳಿ ಗ್ರಾಮದ ಉಳಿಕೆ ರಸ್ತೆಗಳ ಮತ್ತು ಚರಂಡಿ ನಿರ್ಮಾಣ ಕಾಮಗಾರಿ | 17.00 |
| 4 | ವಡೇರಹಳ್ಳಿ ಗ್ರಾಮದ ಅಂಬಾಭವಾನಿ ಮುಖ್ಯ ರಸ್ತೆಯ ಕೆರೆಯ ಮೂಲೆಯವರೆಗಿನ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ | 21.00 |
| 10 | ಮಾವಳ್ಳಿಪುರ ಗ್ರಾಮದಲ್ಲಿ ಕೆರೆ ಅಭಿವೃದ್ಧಿ ಕಾಮಗಾರಿ | 35.00 |
| 11 | ಮಾವಳ್ಳಿಪುರ ಗ್ರಾಮದಲ್ಲಿ ಹಿರಿಯ ಮಹಿಳಾ ಆರೋಗ್ಯ ಸಹಾಯಕಿ ಕೇಂದ್ರ **(ANM Centre)** ಅನ್ನು ನಿರ್ಮಾಣ ಕಾಮಗಾರಿ | 22.00 |

ಉಳಿದಂತೆ ಕ್ರಮ ಸಂಖ್ಯೆ-3, 5, 6, 7, 9 ಮತ್ತು 12 ರಲ್ಲಿನ ಕಾಮಗಾರಿಯ ಅಂದಾಜು ಮೊತ್ತ ರೂ.50.00 ಲಕ್ಷಗಳ ಮೇಲ್ಪಟ್ಟು ರೂ.200.00 ಲಕ್ಷಗಳ ಒಳಗೆ ಇರುತ್ತದೆ. ಅದರಂತೆ 50.00 ಲಕ್ಷಗಳ ಮೇಲ್ಪಟ್ಟು ರೂ.200.00 ಲಕ್ಷಗಳ ಒಳಗೆ ಇರುವ ಕಾಮಗಾರಿಗಳಿಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯಿಂದ ಆಡಳಿತಾತ್ಮಕ ಅನುಮೋದನೆ ಪಡೆಯಲು ಪ್ರತ್ಯೇಕ ಕಡತವನ್ನು ಸೃಜಿಸಿ ಪ್ರಸ್ತಾವನೆ ಸಲ್ಲಿಸಲು ಕ್ರಮ ಕೈಗೊಳ್ಳಲಿದ್ದು, ಕಾಮಗಾರಿಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 3 | ರಾಮಗೊಂಡನಹಳ್ಳಿ ಗ್ರಾಮದ ರಸ್ತೆಗಳ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ | 105.00 |
| 5 | ವಡೇರಹಳ್ಳಿ ಮುಖ್ಯ ರಸ್ತೆಯಿಂದ ಮುನೇಶ್ವರ ನಗರದ ಮುಖ್ಯ ರಸ್ತೆ ಮತ್ತು ಮುನೇಶ್ವರ ನಗರದ ಒಳರಸ್ತೆಗಳ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ | 96.00 |
| 6 | ಮಾವಳ್ಳಿಪುರ ರಸ್ತೆಯಿಂದ ಲಿಂಗರಾಜಪುರ ಮತ್ತು ಮೈಲಪ್ಪನಹಳ್ಳಿ ಗ್ರಾಮದವರೆಗೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ | 70.00 |
| 7 | ದೊಡ್ಡಬ್ಯಾಲಕೆರೆ ಗ್ರಾಮದ ರಸ್ತೆಗಳ ಅಭಿವೃದ್ಧಿ ಕಾಮಗಾರಿ | 73.00 |
| 9 | ಮಾವಳ್ಳಿಪುರ ಮತ್ತು ಕುರುಬರಹಳ್ಳಿ ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ ಕಾಮಗಾರಿ | 51.00 |
| 12 | ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಲಿನ 07 ಗ್ರಾಮಗಳಲ್ಲಿ (07 ಸಂಖ್ಯೆ) ಕುಡಿಯುವ ನೀರಿಗಾಗಿ ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸುವ ಕಾಮಗಾರಿ | 91.00 |

ಮುಂದುವರೆದು ಕ್ರಮ ಸಂಖ್ಯೆ-(8) ರ ಕಾಮಗಾರಿಯ ಅಂದಾಜು ಮೊತ್ತವು ರೂ.233.00 ಲಕ್ಷಗಳಾಗಿದ್ದು, ಅದರಂತೆ 200.00 ಲಕ್ಷಗಳ ಮೇಲ್ಪಟ್ಟು ರೂ.500.00 ಲಕ್ಷಗಳ ಒಳಗೆ ಇರುವ ಕಾಮಗಾರಿಗಳಿಗೆ ಪಾಲಿಕೆಯ ಕೌನ್ಸಿಲ್ ಸಭೆಯಿಂದ ಆಡಳಿತಾತ್ಮಕ ಅನುಮೋದನೆ ಪಡೆಯಬೇಕಾಗಿದೆ. ಕಾಮಗಾರಿಯ ವಿವರ ಕೆಳಕಂಡಂತೆ ಇರುತ್ತದೆ.

| ಕ್ರ ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 8 | ಹೆಸರಘಟ್ಟ ರಸ್ತೆಯಿಂದ ಸುಬೇದಾರ ಪಾಳ್ಯ ಮೂಲಕ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ರಸ್ತೆವರೆಗೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ | 233.00 |

ಮೇಲೆ ವಿವರಿಸಿರುವಂತೆ, ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಪುನರಾರಂಭಿಸುವ ಮೊದಲು ಮೇಲಿನ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಈಗಾಗಲೇ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಪ್ರಕ್ರಿಯೆಯಲ್ಲಿರುತ್ತದೆ.

......................4

ಮೇಲ್ಕಂಡ ವಿವರಗಳ ಹಿನ್ನೆಲೆಯಲ್ಲಿ, ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) ರವರ ದಿನಾಂಕ:07-02-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:19-02-2013ರ ನಿರ್ಣಯ.

1. ಕ್ರಮ ಸಂಖ್ಯೆ:(8) ರಲ್ಲಿನ ಕಾಮಗಾರಿಯ ಅಂದಾಜು ಮೊತ್ತ ರೂ.233.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ.
2. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.233.00 ಲಕ್ಷಗಳಿಗೆ ಪಾಲಿಕೆಯ 2012-13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ2223 **Developmental Works around landfill sites** ಅಡಿಯಲ್ಲಿ ಕಾಮಗಾರಿ ಸಂಖ್ಯೆ ನೀಡಲು ಅನುಮೋದನೆ.
3. ಸದರಿ ಕಾಮಗಾರಿಗೆ ಅಗತ್ಯವಿರುವ ಅನುಮೋದನೆಯನ್ನು ಸಕ್ಷಮ ಪ್ರಾಧಿಕಾರದಿಂದ ನಿರೀಕ್ಷಿಸಿ ಈಗಾಗಲೇ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವುದನ್ನು ಸ್ಥಿರೀಕರಿಸಿ ಅನುಮೋದನೆ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಮಾವಳ್ಳಿಪುರ ಘನತ್ಯಾಜ್ಯ ಘಟಕವನ್ನು ಶೀಘ್ರವಾಗಿ ಪುನರಾರಂಭಿಸಬೇಕಾಗಿರುವುದರಿಂದ ಹಾಗೂ ಪ್ರಸ್ತಾಪಿತ ಎಲ್ಲಾ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಹಾಲಿ ಕರೆದಿರುವ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಕಾಮಗಾರಿಗಳನ್ನು ಪ್ರಾರಂಭಿಸಲು ವಿಳಂಬವಾಗುವ ಸಾಧ್ಯತೆ ಇರುವ ಹಿನ್ನಲೆಯಲ್ಲಿ, ಕರೆದಿರುವ ಟೆಂಡರ್‌ಗಳನ್ನು ರದ್ದುಪಡಿಸಿ, ಸದರಿ ಕಾಮಗಾರಿಗಳನ್ನು ಈ ಕೂಡಲೇ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ನಿರ್ವಹಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಮಾವಳ್ಳಿಪುರ ಘನತ್ಯಾಜ್ಯ ಘಟಕವನ್ನು ಶೀಘ್ರವಾಗಿ ಪುನರಾರಂಭಿಸಬೇಕಾಗಿರುವುದರಿಂದ ಹಾಗೂ ಪ್ರಸ್ತಾಪಿತ ಎಲ್ಲಾ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಹಾಲಿ ಕರೆದಿರುವ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಕಾಮಗಾರಿಗಳನ್ನು ಪ್ರಾರಂಭಿಸಲು ವಿಳಂಬವಾಗುವ ಸಾಧ್ಯತೆ ಇರುವ ಹಿನ್ನಲೆಯಲ್ಲಿ, ಕರೆದಿರುವ ಟೆಂಡರ್‌ಗಳನ್ನು ರದ್ದುಪಡಿಸಿ, ಸದರಿ ಕಾಮಗಾರಿಗಳನ್ನು ಈ ಕೂಡಲೇ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ನಿರ್ವಹಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು